ಕನ್ನಡನುಡಿ

ಸಂಪುಟ ೧೫ ಜನವರಿ ಸಂಚಿಕೆ ೧

ವಾರ್ಷಿಕ ಚಂದಾ: ಅಂಚೆ ವೆಚ್ಚ ಸೇರಿ ರೂ. ೬

—

ಸಂಪಾದಕರು:

ಎಂ. ಆರ್. ಶ್ರೀನಿವಾಸಮೂರ್ತಿಗಳು

—

ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು

೧೯೫೨

ವಿಷಯಸೂಚಿಕೆ

೧. ಪ್ರಾರ್ಥನೆ

೨. ಸೂಕ್ತಿಸುಧೆ, ಸುಭಾಷಿತಗಳು

೩. ಭಾಷಾವಿಹಾರ : (ಮುತ್ತಯ್ದೆ-ಅಯ್ದೆ) ಶ್ರೀ ದೇಸಾಯಿ ಪಾಂಡುರಂಗರಾವ್, ಎಂ.ಎ.

೪. ವಿದ್ಯಾರ್ಥಿಗಳ ಗುರಿ : ಶ್ರೀ ಜಿ. ಪಿ. ದಾಸೇಗೌಡ, ಬಿ.ಎ.

೫. ಕವಿ ರುದ್ರಭಟ್ಟನ ಜನ್ಮಸ್ಥಳವಾವುದು ? ಶ್ರೀ ದೊಡ್ಡಮನೆ ರಾಘವೈಯಂಗಾರ್.

೬. ಗಣೇಶನ ಲಾವಣಿ : ಲಾವಣಿ ವಿದ್ವಾನ್ ಆನೇಕಲ್ ಶ್ರೀ ಎಸ್. ನಂಜಪ್ಪನವರು.

೭. ಅನುದಿನದ ಜೀವನ : (ಕವಿತೆ) ಶ್ರೀ ಪಿ. ಸುಬ್ಬರಾಯ.

೮. ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಉಪನ್ಯಾಸ.:
ಸಂಗ್ರಹಕಾರರು : ಗಮಕಿ ಶ್ರೀ ಎಂ. ರಾಘವೇಂದ್ರರಾಯರು.

೯. ಭ್ರಾಂತಿ ವಿನೋದ (ಷೇಕ್ಸ್‌ಪಿಯರ್ ನಾಟಕಕಥೆ)
ಆಸ್ಥಾನ ವಿದ್ವಾನ್ ಶ್ರೀ ಬೆಳ್ಳಾವೆ ನರಹರಿಶಾಸ್ತ್ರಿ.

೧೦. ಪುಸ್ತಕ ಪರಿಚಯ :– ಶ್ರೀ ಜಿ. ವರದರಾಜರಾವ್, ಎಂ.ಎ.

೧೧. ಸಾಹಿತ್ಯ ಪರೀಕ್ಷೆಯ ಫಲಿತಾಂಶ

೧೨. ಸಂಪಾದಕೀಯ

ಮೈಸೂರು ವಿದ್ಯಾಖಾತೆಯವರಿಂದ ಟಿ. ಬಿ. ಸಿ. 15/50-51 (ತಾ|| 24-11-50) ನಿರೂಪದ ಪ್ರಕಾರ 'ಕನ್ನಡ ನುಡಿ' ಯನ್ನು ಸಂಸ್ಥಾನದ ಎಲ್ಲಾ ಹೈಸ್ಕೂಲು, ಮಿಡಲ್ ಸ್ಕೂಲು ಮತ್ತು ಟ್ರೈಯಿನ್ನಿಂಗ್ ಸಂಸ್ಥೆಗಳ ಪುಸ್ತಕ ಭಂಡಾರಗಳಿಗೆ ತರಿಸಿಕೊಳ್ಳಬಹುದೆಂದು ಮಂಜೂರಾಗಿದೆ. ರೂರಲ್ ಡೆವಲಪ್‌ಮೆಂಟ್ ಕಮಿಷನರ್ ಅವರ ನಂ.ಆರ್.ಡಿ.ಆರ್. 7, ಸಿ.2915/50-51 ನೆಯ ಪ್ರಕಾರ "ಕನ್ನಡ ನುಡಿ" ಸಂಸ್ಥಾನದ ಎಲ್ಲಾ ಗ್ರಾಮಪಂಚಾಯಿತಿಗಳಿಗೂ ತರಿಸಕೊಳ್ಳಬಹುದೆಂದು ಮಂಜೂರಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಸಾಮಾನ್ಯ ಸದಸ್ಯರಲ್ಲಿ ವಿಜ್ಞಾಪನೆಗಳು :

ಮಾನ್ಯರೇ,


ತಮ್ಮ ಸದಸ್ಯತ್ವದ ಚಂದಾ ಈ ವರ್ಷ ಡಿಸೆಂಬರ್ ೩೧ನೆಯ ತಾರೀಕಿಗೆ ಮುಗಿಯುತ್ತದೆ. ೧೯೫೨ನೆಯ ಇಸವಿಯ ಚಂದಾ ಆರು ರೂಪಾಯಿಗಳನ್ನು (ರೂ. ೬-೦-೦) ೧೯೫೨ನೆಯ ಜನವರಿ ತಿಂಗಳು ಆಖೈರೊಳಗಾಗಿ ಕಳಿಸಿ ಉಪಕಾರ ಮಾಡಬೇಕೆಂದು ಪ್ರಾರ್ಥನೆ.

ಎರಡನೆಯದಾಗಿ, ತಮ್ಮ ಊರಿನಲ್ಲಿ ತಾವು ಇಬ್ಬರು ಗಣ್ಯರನ್ನಾದರೂ ಪರಿಷತ್ತಿಗೆ ಸಾಮಾನ್ಯ ಸದಸ್ಯರಾಗಿ ಸೇರಿಸಿ ಉಪಕಾರ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇತಿ

ಬೆಂಗಳೂರು
೧೯-೧-೧೯೫೨.

ಕಾ. ಸ. ಧರಣೇಂದ್ರಯ್ಯ
ಕಾರ್ಯದರ್ಶಿಗಳು.



ಪಂಢರಪುರದ ಪಾಂಡುರಂಗವಿಠ್ಠಲನ ಮೂರ್ತಿ

ವಿದ್ಯಾರತ್ನ ಶ್ರೀ ಆರ್. ಎಸ್. ಪಂಚಮುಖಿಯವರ ಕೃಪೆಯಿಂದ

ಕನ್ನಡನುಡಿ



ಸಂಪುಟ ೧೫ | ಜನವರಿ – ೧೯೫೨ | ಸಂಚಿಕೆ ೧

ಪ್ರಾರ್ಥನೆ

ರಾಗ : ಪೂರ್ವಕಲ್ಯಾಣಿ — ತಾಳ : ಅಟತಾಳ

ಭಕುತಿ ಸುಖವೊ ರಂಗ ಮುಕುತಿ ಸುಖವೊ ॥ಪ॥
ಭಕುತಿ ಸುಖವೊ ಮುಕುತಿ ಸುಖವೊ
ಯುಕುತಿವಂತರೆಲ್ಲ ಹೇಳಿ ಅ. ಪ.

೧

ಭಕುತಿಮಾಡಿದ ಪ್ರಹ್ಲಾದ
ಮುಕುತಿಯನ್ನು ಪಡೆದುಕೊಂಡ
ಮುಕುತಿ ಬೇಡಿದ ಧ್ರುವರಾಯ
ಯುಕುತಿಯಿಂದ ಹರಿಯ ಕಂಡ

೨

ಭಕುತಿಮಾಡಿದ ಅಜಾಮಿಳನು
ಅಂತ್ಯದಲ್ಲಿ ಹರಿಯ ಕಂಡ
ಮುಕುತಿ ಬೇಡಿದ ಕರಿರಾಜ
ದುರಿತಗಳನು ಕಳೆದುಕೊಂಡ

೩

ಭಕುತಿ ಮುಕುತಿದಾತ ನಮ್ಮ
ಲಕುಮಿಯರಸ ವಿಜಯವಿಠಲ
ಶಕುತನೆನುತ ತಿಳಿದು ನಿತ್ಯ
ಭಕುತಿಯಿಂದ ಭಜನೆ ಮಾಡಿರೊ

—ಶ್ರೀ ವಿಜಯದಾಸರು

ಬ್ರಹ್ಮ

ಕತ್ತುರಿಗಂಪು ಕೈಸುರಿಗೆ ಹೊನ್ನೊಳಿ ಹಟ್ಟಿಗೆ ಸಣ್ಣ ಗಗ್ಗರಂ
ಮುತ್ತಿನ ದಂಡೆ ತೋಳವಣಿ ಬಯ್ತಲೆ ನೆಯ್ದಲೆ ಕಾಲಜನ್ನುರಂ ॥
ಚಿತ್ತದ ಸೆಂಡುಕೋಲ್ ಮೊರೆವ ದೆಂತದ ಪಾವುಗೆ ಭೃಂಗದೋಲೆ ಮೆ
ಯ್ವತ್ತಿರೆ ರಾತ್ರಿಯೊಳ್ ಸುಳಿವ ಬ್ರಹ್ಮಯಕ್ಷಿಗೆಮಗಿಪ್ಪ ಸಿದ್ಧಿಯುಂ ॥

ಸರಸ್ವತಿ

ನೀರಜಜಾತ ವಿಸ್ತರಿಸಿದಂಡಮುಮಂ ಮಣಿಮಾಲೆಯಾಗಿ ಬಿ
ಸ್ತಾರಿಸಿ ಹಸ್ತದಿಂ ಪಿಡಿದು ತನ್ನ ಸರಣ್ಬುಗುವರ್ಗೆ ಲೇಸುಮಂ ॥
ಪ್ರೇರಿಸಲೋಸುಗಂ ಜಪಿಸುತಿರ್ಪಳಿರುಳ್ ಪಗಲಾವಳೊರ್ವಳಾ
ಭಾರತಿ ನಮ್ಮ ಜಿಹ್ವೆಯೊಳನಾವಿಳದಿಂದಿರುತಿರ್ಕೆ ಸಂತತಂ ॥

(ದಾವಣಗೆರೆ ಮತ್ತು ಅರಸೀಕೆರೆ ಜೈನ ಶಾಸನಗಳಿಂದ)

ಸೂಕ್ತಿ ಸುಧೆ

ಕಾಲ್ಪುರವಾಗೆ ಕಾವ್ಯರಸಮರ್ಥಮುಮಕ್ಕರಮುಂ ಪ್ರತೀತಿಯಂ
ಮಾಲ್ಪಿನೆಗಂ ಜಲಕ್ಕನಿರೆ ಪೇಳದೆ ಕೆಮ್ಮನೊಱಂಟುವೇಲ್ದ ಚಿಃ ।
ನೋಲ್ಪದೆ ಮುಯ್ವನಾ ಕೃತಿಗೆ ಪಂಜಿಕೆವೇಲ್ಪುದದರ್ಕೆ ಟಿಪ್ಪಣಂ
ಬೇಲ್ಪುದು ಟೀಕುವೇಲ್ಪುದೆನೆ ಪೇಲ್ದವನುಂ ಕವಿಯೆಂಬ ಲೆಕ್ಕಮೇ ॥

— ಕಾವ್ಯಾವಲೋಕನಂ

ಮೃದುಪದಬಂಧಮುಂ ಬಗೆಯ ಭಾವದ ವೈಸಿರಿಯುಂ ರಸಪ್ರವಾ
ಹದ ನೆಲೆವೆರ್ಚನಿಂಬಱದು ಭಾವಿಸಿ ಭಾವಿಸಿ ಮೆಚ್ಚಿ ಮೆಚ್ಚಿ ಪೊ
ಣ್ಮಿದ ಪುಳಕಂಗಳಿಂ ನಯನದೊಳ್ ಕರೆಗಣ್ಮಿದ ಹರ್ಷಬಾಷ್ಪವ
ರ್ಷದಿನನುರಾಗಮಂ ಪಡೆವ ಸಜ್ಜನಸಂಸ್ತವಮೊಂದೆ ಸಾಲದೇ

— ಪಂಪ ರಾಮಾಯಣಂ

ಸುಭಾಷಿತ

ತರ್ಕ ವಿದ್ವಾಂಸರ ವಾಕ್ಕು ಆ ಶಾಸ್ತ್ರಾರ್ಥವನ್ನು ವಿಚಾರ ಮಾಡುವಾಗ (ಅವಚ್ಛೇದಕ, ಅವಚ್ಛಿನ್ನ) ಮುಂತಾದ ಕಠಿನ ಶಬ್ದಗಳನ್ನೇ ಒಳಗೊಂಡಿರುತ್ತದೆ. ಅವರು ಕವಿಗಳೂ ಆಗಿದ್ದರೆ ಅವರ ವಾಕ್ಕು ಕವಿತಾಪದ್ಧತಿಯಲ್ಲಿ ಬಹು ಮೃದುವಾಗಿಯೇ ಇರುತ್ತದೆ. ಕಠಿನವಾದದು ಮೃದುವಾಗಿಯೂ ಇರುವುದು ಹೇಗೆ? ದೈತ್ಯೇಂದ್ರನೆಂಬ ಬೆಟ್ಟವನ್ನು ಸೀಳುವುದರಲ್ಲಿ ವಜ್ರಾಯುಧದಂತಿದ್ದ ನೃಸಿಂಹನ ಉಗುರು, ದಯಿತೆಯಾದ ಶ್ರೀದೇವಿಯ ಕಪೋಲತಲದಲ್ಲಿ ತಿಲಕವನ್ನು ತಿದ್ದುವಾಗ ಕೋಮಲವಾಗಿರುವುದೇ ಇದಕ್ಕೆ ಉದಾಹರಣೆ.

ತರ್ಕೇಷು ಕರ್ಕಶತರಾಃ ಸ್ಯುರಥಾಪಿ ಪುಂಸಾಂ
ಕಾಲೇ ಭವಂತಿ ಮೃದವಃ ಕವಿತಾಸು ವಾಚಃ ।
ದೈತ್ಯೇಂದ್ರಶೈಲಕುಲಿಶಂ ದಯಿತಾಕಪೋಲೇ
ನಾಥಸ್ಯ ಕೋಮಲಮುದಾಹರಣಂ ನಖಂ ನಃ ॥

ಸ್ವಕೀಯವಾದ ವಾಗ್ವಿಲಾಸಗಳಿಂದ ಹೆಮ್ಮೆಗೊಂಡರೂ ಇತರರ ರಸವಾಕ್ಕುಗಳಿಂದ ತೃಪ್ತಿಪಡುವ ಸತ್ಪುರುಷರು ಎಷ್ಟು ಮಂದಿ ಇದ್ದಾರೆ? ರಸಾಲವೃಕ್ಷವು (ಮಾವಿನ ಮರ) ತನ್ನ ಹೂಗಳಿಂದ ಜಿನುಗುವ ಜೇನಿನಿಂದ ತನ್ನ ಪಾತಿಯನ್ನು ತುಂಬಿದರೂ, ಇತರರು ಕನಕ ಕಲಶಗಳಿಂದ ಸುರಿಯುವ ಜಲವನ್ನು ಬಯಸದಿರುತ್ತದೆಯೆ?

ಅಪಿ ಮುದಮುಪಯಾಂತೋ ವಾಗ್ವಿಲಾಸೈಃ ಸ್ವಕೀಯೈಃ
ಪರಭಣಿತಿಷು ತೃಪ್ತಿಂ ಯಾಂತಿ ಸಂತಃ ಕಿಯಂತಃ ।
ನಿಜಘನ ಮಕರಂದಸ್ಯಂದಪೂರ್ಣಾಲವಾಲಃ
ಕನಕಕಲಶಸೇಕಂ ನೇಹತೇ ಕಿಂ ರಸಾಲಃ ॥

ಭಾಷಾವಿಹಾರ

ಮುತ್ತಯ್ದೆ—ಅಯ್ದೆ

ಶ್ರೀ. ದೇಸಾಯಿ ಪಾಂಡುರಂಗರಾಯರು, ಎಂ.ಎ. ನೀಲಗಿರಿ

ಹಿಂದೆ ‘ಕನ್ನಡ ನುಡಿ’ಯಲ್ಲಿ ಭಾಷಾವಿಹಾರ ಎಂಬ ಲೇಖನಮಾಲೆಯನ್ನು ಮುಂದುವರಿಸಿ ಕೆಲವು ಶಬ್ದಗಳ ನಿಷ್ಪತ್ತಿ, ಅನ್ಯಭಾಷಾಸಂಬಂಧ, ಮುಂತಾದ ವಿಷಯಗಳನ್ನು ಚರ್ಚಿಸಿದ್ದೇನೆ. ಈ ಚರ್ಚೆಗಳು ಸೂಚನಾತ್ಮಕವಾಗಿದ್ದು ವಿಚಾರಪ್ರಚೋದನವೇ ಅವುಗಳ ಉದ್ದೇಶವೆಂಬ ಮಾತನ್ನು ಈ ಚರ್ಚಾಲೇಖನಗಳ ಪ್ರಾರಂಭದಲ್ಲಿ ಸ್ಪಷ್ಟಪಡಿಸಿದ್ದೇನೆ. ಈ ಲೇಖಮಾಲೆಯಲ್ಲಿ ‘ಮುತ್ತೈದೆ’ ಎಂಬ ಶಬ್ದಚರ್ಚೆ ‘ನುಡಿಯ’ಯ ೮–೧೦–೧೯೪೮ ಈ ಸಂಚಿಕೆಯಲ್ಲಿ ಪ್ರಕಟವಾಗಿದೆ. ಇದೇ ಶಬ್ದವನ್ನು ಎತ್ತಿಕೊಂಡು ಶ್ರೀ ರಂ. ಶ್ರೀ. ಮುಗಳಿಯವರು ‘ಪ್ರಜಾಮತ’, ೧೯೪೯ ದೀಪಾವಳಿ ಸಂಚಿಕೆಯಲ್ಲಿ ಕೆಲವು ವಿಚಾರಗಳನ್ನು ಪ್ರದರ್ಶಿಸಿದ್ದಾರೆ. ಅವರಾ ಲೇಖನದ ಮೂಲಕ ಈ ವಿಷಯವನ್ನು ಇನ್ನಿಷ್ಟು ವಿಚಾರಪೂರ್ವಕ ವಿಮರ್ಶಿಸುವ ಅಗತ್ಯವು ತೋರಿದುದರಿಂದ ಪುನಃ ಈ ಚರ್ಚೆಗೆ ನಾನಿಲ್ಲಿ ಕೈಹಾಕಿದ್ದೇನೆ.

ಇಲ್ಲಿ ನಾವು ಮುಖ್ಯವಾಗಿ ಪರಿಶೀಲಿಸಬೇಕಾದುದು **ಅಯ್ದೆ** ಎಂಬ ಪದದ ಮೂಲ. ಈ ಸಂದರ್ಭದಲ್ಲಿ ವ್ಯುತ್ಪತ್ತಿಗಳನ್ನು ಪರಾಮರ್ಶಿಸಬೇಕಾಗಿದೆ. ಇವುಗಳಲ್ಲಿ ಮೊದಲಿನ ಎರಡನ್ನು ಶ್ರೀ ಮುಗಳಿಯವರು ಎತ್ತಿ ಹಿಡಿದಿದ್ದಾರೆ. ಮೂರನೆಯದು ನಾನು ಹಿಂದೆ ಸೂಚಿಸಿದುದು. ಅವುಗಳ ವಿಚಾರವು ಹೀಗೆ:

೧ **ಅಯ್ದೆ** ಎಂಬುದರ ಮೂಲ ಸಂಸ್ಕೃತ ಅಚಿರಾ. ಇದರ ತದ್ಭವ ಅಯಿರೆ, ಅಯ್ರೆ, ಅಯ್ದೆ. ಈ ಅಂಶವು ಕಿಟೆಲ್ ಕೋಶದಲ್ಲಿ ನಿರ್ದಿಷ್ಟವಾಗಿದೆ. ಈ ವ್ಯುತ್ಪತ್ತಿ ನನ್ನ ದೃಷ್ಟಿಯಿಂದ ಆಕ್ಷೇಪಾರ್ಹವಾಗಿದೆ. ಅಯ್ದೆ ಎಂದರೆ ಪತಿಯುಳ್ಳವಳು; ‘ಹೊಸದಾಗಿ ಮದುವೆಯಾದವಳು’ ಎಂಬುದು ಅದರ ಅರ್ಥವಲ್ಲ. ಒಂದುಪಕ್ಷ ಹಾಗೆ ಅರ್ಥವಿದೆ ಎಂದು ಇಟ್ಟುಕೊಂಡರೂ ಸಂಸ್ಕೃತ ಸಾಹಿತ್ಯದಲ್ಲಿ ‘ಹೊಸದಾಗಿ ಮದುವೆಯಾದವಳು’ ಎಂಬ ಅರ್ಥದಲ್ಲಿ ಅಚಿರಾ ಶಬ್ದದ ಪ್ರಯೋಗವು ಸಿಕ್ಕುವುದಿಲ್ಲ. ಆದುದರಿಂದ ಅಯ್ದೆ ಎಂಬುದರ ಮೂಲ ಅಚಿರಾ ಎಂದು ಒಪ್ಪುವುದು ಕಷ್ಟ. ಈ ಸಂಗತಿಯನ್ನು ಕಿಟೆಲ್‌ರಾದರೂ ಲಕ್ಷಿಸಿರಬೇಕು. ಅದಕ್ಕಾಗಿಯೆ ಅವರು ತಾವೇ ಮೊದಲು ಸೂಚಿಸಿದ ಸಂಸ್ಕೃತದ ಸರಲಮಾರ್ಗವನ್ನು ಬಿಟ್ಟು ಪ್ರಾಕೃತದ ನೆರಳಿಗೆ ಹೋಗಿ, ‘ಅಯಿರ ಜುವೈ’ ಎಂಬ ಮಾತನ್ನು ಸಹಾಯಕ್ಕೆ ತೆಗೆದುಕೊಂಡಿದ್ದಾರೆ. ಪ್ರಾಕೃತದ ಈ ಕವಲುದಾರಿಯಿಂದಲೂ ಉದ್ದೇಶವು ಸಫಲವಾಗುವಂತಿಲ್ಲ. ಈ ಪ್ರಾಕೃತ ದಾರಿಯಂತೆ ಅಯ್ದೆ ಎಂಬುದರ ಮೂಲ ಅಯಿರಜುವೈ. ಈ ಪದದ ತತ್ಸಮ ಅಚಿರಯುವತಿ; ಇದರ ಪರ್ಯಾಯ ನವವಧೂ. ಇದು ಕಿಟೆಲ್ ಕೋಶದಲ್ಲಿಯ ಸೂಚನೆ. ಆದರೆ ಯುವತಿ ಎಂಬ ಮಾತಿಗೆ ‘ಮದುವೆ ಯಾದವಳು’ ಎಂದು ನೇರವಾಗಿ ಅರ್ಥ ಮಾಡುವುದು ಉಚಿತವಲ್ಲ. ಪ್ರಾಕೃತ ಭಾಷೆಗಳಲ್ಲಿ ‘ಅಚಿರ ಜುವ ಇ’ (ಹೇಮಚಂದ್ರನ ದೇಶೀನಾಮಮಾಲಾ, ೧–೧೮ ಈ ಪದ್ಯದ ಟೀಕೆ), ‘ಅಯುಜರೇವ ಇ’ ಮತ್ತು ‘ಅಇರಜುವಇ’ (ಪ್ರಾಕೃತ ಶಬ್ದ ಮಹಾರ್ಣವ ಕೋಶ), ಈ ಪದಗಳು ದೊರೆಯುತ್ತವೆ. ಆದರೆ ನಮಗೆ ಬೇಕಾದುದು ಅಚಿರಾ ಎಂಬುದರ ತದ್ಭವವಾದ ಅಇರಾ ಎಂಬ ನೇರವಾದ ಪದ. ಇದು ಪ್ರಾಕೃತದಲ್ಲಿ ಸಿಕ್ಕುವುದಿಲ್ಲ. ಇದರ ಮೂಲವಂತೂ ಸಂಸ್ಕೃತದಲ್ಲಿ ಇಲ್ಲವೇ ಇಲ್ಲ. ಇಂತು ಮೂಲಾಧಾರವೇ ಇಲ್ಲದೆ ಅಚಿರಾ–ಅಯಿರಾ–ಅಯಿರೆ–ಅಯ್ರೆ–ಅಯ್ದೆ ಎಂಬ ವ್ಯುತ್ಪತ್ತಿಕ್ರಮವನ್ನು ಸಾಧಿಸುವ ಬಗೆ ಯಾವುದು? ಈ ಆಕ್ಷೇಪಣೆ ಸಮರ್ಪಕವಾಗಿದ್ದಲ್ಲಿ ಅಯ್ದುದಾಳಿ, ಐರದಾಳಿ, ಅಯದಾಳಿ, ಎಂಬಂತಹ ಪ್ರಯೋಗಗಳ ನಿಷ್ಪತ್ತಿ ಯಾವುದು?

೨ ಅವಿಧವೆ ಎಂಬುದರಿಂದ **ಅಯ್ದೆ** ಬಂದಿರಬಹುದು. ಅಯ್ದೆ ಇದರ ಇನ್ನೊಂದು ರೂಪವಾದ ಆಯ್ದುವೆ ಎಂಬ ಪದವು ಕಿಟೆಲ್ ಕೋಶದಲ್ಲಿ ಸೂಚಿತವಾಗಿದೆ. ಇದು ಅವಿಧವೆ ಎಂಬ ಮಾತಿಗೆ ಹತ್ತಿರವಾಗುತ್ತದೆ. ಒಂದರಿಂದ ಇನ್ನೊಂದು ಬಂದಿರುವುದು ಸಂಭವನೀಯ

ವಾಗಿದೆ. ಸುಮಂಗಲೆ ಎಂಬ ಅರ್ಥದಲ್ಲಿ ಅವಿಧವಾ ಎಂಬ ಮಾತಿನ ಪ್ರಯೋಗಗಳು ಸಂಸ್ಕೃತ ಸಾಹಿತ್ಯದಲ್ಲಿ ದೊರೆಯುತ್ತಿದ್ದು ಅವುಗಳಲ್ಲಿ ಕೆಲವನ್ನು ಶ್ರೀ ಮುಗಳಿಯವರು ಉದಾಹರಿಸಿದ್ದಾರೆ. ಬಂಗಾಲಿಯಲ್ಲಿ ಸುಮಂಗಲೆಗೆ ಸಧವಾ ಎನ್ನುವರು. ಸಧವಾ ಎನ್ನದೆ ಅವಿಧವಾ ಎನ್ನುವುದು ನಮಗೀಗ ವಿಚಿತ್ರವಾಗಿ ತೋರಿದರೂ ಹಿಂದಿನ ಕಾಲದಲ್ಲಿ ಇದೊಂದು ಶಿಷ್ಟಸಮ್ಮತ ಪ್ರಯೋಗವಾಗಿರಬೇಕು. ಎರಡು ನಿಷೇಧಗಳ ಮೂಲಕ ಸಧವಾ ಎನ್ನುವುದಕ್ಕಿಂತ ಪ್ರಬಲವೆಂಬ ಕಾರಣದಿಂದ ಅವಿಧವಾ ಎಂಬ ಮಾತು ಪ್ರಶಸ್ತಿಯನ್ನು ಪಡೆದಿರಬಹುದು. ಅವಿಧವಾ ಎಂಬ ಮಾತು ಪ್ರಾಚೀನ ಶಾಸನಗಳಲ್ಲಿಯೂ ಕಾಣಿಸಿಕೊಳ್ಳುತ್ತದೆ. ಮೂರನೆಯ ಶತಮಾನದ ನಾಗಾರ್ಜುನಕೊಂಡದ ಒಂದು ಪ್ರಾಕೃತ ಶಾಸನದಲ್ಲಿ[೧] ಇಕ್ಷ್ವಾಕುಕುಲದ ಖಂಡವುಲಾ ಎಂಬ ಮಹಾರಾಣಿಯನ್ನು ಅವಿಧವಾ ಮತ್ತು ಜೀವಪುತಾ (ಜೀವತ್ ಪುತ್ರಾ) ಎಂದು ಗೌರವಪೂರ್ವಕ ವರ್ಣಿಸಿದೆ. ಪ್ರಾಚೀನ ಕನ್ನಡ ಶಾಸನ ಮತ್ತು ಸಾಹಿತ್ಯದಲ್ಲಿ ಅಯ್ದೆ ಎಂಬ ರೂಪುವು ಮಾತ್ರ ದೊರೆಯುತ್ತದೆ; ಅಯ್ದುವೆ ಎನ್ನುವುದು ದೊರೆಯುವುದಿಲ್ಲ. ತೆಲುಗಿನಲ್ಲಿ ಐದುವ ಎಂಬ ರೂಪವಿದೆ. ಇದನ್ನು ಅಯ್ದುವೆಗೆ ಸಮಾನವೆಂದು ಗಣಿಸಬಹುದು. ಏಕೆಂದರೆ ತೆಲುಗಿನಲ್ಲಿ ಎಕಾರಕ್ಕೆ ಅಕಾರವು ಉಂಟಾಗುತ್ತದೆ. ಈ ಸಂದರ್ಭದಲ್ಲಿ ಅವಿಧವಾನವಮೀ ಎಂಬುದು ಬಳಕೆಯ ಮಾತಿನಲ್ಲಿ ಐದಾನವಮಿ ಎಂದಾಗುತ್ತಿದ್ದುದನ್ನು ಶ್ರೀ ಮುಗಳಿಯವರು ಲಕ್ಷಿಸಿದುದು ಗಮನಾರ್ಹವಾಗಿದೆ.

೩ ಆರ್ಯ ಇದರ ತದ್ಭವ ಅಯ, ಅಯ್. ಇದರೊಂದಿಗೆ ದೆ ಎಂಬ ಪ್ರತ್ಯಯವು ಸೇರಿಕೊಂಡು ಅಯ್ದೆ ಎಂಬ ಪದವು ಉಂಟಾಗಿರಬಹುದು. ಈ ನನ್ನ ಸೂಚನೆಗೆ ಶ್ರೀ ಮುಗಳಿಯವರು ಕೆಲವು ಬಾಧಕಗಳನ್ನು ತೋರಿಸಿದ್ದಾರೆ. ಅವುಗಳನ್ನು ಇಲ್ಲಿ ಪರಾಮರ್ಶಿಸುವೆ. (ಅ) ಆರ್ಯ ಎಂಬ ಮಾತಿಗೆ ಪತಿ ಎಂಬ ಅರ್ಥ ಸಂಸ್ಕೃತ ಸಾಹಿತ್ಯದಲ್ಲಿ ದೊರೆಯುವುದಿಲ್ಲ. ಪತಿ ಎಂದು ಹೇಳಲು ಆರ್ಯಪುತ್ರ ಎಂಬ ಪ್ರಯೋಗವು ಸಿಕ್ಕುತ್ತದೆ. ಈ ಆಕ್ಷೇಪಣೆ ಸಾಧುವಾಗಿಲ್ಲ. ಆರ್ಯಪುತ್ರ ಎಂಬ ಪದವು ಹೆಚ್ಚಾಗಿ ನಾಟಕೀಯ ಪ್ರಯೋಗವಾಗಿದೆ. ಆರ್ಯ ಎಂಬ ಮಾತಿಗೆ master, owner ಎಂಬರ್ಥವು ಸಂಸ್ಕೃತ ಕೋಶದಲ್ಲಿ ನಿರ್ದಿಷ್ಟವಾಗಿದೆ. ಈ ಅರ್ಥವು ಪತಿ, ನಾಥ, ಭರ್ತೃ ಎಂಬ ಪದಗಳಿಂದ ಭಿನ್ನವಾಗಿಲ್ಲ. ಸಂಸ್ಕೃತ ಶಬ್ದಗಳಿಗೆ ದೇಶ್ಯ ಭಾಷೆಗಳಲ್ಲಿಯ ವಿಶಿಷ್ಟ ಪ್ರಯೋಗಗಳ ಮೂಲಕ ವಿಶಿಷ್ಟ ಅರ್ಥಗಳು ಉಂಟಾದ ಉದಾಹರಣೆಗಳಿವೆ. ಇಲ್ಲಿ ಸಮರ್ಥಕವಾದ ತಮಿಳಿನ ಒಂದು ಉದಾಹರಣೆಯನ್ನು ತೋರಿಸಬಹುದು. ತಮಿಳಿನಲ್ಲಿ ಆರ್ಯ ಎಂಬುದು ಐಯನ್ ಎಂದಾಗಿದ್ದು, ಈ ಐಯನ್ ಎಂಬ ಮಾತಿಗೆ ಅರಸು ಎಂಬ ಅರ್ಥವು ರೂಢವಾಗಿದೆ. ಆದರೆ ಆರ್ಯ ಎಂಬ ಮಾತಿಗೆ ಸಂಸ್ಕೃತದಲ್ಲಿ ಅರಸು ಎಂಬ ಅರ್ಥವು ಇಲ್ಲ. (ಆ) ಉಳ್ಳ ಎಂಬ ಅರ್ಥದಲ್ಲಿ ದೆ ಎಂಬ ಪ್ರತ್ಯಯದ ಒಂದು ಉದಾಹರಣೆಯನ್ನು ಹೇಳಬಹುದು. ಸಯ್= ಸತ್ಯ; ಇದರಿಂದ ಉಂಟಾದ ಸಯ್ದ= ಸತ್ಯವಂತ.[೨] ಸಯ್ದ ಎಂಬುದರ ಸ್ತ್ರೀಲಿಂಗದ ರೂಪು ಸಯ್ದೆ ಆಗುವುದು. ಇದೇ ಮೇರೆಗೆ ಪತಿಯುಳ್ಳವಳು ಎಂಬ ಅರ್ಥದಲ್ಲಿ ಅಯ್ದೆ ಎಂಬ ಪ್ರಯೋಗವು ರೂಢವಾಗಿರಬಹುದು. ದೆ ಪ್ರತ್ಯಯಾಂತ ಇನ್ನೂ ಕೆಲ ಉದಾಹರಣೆಗಳು ದೊರೆಯುತ್ತವೆ. ಸಂಸ್ಕೃತ ಪ್ರೇತ ಶಬ್ದದ ತದ್ಭವ ಪೆಯ್; ಇದು ತಮಿಳಿನಲ್ಲಿ ಸಿಕ್ಕುತ್ತದೆ. ಈ ಪೆಯ್‌ದಿಂದ ಮುಂದೆ ಪೆಯ್ದೆ, ಹೇದೆ ಎಂಬ ರೂಪಗಳು ಆಗಿರಲು ಸಾಧ್ಯವಿದೆ. ಭೂತ ಎಂಬ ಅರ್ಥದಲ್ಲಿ ಹೇದೆ ಎಂಬ ಮಾತನ್ನು ಕೇಶಿರಾಜನು ಶಬ್ದಮಣಿದರ್ಪಣದಲ್ಲಿ ನಿರ್ದೇಶಿಸಿದ್ದಾನೆ. ಇದು ಸ್ತ್ರೀವಾಚಕವೆನ್ನಬಹುದು. ಸಂಸ್ಕೃತ ಪ್ರೇತದಿಂದ ನೇರವಾಗಿ ಹೇದೆ ಆಗಿರಬಹದು ಎಂಬುದು ಇನ್ನೊಂದು ಸೂಚನೆ. ಇದಲ್ಲದೆ ಪಂದೆ ಮೊದಲಾದ ಬೇರೆ ದೆ ಪ್ರತ್ಯಯಾಂತ ಪದಗಳು ಕನ್ನಡ ನುಡಿಯಲ್ಲಿ ಸಿಕ್ಕುತ್ತವೆ. ಮೇಲಿನ ಮಾತುಗಳನ್ನು ಒಟ್ಟಾಗಿ ಆಲೋಚಿಸಿದರೆ ಪತಿಯುಕ್ತೆ ಎಂಬ ಅರ್ಥದಲ್ಲಿ ಆರ್ಯ-ಅಯ್ದೆ ಎಂಬ ಮಾತು ಹಿಂದಿನ ಕಾಲದಲ್ಲಿ ಬಳಕೆಗೆ ಬಂದಿರುವುದು ಅಸಂಭವನೀಯವಾಗಿಲ್ಲ.

ಈ ಮೇರೆಗೆ ಈ ಮೂರು ವ್ಯುತ್ಪತ್ತಿಗಳ ಸಾಧಕ ಬಾಧಕಗಳನ್ನು ಚರ್ಚಿಸಿದ್ದೇನೆ. ಯಾವುದೇ ಒಂದು ಸಿದ್ಧಾಂತವನ್ನು ಪ್ರತಿಪಾದಿಸುವ ಗೊಡವೆಗೆ ಹೋಗಿಲ್ಲ. ಈ ವಿಚಾರದಲ್ಲಿ ಹೆಚ್ಚಿನ ಅನ್ವೇಷಣ ಮತ್ತು ಪ್ರಕಾಶದ ಅಗತ್ಯವು ತೋರುತ್ತಿರುವುದು.

---

೧ Madras Epigraphic Collection, No. 470 of 1940-41.

೨ ಕಿಟೆಲ್ ಕೋಶದಲ್ಲಿ ಸಯ್ ಎಂಬ ಮಾತು ಕನ್ನಡ ದೇಶ್ಯ ಪದವಾಗಿ ತೋರಿಸಿದೆ. ಆದರೆ ಇದು ಸಂಸ್ಕೃತ ಸತ್ಯ ಎಂಬ ಪದದಿಂದ ಉಂಟಾಗಿರಬೇಕೆಂದು ತೋರುತ್ತದೆ.

ವಿದ್ಯಾರ್ಥಿಗಳ ಗುರಿ

ಶ್ರೀ ಜಿ. ಪಿ. ದಾಸೇಗೌಡ, ಬಿ.ಎ.

ಈ ವಿಶಾಲ ಪ್ರಪಂಚದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಸಾಧಿಸಬೇಕಾದ ಒಂದು ಗುರಿ ಇರಬೇಕು. ಗುರಿ ಇಲ್ಲದ ಜೀವನ ನೀರಸ, ನೀರಸವಾದ ಬಾಳು ಬರೀ ಸಪ್ಪೆ. ಆ ಬದುಕು ಬೇಸರ ಮತ್ತು ಜುಗುಪ್ಸೆ. ಎಂದಮೇಲೆ ಪ್ರತಿಯೊಬ್ಬ ವ್ಯಕ್ತಿಯ ಬಾಳು ಆನಂದವಾಗಿರಬೇಕಾದರೆ ಉತ್ತಮವಾದ ಒಂದು ಧ್ಯೇಯವಿರಲೇಬೇಕೆಂದು ಹೇಳಿದಂತಾಯಿತು.

ಹಾಗೆಯೇ ವಿದ್ಯಾರ್ಥಿಗಳಿಗೂ ಗಳಿಸಬೇಕಾದ ಒಂದು ಗುರಿ ಇರಬೇಕು. ವಿದ್ಯಾರ್ಥಿಜೀವನ ಇಡೀ ಮಾನವನ ಬಾಳಿನಲ್ಲಿ ಸಂತೋಷಕರವಾದದ್ದು ಮತ್ತು ಆದರ್ಶದಿಂದ ಕೂಡಿದ್ದು ಎಂದು ಧಾರಾಳವಾಗಿ ಹೇಳಬಹುದು. ವಿದ್ಯಾರ್ಥಿದಶೆಯಲ್ಲಿ ನಡೆದ ಘಟನೆಗಳು ಎಷ್ಟೋಸಲ ಮನುಷ್ಯನಿಗೆ ಹುರುಪನ್ನು ತುಂಬುತ್ತವೆ; ಆನಂದವನ್ನುಂಟುಮಾಡುತ್ತವೆ; ಮನುಷ್ಯನನ್ನು ಮರೆಸಿ, ಮಗುವಿನಂತೆ ಆಡಿಸಿ, ಹಾಡಿಸಿ, ನಗಿಸುತ್ತವೆ. ಹಾಗಿರಬೇಕಾದರೆ ವಿದ್ಯಾರ್ಥಿಯ ಜೀವನ ಯಾವ ಆದರ್ಶಗಳಿಂದ ಸಾಗಬೇಕು?

ಮೊತ್ತಮೊದಲು ವಿದ್ಯಾರ್ಥಿ ಯಾರೆಂಬುದನ್ನು ತಿಳಿಯೋಣ. ಮಾತಾ ಪಿತೃಗಳ ಮನನೋಯಿಸುವವನು ವಿದ್ಯಾರ್ಥಿಯೇ? ಸಕಾಲಕ್ಕೆ ಮನೆಗೆ ಬಾರದೆ ಬೀದಿ ಬೀದಿ, ಗಲ್ಲಿ ಗಲ್ಲಿ ಸುತ್ತಾಡುವವನು ವಿದ್ಯಾರ್ಥಿಯೆ? ಕೆಟ್ಟ ಜನರ ಸಹವಾಸದಿಂದ ಕೆಟ್ಟ ದುರಭ್ಯಾಸಗಳಿಗೆ ಆಗರವಾಗಿರುವವನು ವಿದ್ಯಾರ್ಥಿಯೇ? ಸಮಾಜದ ಮಧ್ಯ ಸೇರಿ ಸಾವಿರ ರೂಪದಲ್ಲಿ ಜನರನ್ನು ಗೋಳಾಡಿಸುವ, ಮನನೋಯಿಸುವ, ಕಿರುಕುಳ ಕೊಡುವ, ಬೇಸರ ಪಡಿಸುವವನು ವಿದ್ಯಾರ್ಥಿಯೇ? ಸರಿಯಾಗಿ ಶಾಲೆಗೆ ಬಾರದೆ, ಗುರುಗಳು ಬೋಧಿಸಿದ ಪಾಠ ಪ್ರವಚನವನ್ನು ಕೇಳದೆ, ಮನೆಗೆ ಕೊಟ್ಟ ಕೆಲಸಗಳನ್ನು ಮಾಡದೆ ಬೇಜವಾಬ್ದಾರಿಯಿಂದ ವರ್ತಿಸುವವನು ವಿದ್ಯಾರ್ಥಿಯೇ? ಸಹಪಾಠಿಗಳಲ್ಲಿ ವಿಶ್ವಾಸ ಸ್ನೇಹವಿಲ್ಲದೆ, ಗುರುಗಳಲ್ಲಿ ಭಕ್ತಿ ವಿನಯಗಳಿಲ್ಲದೆ ಇರುವನು ವಿದ್ಯಾರ್ಥಿಯೇ? ಎಂದಮೇಲೆ ನಿಜವಾದ ವಿದ್ಯಾರ್ಥಿಯಾರೆಂದು ಹೇಳಬಹುದು?

ಸಾಮಾನ್ಯವಾಗಿ ನಿಜವಾದ ವಿದ್ಯಾರ್ಥಿಯು ಮಾತಾ ಪಿತೃಗಳಲ್ಲಿಯೂ, ಅಕ್ಕ ತಂಗಿಯರಲ್ಲಿಯೂ, ಅಣ್ಣ ತಮ್ಮಂದಿರಲ್ಲಿಯೂ ಅಚ್ಚುಮೆಚ್ಚಿನಿಂದಿರಬೇಕು; ಅವರ ಬಾಳಿನಲ್ಲಿ ಸದಾ ನೆರವು ನೀಡಲು ಸಿದ್ಧನಿರಬೇಕು. ಸದಾಕಾಲದಲ್ಲಿ ಮನೆಯವರನ್ನು ಮುಗುಳುನಗೆಯಿಂದ ಕಮಲದಂತೆ ಕಳೆಕಳೆಯಿಂದ ನಕ್ಕು ನಗಿಸುತ್ತಿರಬೇಕು. ಸಂಸಾರದ ಬೇಗೆಯಿಂದ ಬಳಲಿದ ಮುಖಗಳನ್ನು ಒಂದು ನಿಮಿಷದಲ್ಲಿ ಪ್ರಫುಲ್ಲಗೊಳಿಸುವ ಶಕ್ತಿ ಇರಬೇಕು. ಮನೆಯಲ್ಲಿ ದೊರೆಯಬಹುದಾದ ಎಲ್ಲಾ ಸದವಕಾಶಗಳನ್ನೂ ಉಪಯೋಗಿಸಿಕೊಳ್ಳಬೇಕು. ಅನಂತರ ಶಾಲೆಯಿರುವುದು ತನಗಾಗಿ, ತನ್ನಲ್ಲಿರುವ ಸರ್ವಶಕ್ತಿಗಳನ್ನು ಬೆಳೆಸುವುದಕ್ಕೆ ಎಂಬುದನ್ನು ಮರೆಯಬಾರದು. ಅಲ್ಲಿ ದೊರೆಯಬಹುದಾದ ಮಾನಸಿಕ, ದೈಹಿಕ ಮತ್ತು ಆತ್ಮಿಕ ಶಿಕ್ಷಣವನ್ನು ಪಡೆಯಲು ಸದಾ ಕಂಕಣಬದ್ಧನಾಗಿ ಹುಡುಗರೊಡನೆ ಯೋಧನಂತೆ ಸಿದ್ಧನಿರಬೇಕು. ಶಾಲೆಯಲ್ಲಿ ಉಪಾಧ್ಯಾಯರೊಡನೆ ಪ್ರಿಯ ಶಿಷ್ಯನಂತೆಯೂ, ಜೊತೆಗೆ ಉತ್ತಮ ಸ್ನೇಹಿತನಂತೆಯೂ ಇರಬೇಕು. ಈರೀತಿ ಸರ್ವರಿಗೂ ಬೇಕಾದವನಾಗಿ, ಅಚ್ಚುಮೆಚ್ಚಿನಿಂದ ಸರ್ವತೋಮುಖದಿಂದ ಬೆಳೆಯುತ್ತಿರುವವನೇ ನಿಜವಾದ ವಿದ್ಯಾರ್ಥಿ ಎಂದು ಕರೆಯಬಹುದು. ಈ ವಿದ್ಯಾರ್ಥಿ ಕುಟುಂಬಕ್ಕಾಗಿ, ಶಾಲೆಗಾಗಿ, ಸಮಾಜಕ್ಕಾಗಿ, ಮತ್ತು ದೇಶಕ್ಕಾಗಿ ಸರ್ವತ್ಯಾಗ ಮಾಡುವುದರಲ್ಲಿ ಸಂಶಯವೇನಿದೆ? ಈ ರೀತಿ ಗುರಿಯನ್ನು ಸಾಧಿಸಲು ವಿದ್ಯಾರ್ಥಿಯ ನಿತ್ಯದ ಬಾಳು ಹೇಗೆ ಸಾಗಬೇಕು? ಅವನು ಬೆಳಸಿಕೊಳ್ಳಬಹುದಾದ ಗುಣಗಳಾವುವು? ಇವುಗಳ ವಿವರಣೆಯನ್ನು ಸ್ವಲ್ಪ ತಿಳಿಯೋಣ.

ಪ್ರಥಮದಲ್ಲಿ ವಿದ್ಯಾರ್ಥಿ ತನ್ನ ವಿದ್ಯಾರ್ಥಿ ಜೀವನದಲ್ಲಿ ಪಕ್ಷಾತೀತನಾಗಿರಬೇಕು. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಅನೇಕ ರಾಜಕೀಯ ಪಕ್ಷಗಳಿರುತ್ತವೆ. ಒಂದೊಂದು ಪಕ್ಷಕ್ಕೂ ಸಾಧಿಸಬೇಕಾದ ಒಂದೊಂದು ಧ್ಯೇಯವಿರುತ್ತದೆ. ಈ ಧ್ಯೇಯ ಸಾಧನೆಗಳಿಗೆ ಅಧಿಕಾರ ಬೇಕು. ಅನೇಕ ಸಲ ಅಧಿಕಾರಸಾಧನೆಯೇ

ಪಕ್ಷದ ಗುರಿಯಾಗುತ್ತದೆ. ಪಕ್ಷದ ನಾಯಕರುಗಳು ತಮ್ಮ ಧ್ಯೇಯಸಾಧನೆಗೆ ದೇಶದ ಯುವಕಸಂಪತ್ತನ್ನು ಉಪಯೋಗಿಸಿಕೊಳ್ಳುವರು. ಯುವಕರಲ್ಲಿಯಾದರೋ ಜೀವನದ, ರಾಜಕೀಯದ ಅನುಭವ ಮತ್ತು ಮುಂದಾಲೋಚನೆ ಸಾಕಷ್ಟು ಇರುವುದಿಲ್ಲವೆಂದು ಹೇಳಬಹುದು; ಸ್ವಲ್ಪಮಟ್ಟಿಗೆ ಪುಸ್ತಕರಾಜಕೀಯದ ಪರಿಶ್ರಮವಿದ್ದರೂ, ಅದರ ಕಾರ್ಯರೂಪ ತಿಳಿದಿರುವುದಿಲ್ಲ. ಆದರೆ ವಿದ್ಯಾರ್ಥಿಗಳಲ್ಲಿ ಮಹತ್ತರವಾದ ಹುರುಪೂ, ಧೈರ್ಯ, ತ್ಯಾಗ ಉತ್ಸಾಹಗಳೂ ತುಂಬಿ ತುಳುಕುತ್ತವೆ. ಈ ಗುಣಗಳನ್ನು ರಾಜಕೀಯ ಪ್ರಾಜ್ಞರು ತಮ್ಮ ಗುರಿಯ ಸಾಧನೆಗಳಿಗಾಗಿ ಉಪಯೋಗಿಸುಕೊಳ್ಳುತ್ತಾರೆ. ಈ ರೀತಿ ವಿದ್ಯಾರ್ಥಿಗಳು ರಾಜಕೀಯ ಪಕ್ಷಗಳಲ್ಲಿ ಮಿಳಿನವಾಗುವುದರಿಂದ, ಅವರ ಇಡಿಯ ಜೀವನವೇ ಎಡರು ತೊಡರುಗಳಿಂದ ಕೂಡಿ ಕಷ್ಟಮಯವಾಗುವುದರಲ್ಲಿ ಸಂದೇಹವಿಲ್ಲ. ವಿದ್ಯಾರ್ಥಿಯ ಮುಖ್ಯ ಗುರಿಯಾದ ಜ್ಞಾನಸಂಪಾದನೆಯೇ ಮಾಯವಾಗಬಹುದು. ಸಣ್ಣ ವಯಸ್ಸಿನಿಂದಲೇ ಮಕ್ಕಳ ಮೃದು ಮನಸ್ಸುಗಳಲ್ಲಿ ಐಕಮತ್ಯದ ಬದಲು, ದ್ವೇಷಾಸೂಯೆಗಳು ಬೀಡುಮಾಡಿಕೊಳ್ಳಬಹುದು. ಸಮಾಜದ ಉದ್ಧಾರದ ಬದಲು ಸಮಾಜಕ್ಕೆ ಹಾನಿ ತರಬಹುದು. ಹೀಗಾಗಿ ಸಮಾಜದ ಬಿಕ್ಕಟ್ಟು ಸಡಿಲವಾಗಬಹುದು. ಯುವಕರ ನೀತಿಯ ಮಟ್ಟವೇ ಕೆಳಗಿಳಿಯಬಹುದು. ಆದ್ದರಿಂದ ವಿದ್ಯಾರ್ಥಿಗಳು ಯಾವ ರಾಜಕೀಯ ಪಕ್ಷಕ್ಕೂ ಸೇರದೆ ಎಲ್ಲಾ ಪಕ್ಷಗಳ ತತ್ತ್ವಗಳನ್ನೂ ಅರಿತುಕೊಳ್ಳುವುದು ಒಳ್ಳೆಯದು. ಅಲ್ಲದೆ ಶಾಲೆಯಲ್ಲಿರುವ ಎಲ್ಲಾ ಮಕ್ಕಳೂ ಸಹೋದರರೆಂದು ತಿಳಿದು, ಜ್ಞಾನಸಂಪಾದನೆಯೇ ಗುರಿ ಎಂದು ಅರಿತು ತಮ್ಮ ಜೀವನ ನಡಸಬೇಕು. ಆಗ ವಿದ್ಯಾರ್ಥಿಯ ಗುರಿಯೂ ವಿದ್ಯಾಭ್ಯಾಸದ ಧ್ಯೇಯವೂ, ಶಾಲೆಯ ಆದರ್ಶವೂ ಸಾಧನೆಯಾದಂತಾಗುತ್ತದೆ.

ವಿದ್ಯಾರ್ಥಿ ಪಕ್ಷಾತೀತನಾದಮೇಲೆ ಅವನ ಗುರಿ ತನ್ನ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಳ್ಳುವುದೇ ಆಗಬೇಕು. ಈ ರೀತಿಯ ಜ್ಞಾನಾರ್ಜನೆಯನ್ನು ಎರಡು ರೂಪಗಳಿಂದ ಗಳಿಸಬಹುದು. ಪರೀಕ್ಷೆಯ ದೃಷ್ಟಿಯಿಂದ ಬೋಧಿಸಿದ ಪಾಠಗಳಿಂದ ಬುದ್ಧಿಯನ್ನು ಹೆಚ್ಚಿಸಿಕೊಳ್ಳುವುದು ಒಂದನೆಯದು. ಇಲ್ಲಿ ವಿದ್ಯಾರ್ಥಿಯು ಪರೀಕ್ಷೆಯ ದೃಷ್ಟಿಯಿಂದಲೇ ಅಲ್ಲದೆ, ತಾನು ಓದಬೇಕಾದ ಎಲ್ಲಾ ವಿಷಯಗಳನ್ನು ವಿಮರ್ಶನಪೂರ್ವಕವಾಗಿ ಓದಬೇಕು. ಪ್ರತಿಯೊಂದು ವಿಷಯವನ್ನೂ ಓದುವಾಗ ಹಾಗೆ ಅಭ್ಯಾಸಮಾಡುವ ವಿಷಯವು, ತನ್ನ ಜೀವನಕ್ಕೂ ತನಗೆ ಜನ್ಮವಿತ್ತ ಮಾತೃಭೂಮಿಗೂ, ಹೇಗೆ ಸಹಕಾರಿಯಾಗಬಹುದೆಂಬುದನ್ನು ಸದಾ ಆಲೋಚಿಸುತ್ತಿರಬೇಕು. ತನಗೆ ಗೊತ್ತುಮಾಡಿರುವ ಪಠ್ಯಪುಸ್ತಕಗಳಲ್ಲಿ ಹೆಚ್ಚಿನ ಪರಿಶ್ರಮ ಹೊಂದಿ ಪರೀಕ್ಷೆಯಲ್ಲೂ ಚೆನ್ನಾಗಿ ತೇರ್ಗಡೆ ಹೊಂದಬೇಕು. ಅನಂತರ ಎರಡನೆಯ ದೃಷ್ಟಿ. ವಿದ್ಯಾರ್ಥಿಯು ತನ್ನ ವಿರಾಮಕಾಲದಲ್ಲಿ ತನ್ನ ಜ್ಞಾನ ನಿಧಿಯನ್ನು ಬಹುರೂಪಗಳಲ್ಲಿ ಹೆಚ್ಚಿಸಿಕೊಳ್ಳಬೇಕಾಗುತ್ತದೆ. ರಾಷ್ಟ್ರಪ್ರೇಮಿಗಳ ಜೀವನಚರಿತ್ರೆಗಳನ್ನು, ಅವರ ಜೀವನದ ಅನುಭವಗಳನ್ನು ಮತ್ತು ಸಾಧಿಸಲು ಪ್ರಯತ್ನ ಪಟ್ಟ ತತ್ತ್ವಗಳನ್ನು ಅರಿಯಬೇಕು. ದೇಶದ ಸಂಸ್ಕೃತಿಯನ್ನು ಬೋಧಿಸುವ ಪವಿತ್ರ ಧರ್ಮ ಗ್ರಂಥಗಳನ್ನೂ ತಿಳಿಯಬೇಕು. ತಮ್ಮ ಕವಿಗಳನ್ನೂ, ಅವರ ಕವಿತೆ ಮತ್ತು ಕವನಗಳನ್ನೂ ಜೊತೆಗೆ ನಾನಾ ರೂಪವಾಗಿ ಬರಬಹುದಾದ ಇತರ ಗ್ರಂಥಗಳನ್ನೂ ಓದಿ ಪರಿಶ್ರಮ ಹೊಂದುವುದು ಬಹಳ ಒಳ್ಳೆಯದು. ಅಲ್ಲದೆ ಇಷ್ಟರಲ್ಲಿಯೇ ತೃಪ್ತರಾಗದೆ ಮುಂದುವರೆದ ಇತರ ರಾಷ್ಟ್ರಗಳ ಆರ್ಥಿಕ, ಸಾಮಾಜಿಕ, ರಾಜಕೀಯ, ವೈಜ್ಞಾನಿಕ ವಿಷಯಗಳನ್ನು ಪರಿಚಯಮಾಡಿಕೊಳ್ಳುವುದು ಅತ್ಯಾವಶ್ಯಕವೆಂದರೆ ತಪ್ಪಾಗಲಾರದು. ಈ ರೀತಿ ವಿದ್ಯಾರ್ಥಿಯ ಗುರಿ ಜ್ಞಾನಾರ್ಜನೆಯಾಗಬೇಕು. ತನ್ನ ವಿದ್ಯಾರ್ಥಿ ಜೀವನದಲ್ಲಿ ಈ ಸಾಧನೆಯ ಕಡೆಗೆ ಮನಸ್ಸು ಮತ್ತು ಪ್ರಯತ್ನಗಳು ಓಡುತ್ತಿರಬೇಕು.

ಈ ರೀತಿ ವಿದ್ಯಾರ್ಥಿಯ ಮನಸ್ಸು ಜ್ಞಾನಾರ್ಜನೆಯ ಕಡೆ ಹಾತೊರೆಯಬೇಕೆಂಬು ತಿಳಿಸಿದೆವು. ಈ ಸಂದರ್ಭದಲ್ಲಿ ಶಾಲೆಯ ಪಾತ್ರ ಬಹು ಗುರುತರವಾದುದು. ಶಾಲೆಯ ಗುರಿ ಮಕ್ಕಳ ಧ್ಯೇಯಸಾಧನೆಗಳಿಗೆ ಅವಕಾಶಗಳನ್ನು ಕಲ್ಪಿಸುವುದಾಗಿರಬೇಕು. ಶಾಲೆಯವರು ಘನ ಮತ್ತು ಲಘು ಪರೀಕ್ಷೆಗಳನ್ನು ಏರ್ಪಡಿಸಬಹುದು. ಪಾಠ ಪ್ರವಚನಗಳಿಗೆ ಸಂಬಂಧಿಸಿದ ಅನೇಕ ಸ್ಪರ್ಧೆಗಳನ್ನು ನಡಸಬಹುದು. ಮಕ್ಕಳಲ್ಲಿ ಶಿಸ್ತು ಸಂಯಮ ಬೆಳೆಯಲು ಅವಕಾಶಗಳನ್ನು ಕಲ್ಪಿಸಬಹುದು. ಉತ್ತಮ ಭಾಷಣಕಾರರನ್ನು ತಯಾರಿಸಲು ಅನೇಕ ಚರ್ಚಾಕೂಟಗಳನ್ನೂ, ಭಾಷಣ ಮಾಲೆಗಳನ್ನೂ ಏರ್ಪಡಿಸಬಹುದು. ನಾಟಕ, ಸಂಗೀತ, ನೃತ್ಯ ಮತ್ತು ಇತರ ಅನೇಕ ಕಲೆಗಳನ್ನು ಅಭಿವೃದ್ಧಿ ಪಡಿಸಲು ಅನುಕೂಲಪಡಿಸಬಹುದು. ದೇಶಪ್ರೀತಿ, ಸಮಾಜ ಸೇವೆ ಮಕ್ಕಳ ಮೃದು ಹೃದಯ

ಗಳಲ್ಲಿ ಬೇರೂರಿಸಲು ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು. ಶರೀರ ಸಂಪತ್ತನ್ನು ಬೆಳಸಿಕೊಳ್ಳಲು ವ್ಯಾಯಾಮಶಾಲೆ ತೆಗೆಯಬಹುದು. ಹೀಗೆ ಶಾಲೆಯಲ್ಲಿ ಕಲ್ಪಿಸಿಕೊಡುವ ಎಲ್ಲಾ ಸದವಕಾಶಗಳನ್ನೂ ಉಪಯೋಗಿಸಿಕೊಂಡು ಸಂಪೂರ್ಣಜ್ಞಾನದ ಜೊತೆಗೆ ಪೂರ್ಣ ಅನುಭವಗಳನ್ನೂ ಪಡೆದರೆ ತನಗೂ ತನ್ನ ದೇಶಕ್ಕೂ ಉಪಯೋಗವಾಗುವುದರಲ್ಲಿ ಸಂದೇಹವೇನುಂಟು ?

ಪಾಠಶಾಲೆ ವಿದ್ಯಾರ್ಥಿಯನ್ನು ಪರಿಪೂರ್ಣನನ್ನಾಗಿಯೂ, ಉತ್ತಮ ರಾಷ್ಟ್ರಕನನ್ನಾಗಿಯೂ ಮಾಡಲು ಅವಕಾಶಗಳನ್ನು ಕಲ್ಪಿಸಿ ಸತತವೂ ಅವನಿಗಾಗಿ ದುಡಿಯುತ್ತಿದೆ. ಶಾಲೆಗೆ ವಿದ್ಯಾರ್ಥಿಯೇ ಜೀವಾಳ. ಹೀಗಿರುವಾಗ ವಿದ್ಯಾರ್ಥಿ ಶಾಲೆಯನ್ನು ಹೇಗೆ ಕಾಣಬೇಕು ? ವಿದ್ಯಾರ್ಥಿಗೆ ಶಾಲೆಯೇ ಒಂದು ಪುಟ್ಟ ಸಮಾಜ. ತಾನು ಮುಂದೆ ಸಮಾಜದ ಮಧ್ಯೆ ಕಾಣಬಹುದಾದ ಜೀವನದ ನಾನಾ ಮುಖಗಳನ್ನು ಶಾಲೆಯಲ್ಲಿ ಬಹು ಸೂಕ್ಷ್ಮ ರೂಪದಲ್ಲಿ ಕಾಣಬಹುದು. ಶಾಲೆಯು ಒಂದು ದೇವಾಲಯವೆಂದು ಬಗೆದರೂ ತಪ್ಪಾಗಲಾರದು. ಈ ದೇವಾಲಯದಲ್ಲಿ ಕಾಣುವ ವಿದ್ಯಾರ್ಥಿಗಳೆಲ್ಲ ತನ್ನ ಸಹೋದರರೆಂದು ಬಗೆಯಲಿ. ಸಾವಿರ ಮಕ್ಕಳಲ್ಲಿ ತಾನೊಬ್ಬ. ಶಾಲೆಯ ಯಾರೊಬ್ಬರ ದುಃಖವೂ ತನ್ನದು, ಶಾಲೆಯ ಕೀರ್ತಿ ತನ್ನ ಕೀರ್ತಿ, ಶಾಲೆಯ ನಿಯಮಗಳು ತನ್ನ ನಿಯಮಗಳು, ಶಾಲೆಯ ಸೋಲು ತನ್ನ ಸೋಲು, ಶಾಲೆಯ ತತ್ತ್ವವೇ ತನ್ನ ತತ್ತ್ವ, ಶಾಲೆಯ ಬಾಳೇ ತನ್ನ ಬಾಳು, ಶಾಲೆಯ ಉಸಿರೇ ತನ್ನ ಉಸಿರು ಎಂದು ವಿದ್ಯಾರ್ಥಿ ಶಾಲೆಯನ್ನು ತಿಳಿಯಬೇಕು, ಈ ರೀತಿ ಬಾಳುವ ವಿದ್ಯಾರ್ಥಿ ಮುಂದೆ ಪೌರನಾದಮೇಲೆ, ತನ್ನ ದೇಶವನ್ನೂ ಸಮಾಜವನ್ನೂ, ದೇಶದ ಸಂಸ್ಕೃತಿಯನ್ನೂ ತನ್ನ ಜೀವವೆಂದು ಬಗೆದು ಅದರ ಅಭಿವೃದ್ಧಿಗಾಗಿ ಸರ್ವ ಪ್ರಯತ್ನಗಳನ್ನೂ ಮಾಡುವುದರಲ್ಲಿ ಸಂಶಯವೇನೂ ಇಲ್ಲ.

ಇಷ್ಟೆಲ್ಲ ಅವಕಾಶಗಳಿಗೆ ಅಡಿಗಲ್ಲಿನಂತಿರುವ ರಾಷ್ಟ್ರವನ್ನೂ, ರಾಷ್ಟ್ರೀಯ ಸರ್ಕಾರವನ್ನೂ ವಿದ್ಯಾರ್ಥಿ ಮರೆಯುವುದೆಂದರೇನು? ಪ್ರತಿಯೊಬ್ಬ ರಾಷ್ಟ್ರಕನಲ್ಲಿಯೂ ರಾಷ್ಟ್ರಸ್ವಾತಂತ್ರ್ಯ, ಸಾಹಿತ್ಯ, ಕಲೆ, ಸಂಸ್ಕೃತಿ ರಕ್ತಗತವಾಗಿರಬೇಕು. ಇಂದಿನ ವಿದ್ಯಾರ್ಥಿಯೇ ಮುಂದಿನ ರಾಷ್ಟ್ರಕ. ವಿದ್ಯಾರ್ಥಿಗೆ ತನ್ನ ಎಳೆಯ ವಯಸ್ಸಿನಲ್ಲಿಯೇ ದೇಶವೆಂದರೆ, ದೇಶದ ಸ್ವಾತಂತ್ರ್ಯವೆಂದರೆ ರೋಮಾಂಚನವಾಗಬೇಕು. ದೇಶಕ್ಕೆ, ಅದರ ಸಂಸ್ಕೃತಿಗೆ ಎಲ್ಲಿ ಕಳಂಕವುಂಟಾಗುವ ಸಂಭವವೊದಗಿದರೂ ಅದನ್ನು ವಿದ್ಯಾರ್ಥಿ ಸಹಿಸಬಾರದು. ದೇಶದ ಕೀರ್ತಿಯ ಪತಾಕೆಯನ್ನು ಎತ್ತಿ ಹಾರಾಡಿಸಲು ಅವಕಾಶಗಳನ್ನು ಕಾಯುತ್ತಿರಬೇಕು. ದೇಶದ ಹಿರಿಮೆಯನ್ನು ಲೇಖನಗಳ ಮೂಲಕ ಸಾರಲು ಸಾಕಷ್ಟು ಅನುಭವ ಪಡೆಯಬೇಕು. ಗಾನದ ಮೂಲಕ ಹೃದಯದ ತುಂಬ ಹಾಡಿ ಹರಸಲು ಶಿಕ್ಷಣ ಪಡೆಯಬೇಕು. ಇತರ ರಾಷ್ಟ್ರಗಳಲ್ಲಿ ತನ್ನ ದೇಶದ ಕೀರ್ತಿಯ ಪತಾಕೆಯನ್ನು ಹಾರಾಡಿಸಲು ಸತತವೂ ಸಿದ್ಧನಾಗಿರಬೇಕು. ಈ ರೀತಿಯ ರಾಷ್ಟ್ರೀಯಭಾವನೆಗಳು ವಿದ್ಯಾರ್ಥಿಯ ಮನಸ್ಸಿನಲ್ಲಿ ಸದಾ ಸೇರುತ್ತಿರಬೇಕು, ತುಂಬಿ ತುಳುಕುತ್ತಿರಬೇಕು. ಈ ರೀತಿ ಸ್ಫೂರ್ತಿ ಹೊಂದಿರುವ ಯುವಕನು ರಾಷ್ಟ್ರಕನಾದ ಮೇಲೆ ತನ್ನ ಇಡಿಯ ಜೀವನವನ್ನು ಸಮಾಜಸೇವೆಗೆ ಧಾರೆಯೆರೆವುದರಲ್ಲಿ ಸ್ವಲ್ಪವಾದರೂ ಅನುಮಾನವುಂಟೆ ?

ಈ ಮೇಲ್ಕಂಡ ಭಾವನೆಗಳನ್ನು ತುಂಬಿಕೊಂಡಿರುವ ವಿದ್ಯಾರ್ಥಿಗೆ ದೀನರ ಸೇವೆ ಎಂದರೆ ಈಶನ ಪೂಜೆ ಎನ್ನುವುದರಲ್ಲಿ ಸಂಶಯವಿಲ್ಲ. ಈ ಪ್ರಪಂಚದಲ್ಲಿ ಜನರೆಲ್ಲ ಒಂದೇ. ಎಲ್ಲರೂ ಪರಮಾತ್ಮನ ಮಕ್ಕಳು. ಎಲ್ಲರಲ್ಲಿಯೂ ಪರಮಾತ್ಮನು ಅಡಗಿರುವನು. ಎಂದಮೇಲೆ ಜನಸೇವೆ ಎಂದರೆ ಪರಮಾತ್ಮನ ಸೇವೆ. ಈ ತತ್ತ್ವವನ್ನು ವಿದ್ಯಾರ್ಥಿ ತನ್ನ ಎಳೆಯ ವಯಸ್ಸಿನಿಂದಲೂ ಅರಿಯಬೇಕು. ಹಾಗೆ ಅರಿತು, ಅದನ್ನು ಜೀವನದ ಗುರಿಯನ್ನಾಗಿ ಮಾಡಿಕೊಂಡು ಮುಂದೆ ಸಾಗಬೇಕು. ತಾನು ಯಾವ ಪರಿಶ್ರಮ ಹೊಂದಿದರೂ, ಏನು ಕೆಲಸ ಮಾಡಿದರೂ ಈ ಧ್ಯೇಯ ಸಾಧನೆಗೆ ಅನುರೂಪವಾಗಿರಬೇಕು. ತನ್ನ ಮತ್ತು ತನ್ನ ರಾಷ್ಟ್ರದಶ್ರೇಯಸ್ಸಿಗೆ ಅಡ್ಡಿಯಾಗಬಾರದು.

ಈ ರೀತಿ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನ ನಡೆಸಿದರೆ, ಈ ಪವಿತ್ರಭಾರತಭೂಮಿಯಲ್ಲಿ, ಅನ್ನಕ್ಕೆ ಅಭಾವವೇ ? ಬಟ್ಟೆಗೆ ಕೊರತೆಯೇ ? ಸುಸಂಸ್ಕೃತಿಗೆ ಯೋಚನೆಯೇ? ಮಹರ್ಷಿಗಳಿಗೆ ಕಡಮೆಯೆ? ಕೀರ್ತಿಗೆ ಲೋಪವೇ ? ಅಂದು ಈ ಭಾರತಮಾತೆ ಬಂಜೆಯಾಗುವಳೆ ? ಎಂದಿಗೂ ಇಲ್ಲ ; ಕನಸಿನಲ್ಲಿಯೂ ಇಲ್ಲ. ಭಾರತದ ಅಳಿವು ಉಳಿವು ಈ ದಿನದ ಯುವಕರ ಕೈಯಲ್ಲಿದೆ.

ಇನ್ನುಳಿದಿರುವುದು ಕೊನೆಯದು. ಇದು ಈ ಎಲ್ಲಾ ಧ್ಯೇಯಗಳಿಗೂ ಮೂಲಭೂತವಾದುದು, ತಳಪಾಯದ ಅಡಿಗಲ್ಲಿನಂತಿರುವುದು. ಈ ತತ್ತ್ವದ ಆಧಾರದಿಂದಲೇ ಈ ರಾಷ್ಟ್ರ, ಈ ಜನ, ಇದರ ಸಂಸ್ಕೃತಿ ಹಿಂದಿನಿಂದ

ಇಂದಿನವರೆಗೂ ಜೀವದಿಂದ ಬದುಕಿರುವುದು. ಎಷ್ಟೋ ಪರಕೀಯ ಜನ ಈ ರಾಷ್ಟ್ರವನ್ನು ಗೆದ್ದು ಆಳಿದರು. ಈ ಜನವನ್ನೂ, ಜನರ ಸಂಸ್ಕೃತಿಯನ್ನೂ ಅಳಿಸಲು ದುಡಿದರು. ಅವರ ದುಡಿಮೆ ಫಲಕಾರಿಯಾಗಲಿಲ್ಲ. ಬಂದ ಜನ ಆ ಸಂಸ್ಕೃತಿಯಲ್ಲಿ ಐಕ್ಯವಾದರೇ ವಿನಾ ಅದನ್ನು ಭಸ್ಮಮಾಡಲಾಗಲಿಲ್ಲ. ಇಷ್ಟೆಲ್ಲಕ್ಕೂ ಕಾರಣ ಈ ರಾಷ್ಟ್ರದ ನಿರ್ಮಾಪಕರಾದ ನಮ್ಮ ಪೂರ್ವಿಕರಾದ ಮಹರ್ಷಿಗಳು, ಅಧ್ಯಾತ್ಮದ ಅಡಿಗಲ್ಲಿನಮೇಲೆ ಈ ದೇಶವನ್ನು ನಿರ್ಮಿಸಿದ್ದಾರೆ. ಆದುದರಿಂದಲೇ ಈ ದೇಶದ ಸಂಸ್ಕೃತಿಯು ಯಾರಿಂದಲೂ ಭೇದಿಸಲು ಅಸಾಧ್ಯವಾಗಿರುವುದು. ಈ ರಾಷ್ಟ್ರ ಒಂದೇ ಇಡೀ ವಿಶ್ವದಲ್ಲಿ, "ಯಾವೊಂದು ದೇಶವೇ ಆಗಲಿ ತನ್ನ ರಾಜಕೀಯವನ್ನು ನಾಗರಿಕತೆ ಸಂಸ್ಕೃತಿಗಳನ್ನು ಆಧ್ಯಾತ್ಮದ ಅಡಿಗಲ್ಲಿನ ಮೇಲೆ ಕಟ್ಟಬೇಕು" ಎಂದು ಸಿಂಹನಾದವನ್ನು ಮಾಡುತ್ತಿರುವುದು. ಈ ತತ್ತ್ವವನ್ನು ಅಲ್ಲಗಳೆದ ರಾಷ್ಟ್ರ, ಅದರ ಸ್ವಾತಂತ್ರ್ಯ, ಸಂಸ್ಕೃತಿ ಬಹಳ ಬೇಗ ಅಳಿಸಿ ಹೋಗುವುದರಲ್ಲಿ ಸ್ವಲ್ಪವೂ ಅನುಮಾನವಿಲ್ಲವೆಂದು ಹೇಳಿದೆ. ಆತ್ಮ ಬಿಟ್ಟ ರಾಷ್ಟ್ರ ನೀರ ಮೇಲಣ ಗುಳ್ಳೆಯಂತೆ, ಕಾರ್ಮೋಡಗಳ ಮಧ್ಯೆ ಮಿನುಗುವ ಮಿಂಚಿನಂತೆ ಕ್ಷಣಿಕ, ಬಹಳದಿನ ಬದುಕಲಾರದು. ಈ ತತ್ತ್ವವನ್ನು ನಮ್ಮ ವಿದ್ಯಾರ್ಥಿಗಳು ಅರಿಯಬೇಕು. ತಮ್ಮ ಇಡಿಯ ಜೀವನವನ್ನು ಈ ತತ್ತ್ವದ ಆಧಾರದ ಮೇಲೆ ನಿರೂಪಿಸಕೊಳ್ಳುವುದು ಬಹಳ ಉತ್ತಮ.

ಈ ದೇಶದ ವಿದ್ಯಾರ್ಥಿಗಳು ಈ ಪಥದಲ್ಲಿ ಮುನ್ನಡೆದರೆ ಅನ್ನ ಬಟ್ಟೆ ಐಕಮತ್ಯ ನೀತಿ , ರಾಷ್ಟ್ರಪ್ರೇಮಗಳ ಈ ರಾಷ್ಟ್ರ ಮುಂದೆ ಸಂಪತ್ಸವೃದ್ಧಿಯನ್ನು ಹೊಂದಿ, ನೀತಿ ಮತ್ತು ಐಕಮತ್ಯಗಳ ತವರಾಗಿ ಅದರ ಅಡಿಯಲ್ಲಿ ಇಡಿಯ ವಿಶ್ವ ಸಂತೋಷದಿಂದ ಬದುಕುವುದರಲ್ಲಿ ಸಂಶಯವುಂಟೇ! ಈಗಿನ ವಿದ್ಯಾರ್ಥಿಗಳ ಮಧ್ಯೆ ಎಷ್ಟು ಗಾಂಧಿಗಳಿರಬಹುದು, ನೆಹರೂಜೀಯವರಿರಬಹುದು ; ರಾಮಕೃಷ್ಣಪರಮಹಂಸ, ವಿವೇಕಾನಂದರಿರಬಹುದು. ಆದುದರಿಂದ ವಿದ್ಯಾರ್ಥಿಗಳೇ! ನಿಮ್ಮ ಗುರಿ ಜ್ಞಾನಾರ್ಜನೆ, ಸೌಂದರ್ಯೋಪಾಸನೆ, ರಾಷ್ಟ್ರ ಪ್ರೇಮ, ಶಿಸ್ತು ನೀತಿಗಳಿಂದ ಕೂಡಿದ ಜೀವನ, ಸಮಾಜ ಸೇವೆ, ಪರಮಾತ್ಮನ ಧ್ಯಾನ, ಸತ್ಯಾನ್ವೇಷಣ ಆಗಲಿ. ಈ ತತ್ತ್ವಗಳಿಗಾಗಿ ಜೀವಿಸಿರಿ, ದುಡಿಯಿರಿ, ಮಡಿಯಿರಿ ಅಂದು ನೀವು ಅಮರರಾಗುವುದರಲ್ಲಿ ಅನುಮಾನವೇ ಇಲ್ಲ.

ಜೈ ಹಿಂದ್.

ಹೆದರದಿರು !

ಹೆದರದಿರು ! ಒಲುಮೆ ತುಂಬಿದ ದೇವ ಕರೆವೆನಿಂತು.
ಸೇದೆಗೊಂಡಿಹ ದೋಣಿ ಕಡಲ ತರೆ ಸೀಳುವಂತು.
ಬೇನೆ ಬಹು ದುಃಖಗಳ ಕಣ್ಣೀರ ಮಾರಿಗಾಳಿ,
ನನ್ನ ಸಾಮೀಪ್ಯಕೇ ತೇಲಿಸುತ ತರುವ ಲಾಲಿ.

ಹೆದರದಿರು ! ಹುಟ್ಟು ಹಾಕುವ ಕಯ್ಯಿ ನನ್ನ ಹೊಗಳು.
ಮುಳುಗಲಾರರು ಅವರು, ನನ್ನನ್ನು ನಂಬಿದವರು.
ಧ್ಯೆರ್ಯವುಡುಗುವೆಡೆ ನಾನ್ ನಿನ್ನೊಡಲ ಹೊಸದು ಶಕ್ತಿ.
ಕೈಹಿಡಿದು ಆಡಲಿನೊಡಲಲಿ ಒಯ್ವ ಹಿರಿಯ ಮುಕ್ತಿ.

ಕತ್ತಲಾದರು, ರಾತ್ರಿ ಕವಿಯುವುದು ಭಯಕೆ ಎಂದೊ ?
ನೇಸರುದಯದ ನಲಿವು ಬಂದೆ ಬರಬೇಕು ಎಂದು.
ಆ ಲೋಕದಲಿ ಸುಖದ ಬೀಡು ಬಿಟ್ಟಾಗ ನೀನು,
ಅರಿವೆಯಯ್ ನನ್ನ ಭಯ ನುಡಿ ನಲಿವನಿತ್ತುದನ್ನು.

ಮೂಲಕವಿ : ರಿಲ್ಲಾಡಿಲಾನೋ. ಅನುವಾದಕ : ಸಮೇತನಹಳ್ಳಿ ರಾಮರಾಯ.

ಕವಿ ರುದ್ರಭಟ್ಟನ ಜನ್ಮಸ್ಥಳವಾವುದು?

ಶ್ರೀ ದೊಡ್ಡಮನೆ ರಾಘವೈಯಂಗಾರ್, ದೇವನೂರು

ಕನ್ನಡ ಕವಿಗಳ ಚರಿತ್ರೆಯನ್ನು ಶೋಧಿಸಿ ಕವಿ ಚರಿತೆಯನ್ನು ಬರೆದಿರುವ ಶ್ರೀ|| ಆರ್. ನರಸಿಂಹಾ ಚಾರ್ಯರವರ ಕವಿಚರಿತೆಯೇ ಈ ಲೇಖನಕ್ಕೆ ಆಧಾರ.

ಕವಿ ಚರಿತೆ ಭಾಗ I, ಪುಟ ೨೬೯ ರಲ್ಲಿ ರುದ್ರಭಟ್ಟನ ಕಾಲನಿರ್ಣಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸುಮಾರು ಕ್ರಿ.ಶ. ೧೧೮೦ ಎಂದು ನಿಶ್ಚಯಿಸಿರುತ್ತಾರೆ. ಎಲ್ಲಿಯವನೆಂಬುದನ್ನು ಚರ್ಚಿಸಿರುವದಿಲ್ಲ. ಆದರೆ ಕಾಲ ನಿರ್ಣಯಕ್ಕಾಗಿ ಈ ಕೆಳಗಿನ ಪದ್ಯಗಳನ್ನು ಉದಾಹರಿಸಿರುತ್ತಾರೆ. ಆ ಪದ್ಯಗಳು ಎಲ್ಲಿ ದೊರೆಯಿತೆಂಬುದನ್ನು ವಿವರಿಸಿಲ್ಲದಿದ್ದರೂ ಅದರಿಂದ ಈ ಲೇಖನಕ್ಕೆ ತುಂಬಾ ಆಧಾರ ದೊರೆಯುವುದರಿಂದ ಅದನ್ನು ವಿವರಿಸುವೆನು.

ಶಿವಕಲಾಬ್ದ ಶಕ ಶುಕ್ಲ ವರ್ಷವಾ| ಧವ ಸಿತಾರ್ಕ ದಿನ ಜೀವವಾರದೊಳ್| ಭವಿಗಳೆಲ್ಲ ವರ ರುದ್ರಭಟ್ಟನೇ| ಕವಿ ಎನಲ್ಕೊರೆದನೊಂದು ಕಾವ್ಯಮಂ ||೧||

ಆಱಿಸಲ್ ಜಗನ್ನಾಥ ವಿಜಯಮೆನಿಪಾಕಬ್ಬ| ಮುರುದೋಷಪೂಗ ಪರಿಚಿತವಾಗೆ ಲಾಕ್ಷಣಿಕ| ವರರದಂ ರಾಜಶೇಖರವಿಳಾಸಕೆ ಪಡಿಯನೊರೆಯದಿರೆ ರುದ್ರ ಭಟ್ಟಂ|| ಪರಿಭವಕೆ ಗುಱಿಯಾದನೆಂದು ಸಭಿಕರ್ ಪೇಳ್ದ| ಪರಿಯಱಿತು ಕರುಣದಿಂದಾ ಷಡಕ್ಷರಿ ದೇವ| ಬಿರುದುಗಳ ಕೊಂಡು ಮಗುಟಿತ್ತು ಮನ್ನಿಸಿ ಪೊರೆದನದ ಕೇಳಿ ಲಕ್ಷ್ಮೀಶನು ||೨||

ಹರಿಚರಿತದಿಂ ಕೂಡಿ ಹರಿಮೇಧಪರ್ವ ಕಥೆ|ಯೊರೆದ ಪಾರ್ಥಿಕಷಟ್ಪದಿಗಳಿಂದ ಜೈಮಿನಿಯ| ವರಸೂಕ್ತಿ ತಾತ್ಪರ್ಯಭರ ಗರ್ಭಿತಮದಾಗೆ ರಸಿಕರ್ಕಳನು ಮೋದಿಸಲ್ || ಪರಿಪರಿಯಲಂಕಾರ ರಸಭಾವಪುಷ್ಟಿಯಿಂ | ಮೆರೆದುದು ಗುಣೇಂದುಕಲೆ ಪರಿಮಿತಾಬ್ದದ ಶಕದಿ | ಹರಿವಾರ ಕಾರ್ತಿಕದ ಸಿತಪಂಚಮೀ ಪ್ರಜಾಪತಿಶರದಿ ಸಾಂಗ ಮೆನಲು || ೩ ||

ಕನ್ನಡ ಕಬ್ಬಿಗರಾತನ| ಮನ್ನಿಸಿ ಲಕ್ಷ್ಮೀಶನೊರ್ವನೇ ಕವಿರತ್ನಂ || ಸನ್ನುತನೆಂದುರು ಬಿರುದಂ | ಚೆನ್ನದಿ ಕವಿಚೂತ ಚೈತ್ರನೆನೆ ಬರೆದಿತ್ತರ್ ||೪||

ಕರ್ಣಾಟಕ ಕವಿ ಚರಿತೆ ಭಾಗ II, ಪುಟ ೫೧೯ ರಲ್ಲಿ ರಾಮನೆಂಬ ಕವಿಯು ಕೃಷ್ಣಮಂತ್ರಿಗಾಗಿ ಜಗನ್ನಾಥ ವಿಜಯವನ್ನು ಶಾ. ಶಕ. ೧೬೧೧ (ಕ್ರಿ. ಶ. ೧೬೮೯) ರಲ್ಲಿ ಪ್ರತಿಮಾಡಿದನು. ಎಂದಿರುತ್ತದೆ.

ಕವಿ ಚರಿತೆಯ ಪ್ರಕಾರ ಷಡಕ್ಷರಿ ಕವಿಯು ಕ್ರಿ. ಶ. ೧೬೫೫ ರಲ್ಲಿದ್ದಂತೆ ತಿಳಿಯುತ್ತದೆ.

ವಿಚಾರ– ಮೇಲಿನ ಪದ್ಯಗಳನ್ನು (ಭಾಗ I, ಪುಟ ೨೬೯) ನೋಡಿದರೆ ರುದ್ರಭಟ್ಟನಿಗಾದ ಅಪಮಾನ ಪರಿಹಾರಕ್ಕಾಗಿ ಲಕ್ಷ್ಮೀಶನು ಜೈಮಿನಿ ಭಾರತವನ್ನು ರಚಿಸಿದಂತೆ ಕಾಣುವುದು. ರುದ್ರಭಟ್ಟನು ಸುಮಾರು ೧೧೮೦ ರಲ್ಲಿದ್ದಂತೆಯೂ ಷಡಕ್ಷರಿಯು ೧೬೫೫ ರಲ್ಲಿದ್ದಂತೆಯೂ ತಿಳಿದುಬರುವುದು. ಮಧ್ಯೆ ಸುಮಾರು ೪೭೫ ವರುಷಗಳು ಕಳೆದಿರುವದರಿಂದ–ರುದ್ರಭಟ್ಟನು ಷಡಕ್ಷರಿಯಿಂದ ಅಪಮಾನ ಹೊಂದಿದನೆಂಬುದೂ ಅವರಿಬ್ಬರೂ ಸಮಕಾಲಿಕರೆಂಬುದೂ ಅಸಂಭವವೇ ಸರಿ. ಇದನ್ನು ಕವಿ ಚರಿತೆಕಾರರು ಹೇಳಿಯೇ ಇದ್ದಾರೆ.

ಕವಿ ಚರಿತೆ, II ನೆ ಭಾಗ ಪುಟ ೫೧೯ ರಲ್ಲಿದ್ದ ಜಗನ್ನಾಥ ವಿಜಯವನ್ನು ಪ್ರತಿಮಾಡಿದ ರಾಮ ಕವಿಯೂ, ಷಡಕ್ಷರ ಕವಿಯೂ, ಲಕ್ಷ್ಮೀಶನೂ ಸಮಕಾಲಿಕರಾಗುತ್ತಾರೆ. ಈ ಕಾಲದ ಸುಮಾರಿನಲ್ಲಿಯೇ ದೊಡ್ಡ ದೇವರಾಜ ಒಡೆಯರು ರಾಜ್ಯವಾಳುತ್ತಿದ್ದರು. ಆಗ ರಾಜಕೀಯದ ಅಲ್ಪ ಸ್ವಲ್ಪ ಗೊಂದಲವೇರ್ಪಟ್ಟ ಸಂಗತಿಯೂ ಮೈಸೂರುಚರಿತ್ರೆಯಿಂದ ವ್ಯಕ್ತಪಡುವುದು. ಆ ಕಾಲದಲ್ಲಿಯೇ ಷಡಕ್ಷರಿಯು–ಉದ್‌ಗ್ರಂಥಗಳನ್ನು ರಚಿಸಿ ಪ್ರಸಿದ್ಧಿಗೆ ಬಂದಿದ್ದನು.

ಮೇಲಿನ ಸಂಗತಿಗಳನ್ನೆಲ್ಲಾ ಕ್ರೋಢೀಕರಿಸಿ ಈ ಕೆಳಗಿನಂತೆ ಊಹಿಸಬಹುದು.

ರಾಮ ಕವಿಯು – ಕೃಷ್ಣಮಂತ್ರಿಗಾಗಿ ಜಗನ್ನಾಥ ವಿಜಯವನ್ನು ಪ್ರತಿ ಮಾಡಿ ಮಂತ್ರಿಯಿಂದ ಗೌರವವನ್ನು ಹೊಂದಿ ಬಿರುದುಗಳನ್ನು ಪಡೆದಿರಬಹುದು. ಅದನ್ನು ಷಡಕ್ಷರಿಯು ಪ್ರತಿಭಟಿಸಿ, ರಾಜಶೇಖರಕ್ಕೂ–ಜಗನ್ನಾಥ ವಿಜಯಕ್ಕೂ ತಾರತಮ್ಯವನ್ನು ಚರ್ಚಿಸಿರಬಹುದು.

ಅಂದಿನ ರಾಜಕೀಯ ಪರಿಸ್ಥಿತಿಯಿಂದ ರಾಮ ಕವಿಗೆ (ಜಗನ್ನಾಥ ವಿಜಯಕ್ಕೆ) ಅಪಮಾನವಾಗಿರಬಹುದು. ಈಸಂಗತಿಯನ್ನು ಲಕ್ಷ್ಮೀಶನು ಕೇಳಿ, ಅಭಿಮಾನದಿಂದ ಜೈಮಿನಿ ಭಾರತ ಕಾವ್ಯವನ್ನು ರಚಿಸಿರಬಹುದು.

ಸುಮಾರು ೪೭೫ ವರುಷಗಳು ಕಳೆದಿದ್ದರೂ ಲಕ್ಷ್ಮೀಶನಿಗೆ- ಕವಿ ರುದ್ರಭಟ್ಟನ ಗ್ರಂಥದ ಮೇಲೆ ಅಭಿಮಾನವು ಬರಲು ಕಾರಣವೇನು? ಈ ಮಧ್ಯಕಾಲದಲ್ಲಿ ಅನೇಕ ಕನ್ನಡ ಗ್ರಂಥಗಳು ಹುಟ್ಟಿದ್ದರೂ ಈ ಗ್ರಂಥದ ಅಪಮಾನವೇ ತನಗಾದುದೆಂದು ಭಾವಿಸಲು ಕಾರಣವೇನು? ಎಂಬುದು ವಿಚಾರಾರ್ಹವಾದದ್ದು. ರುದ್ರಭಟ್ಟನೂ-ಲಕ್ಷ್ಮೀಶನೂ ಇಬ್ಬರೂ ದೇವನೂರಿನವರಾಗಿ ಶ್ರೀ ಲಕ್ಷ್ಮೀಕಾಂತನ ಭಕ್ತರೇ ಆದುದರಿಂದ ತನ್ನೂರಿನ ಕವಿಗೆ (ಕವಿಯ ಗ್ರಂಥಕ್ಕೆ) ಆದ ಅಪಮಾನವು, ತನಗಾದಂತೆ ಭಾವಿಸುವುದು ಸಹಜವಾದದ್ದು. ಇದಲ್ಲದೆ ಲಕ್ಷ್ಮೀಶನು ಜಗನ್ನಾಥ ವಿಜಯವನ್ನು ಹೆಚ್ಚು ಪ್ರೀತಿಸುತ್ತಿದ್ದನೆಂಬುದಕ್ಕೆ ಕೆಲವು ಉದಾಹರಣೆಗಳನ್ನು ತಿಳಿಸುತ್ತೇನೆ. (೧) ಜಗನ್ನಾಥ ವಿಜಯದಲ್ಲಿ ಹೊಯ್ಸಳ ರಾಜನನ್ನು ವರ್ಣಿಸಿರುವದರಿಂದ ರುದ್ರಭಟ್ಟನು ಹೊಯ್ಸಳ ರಾಜ್ಯದವನಾಗಿರಬೇಕು. ಹೊಯ್ಸಳ ರಾಜಧಾನಿಯು ದೇವನೂರಿಗೆ ೧೫-೨೦ ಮೈಲಿಯಲ್ಲಿರುವುದರಿಂದ ಇಬ್ಬರೂ ಒಂದೇ ನಾಡಿನವರು. (೨) ರುದ್ರಭಟ್ಟನು ತನ್ನ ಗ್ರಂಥದ ಪ್ರತಿ ಆಶ್ವಾಸದ ಕೊನೆಯಲ್ಲಿಯೂ "ಶ್ರೀ ಲಕ್ಷ್ಮೀಕಾಂತಶ್ರೀಪಾದ ಭಕ್ತಿಯುಕ್ತ." ಎಂದು ಹೇಳಿರುವನು. ಹೊಯ್ಸಳ ರಾಜ್ಯದ ರಾಜಧಾನಿಗೆ ಕೇವಲ ಸಮಿಾಪದಲ್ಲಿಯೇ ದೇವನೂರಿನಲ್ಲಿ ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಾಲಯವಿದೆ. ಲಕ್ಷ್ಮೀಶನೂ ದೇವನೂರಿನವನೇ ಆದ್ದರಿಂದ ಇಬ್ಬರ ಉಪಾಸನಾ ದೈವವೂ ಒಂದೇ. ಇಬ್ಬರೂ ದೇವನೂರಿನವರೇ ಇರಬಹುದು. (೩) ಸುಮಾರು ೪೭೫ ವರುಷಗಳು ಕಳೆದಿದ್ದರೂ, ಲಕ್ಷ್ಮೀಶನು ರುದ್ರಭಟ್ಟ ಕೃತ ಜಗನ್ನಾಥ ವಿಜಯವನ್ನು ಹೆಚ್ಚು ಪ್ರೀತಿಸುತ್ತಿದ್ದನೆಂಬುದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಮಹಾಕವಿಯಾದ ಲಕ್ಷ್ಮೀಶನು ಅನ್ಯಗ್ರಂಥಗಳಿಂದ ತಾನು ವಿಷಯ ಸಂಗ್ರಹಣ ಮಾಡಿ ತಾನೇ ರಚಿಸಿದೆನೆಂದು ಹೇಳಿಕೊಳ್ಳುವಷ್ಟು ಸಂಕುಚಿತ ಭಾವದವನಾಗದಿದ್ದರೂ ಜಗನ್ನಾಥ ವಿಜಯವನ್ನು ಅತಿಯಾಗಿ ಪ್ರೀತಿಸುತ್ತಿದ್ದನೆಂಬುದನ್ನು ಈ ಕೆಳಗಿನ ಕೆಲವು ಅನುಕರಣಗಳಿಂದ ತಿಳಿಯಬಹುದು.

ಜಗನ್ನಾಥ ವಿಜಯದ ೧ನೆ ಆಶ್ವಾಸ, ೪೪ನೆ ಪದ್ಯದ ಮುಂದಿನ ವಚನವೂ ಜೈಮಿನಿ ಭಾರತದ ೬ನೇ ಸಂಧಿ ೫ನೆಯ ಪದ್ಯವೂ ಒಂದನ್ನೊಂದು ಹೋಲುವುದು.

ಜಗನ್ನಾಥ ವಿಜಯದ ೨ನೇ ಆಶ್ವಾಸ, ೧ನೇ ಪದ್ಯದ ಮುಂದಿನ ವಚನವೂ ಜೈಮಿನಿ ಭಾರತದ ೨ನೇ ಸಂಧಿ ೭-೮-೯ ನೆ ಪದ್ಯಗಳೂ ಒಂದನ್ನೊಂದು ಹೋಲುವುದು.

ಜಗನ್ನಾಥ ವಿಜಯದ ೨ನೇ ಆಶ್ವಾಸ, ೨೫-೨೬-೨೭-೨೮ನೆ ಕಂದಗಳು ಜೈಮಿನಿ ಭಾರತದ ೬ನೆ ಸಂಧಿ-೧೫-೧೬-೧೭-೧೮ ನೇ ಪದ್ಯಗಳು ಒಂದನ್ನೊಂದು ಹೋಲುತ್ತವೆ. ಹೀಗೆಯೇ ಇನ್ನು ಅನೇಕ ಉದಾಹರಣೆಗಳು ದೊರೆಯುತ್ತವೆ.

ಮೇಲಿನ ಅನುಕರಣವನ್ನು ಯೋಚಿಸಿದರೆ ರುದ್ರಭಟ್ಟನಿಗೂ ಲಕ್ಷ್ಮೀಶನಿಗೂ ಕೇವಲ ಸಮೀಪ ಸಂಬಂಧವು ಕಾಣುವುದು. ಆ ಸಂಬಂಧವು ರುದ್ರಭಟ್ಟನು ತನ್ನೂರಿನ ಪುರಾತನ ಕವಿ ಎಂಬುದರಿಂದಲೂ ತನ್ನ ಕುಲದೈವದ ಭಕ್ತನೇ ಅವನೂ ಆಗಿದ್ದನೆಂಬುದರಿಂದಲೂ ಉಂಟಾಗಿದ್ದಿರಬಹುದು. ರುದ್ರಭಟ್ಟನು ದೇವನೂರಿನವನೇ ಆಗಿರಬಹುದೆಂದು ನಾನು ಭಾವಿಸುವೆನು.

ಮೇಲೆ ಬರೆದಿರುವ ಕಾರಣಗಳು ಶೋಧಕರಿಗೆ ನಿಜವೆಂದು ತೋರಿದರೆ ಮಹಾ ಕವಿಯಾದ ರುದ್ರಭಟ್ಟನ ಸ್ಮಾರಕೋತ್ಸವನ್ನು ದೇವನೂರಿನಲ್ಲಿ ನಡೆಸುವಂತೆ ಮಾಡಲೆಂದು ಪ್ರಾರ್ಥಿಸುವೆನು.

ಗಣೇಶನ ಲಾವಣಿ

ಲಾವಣಿ ವಿದ್ವಾನ್ ಆನೆಕಲ್ ಶ್ರೀ ಎಸ್. ನಂಜಪ್ಪನವರು

ರಂಗ್ ಚಾಲ್ ;

ಗಿರಿಜೆಯ ನಂದನ ಗಜವದನಾ । ಪರಮ ನಿರಂಜನ ನಲಿಯುತ
ಬಾ ಬಾ ಮನೆಯೊಳು ಜನನನನಾ ॥ಪ॥

ಭಾದ್ರಪದ ಶುದ್ಧ ಚೌತಿ ಸುದಿನಾ । ರುದ್ರನ ಸುಂದರಿ ತಿದ್ದಿದಳ್
ವಿಗ್ರಹ ಸದ್ಗುಣ ಮೂರ್ತಿಯನ ॥

ಭದ್ರವಾಗಿರಿಸೆ ಮಂದಗಮನಾ । ಕ್ಷುದ್ರರ ಬಿಡದೆಲೆ ಮುದ್ದು
ಕಂದಮ್ಮ ಕಾದಿರೋ ಬಾಗಿಲನ ॥

ಅರ್ಪಿಸುತೆ ತರಳೆ ಮಾಡೆ ಸ್ನಾನ । ನಿದ್ರಾ ರಮಣನು ಚಿದ್ರೂ
ಪನು ಬರೆ ತಡೆದ ಬಾಲನವನ ॥

ಉದ್ರೇಕದಿ ನಿಲ್ಲಿಸೆ ಪರಶಿವನಾ । ಛಿದ್ರವ ಮಾಡುವೆನೆನ್ನುತ
ಎದ್ದನು ಸಿದ್ಧರ ಮೋಹನ್ನ ॥

ಚಿಕ್ಕವುಡನ್ :

ನಡಿ ನಡೀ ಬಿಡೋದಿಲ್ಲ ನಿನ್ನ । ತಡಿ ತಡಿ ಹೋಗದೆ ಮುನ್ನ ॥
ನುಡಿ ಮೀರಬಾರದೋ ಯೆನ್ನ । ಗುಡಿಗುಡಿಸಿ ನಿಂತ ಗುಣರನ್ನ ॥

ರಂಗ್ ಚಾಲ್.

ಪರಿಪರೀ ರೋಷದಿ ತಡೆದವನಾ । ಪರಮ ನಿರಂಜನ ನಲಿಯುತ
ಬಾ ಬಾ ಸಭೆಯೊಳು ಜನನನನಾ ॥

ತಂದೆಯೊಳು ಕೋಪದಿಂದ ಕದನಾ । ಮುಂದಕೆ ಹೋಗೋ
ಯತಿ ಸನ್ಯಾಸಿ ಬಿಡೋದಿಲ್ಲ ನಿನ್ನ ॥

ಹಿಂದಕೆ ನಡಿ ನಡಿ ಸಂಪನ್ನಾ । ಮಂದ ಮನುಜ ನಿನ್ನಕೊಂದು
ಮಾತೆಯೊಳು ಪೊಂದುವೆ ಕೀರ್ತಿಯನ ॥

ನಿಂದಿಸುತೆ ಮುಂದಿಹ ಕಂದನನಾ । ಚಂದ್ರಶೇಖರಗೆ ಬಂದಿತು
ರೌದ್ರವು ಎತ್ತಿ ತ್ರಿಶೂಲವನ ॥

ಕಂದರವನ್ಹಾರಿಸೆ ಸುಂದರನಾ । ಮಂದಿರಕ್ಹೋಗುತ ಚಂದನ–
ಗಂಧಿಗೆ ಪೇಳದು ತಿಳಿಸೆ ಕದನ ॥

ಚಿಕ್ಕ ವುಡಾನ್.

ವಾರಿಜಾಕ್ಷಿ ಕೇಳೀ ಪರಿಯನ್ನ । ಯಾರೋ ಕುವರ ತಡೆದ ಬಾಗಿಲನ್ನ ॥
ಮೀರಿ ಪಂಥದಿ ನಿಲಿಸಿದನೆನ್ನ । ಹಾರಿಸಿದೆನ್ ಬಾಲನ್ ಶಿರವನ್ನ ॥

ಠಾನ್ ಚಾಲ್.

ಗೌರಿ ತಾ ಕೇಳುತ ಮೂರ್ಛೆಯನಾ । ಪರಮ ನಿರಂಜನ್ ॥ಪ॥

ಜೀವಿತೇಶನೇ ಮಗನ ನಿನ್ನಾ । ಭಾವಜ ರೂಪನೆ ನವ ಸುಕು
ಮಾರನ ಮರೆತೆಂತಿರುವದನ ॥

ಕಮಲದಳನಯನೆ ಬಾರೆ ಎನ್ನಾ । ಜೀವರತ್ನವೇ ಮುತ್ತಿನ
ಗಿಣಿಯೋ ಯಾವ ಗತಿಯೋ ಚಿನ್ನ ॥

ಶಿವ ಶಿವ ಭಾವಕ ಶೋಕವನಾ । ತವಕದಿ ಪ್ರೀತಿಸೆ ದೇವದೇವ
ನನು ತಾವರೆಮುಖಿಯನ್ನ ॥

ದೇವಿ ನೀ ಬಿಡು ಬಿಡು ಚಿಂತೆಯನಾ । ಸಾವಕಾಶವಿಲ್ಲದೆ ನಾ
ಕೊಡುವೆನೆ ಕಾಂತೆ ಕುವರನನ್ನ ॥

ಚಿಕ್ಕವುಡಾನ್.

ಕರೆಸುತೆ ಹಿರಿಯ ಮಗನನ್ನ । ವೀರಭದ್ರಗಿತ್ತ ನೇಮವನ್ನ ನೋಡು
ಕರಿಶಿರವ ತರಿಸಿ ಕ್ಷಣಗನ್ನಾ । ಯಿರಿಸುತ ಮಂತ್ರಿಸಿ ಮುಕ್ಕಣ್ಣ ॥

ರಂಗ್ ಚಾಲ್.

ಕರೆದನು ಪ್ರಾಣಕೊಟ್ಟು ಮಗನಾ । ಪರಮ ನಿರಂಜನ ನಲಿ
ಯುತಾ ಬಾ ಬಾ ಮನೆಯೊಳು ಜನನನನಾ ॥

ಎತ್ತಿ ಮುದ್ದಾಡೆ ಪ್ರೀತಿಲ್ ಘನನನಾ । ಅತಿಶಯ ಮಹ
ಸಂತೋಷದಿ ಸತಿ ಪತಿ ತಬ್ಬಿ ಪ್ರೀತಿಲ್ ಮಗನಾ ॥

ಅನುದಿನದ ಜೀವನ

—ಶ್ರೀ ಪಿ. ಸುಬ್ಬರಾಯ

ಅನುದಿನದ ಜೀವನದಿ
ಸವಿಯನ್ನು ಕಾಂಬಂತೆ
ಜೀವನವನನುಗೊಳಿಸು ದೊರೆಯೆ
ಕಾವವನು ಕೊಲುವವನು ನೀನೆ ಹರಿಯೆ ॥ ೧ ॥

ಜೀವನದಿ ಕಲಿಯುವಾ ಪಾಠ
ಬಹಳವದಿಹುದು, ನಿಜವಹುದು ।
ನಾನೇ ತಿಳಿದವನೆಂಬೋ ಅರಿವು ತಾ
ಜ್ಞಾನಹೀನನುಲಿಯೋ ಹರಿಯೆ ॥ ೨ ॥

ಹನಿಗೆ ಹನಿ ಸೇರಿಯದು
'ಜಲ ನಿಧಿಯು' ಎಂಬಂತೆ
ಅನುಭವಾಮೃತ ಮೇಣ್ ಬೋಧನೆಯು ಕೆಲವು
ಅಧ್ಯಯನ ಶಾಸ್ತ್ರಗಳ ಅರಿವು ಕೆಲವು ॥ ೩ ॥

ನೇಸರದು ಕ್ರಮಕ್ರಮದಿ
ಹೊಸ ಬೆಳಕ ಚೆಲ್ಲುವಂತೆ ।
ಬೇಸರವು ಬಾರದೋಲ್
ಹೊಸಜ್ಞಾನವದುಬೆಳಕು ॥ ೪ ॥

ದಿನಕರನು ಅನುದಿನವು
ಉದಿಸುತ್ತೆ ಬರುತಿಹನು ।
ಹೊಸತಾದ ಅನುಭವವ
ಸೂಸುತಲೆ ಬಹನು ॥ ೫ ॥

ಹಳತಾದ ಇಳೆಯನ್ನು
ಕಳೆಯಿಂದ ತುಂಬುವನು ।
ಮರೆತ ಅನುಭವವನೆಲ್ಲ
ತಾ ತರುತಲಿಹನು ॥ ೬ ॥

ಅನುದಿನದ ಜೀವನದಿ
ಬೇಸರವು ಬಾರದೋಲ್ ।
ಹೊಸತಾದ ರಸಿಕತೆಯ
ದಿನದಿನವು ತಹನು ॥ ೭ ॥

ಕರ್ಮಶೀಲನ ನೆಲೆಯ
ನಿರ್ಮಲದ ಬಾಳುವೆಯ ।
ಸರುವ ಜನ ಜೀವನಕೆ
ಅನುಗೊಳಿಸು ದೊರೆಯೆ ॥ ೮ ॥

ಯತಿಗಣಮುನಿ ಪತಿಗಳು ನಿನ್ನಾ । ಪ್ರಥಮ ಪೂಜಿಸಲಿ ಸತ್ಯ
ಸತ್ಯ ಮೂರ್ಲೋಕದಿ ನಿತ್ಯವಸ್ತು ವಾಹನ ॥

ಸುತನಿಗಿತ್ತಾಶೀರ್ವಾದವನಾ । ಸತ್ಯ ಸತ್ಯ ರಜತಾದ್ರೀಶರ
ಪುತ್ರನಹುದು ಗನ್ನ ॥

ಚಿಕ್ಕ ವುಡಾನ್.

ನಾಗೇಶರ ಗಣಪನ ಧ್ಯಾನ । ಸಭೆಯಲ್ಲಿ ಮಾಡಿದರ್ ಮಾನ ।
ನಿಗಮಾಗಮ ಶೃತಿಗೆ ಸಮಾನ । ಯೋಗ ಶಂಭುಲಿಂಗನ ನಿರಯಾನ ॥

ರಂಗ್ ಚಾಲ್.

ಶಿರದಿ ನವರತ್ನ ಕಲ್ಗಿ ಸನನಾ । ಪರಮನಿರಂಜನ ನಲಿಯುತ
ಬಾ ಬಾ ಸಭೆಯೊಳು ಜನನನಾ

ಪರಿಷತ್ತಿನಲ್ಲಿ ಉಡುಪಿ ಪೇಜಾವರ ಮಠಾಧೀಶ್ವರರಾದ

ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಉಪನ್ಯಾಸ

ಸಂಗ್ರಹಕಾರರು: ಗಮಕಿ ಎಂ. ರಾಘವೇಂದ್ರರಾಯರು,

"ಬಹಳ ಹಿಂದೆ ನಮ್ಮ ದೇಶದಲ್ಲಿ ಸಂನ್ಯಾಸಿಗಳು ಅಷ್ಟಾಗಿ ಸಮಾಜದ ಸಂಪರ್ಕವನ್ನೇ ಹೊಂದಿರಲಿಲ್ಲ! ಆದರೆ ಇತ್ತೀಚೆಗೆ ಪರಮತೀಯರು ತಮ್ಮ ಮತಗಳ ಪ್ರಚಾರವನ್ನು ಮಾಡುತ್ತಾ ಬಂದಂತೆ, ವೈದಿಕ ಸಿದ್ಧಾಂತದ ಸ್ಥಾಪನೆಯ ಸಲುವಾಗಿ ಇವರೂ ಸಮಾಜವನ್ನು ಕುರಿತು ಬೋಧಿಸಬೇಕಾಯಿತು! ಸಮಾಜದ ಭದ್ರತೆಗೆ ಧರ್ಮದರ್ಶಿಗಳಂತಿದ್ದ ಇವರು ಆ ಸಮಾಜದ ಲೇಪವನ್ನು ಪಡೆಯದೆ, ಸಮಾಜಕ್ಕೆ ಶುಭವನ್ನು ಕೋರುವ ಒಂದು ದೃಷ್ಟಿಯಿಂದ ಅದರ ಹಿತಚಿಂತಕರಾಗಿ ಧರ್ಮಪ್ರಚಾರವನ್ನು ನಡಸುತ್ತಾ ಬಂದರು. ಈ ದಿನದ ಉಪನ್ಯಾಸದ ವಿಷಯವನ್ನು ತೆಗೆದುಕೊಂಡರೆ ಹೇಗೆ ಸರ್ಕಾರವು ಒಂದು ರಾಷ್ಟ್ರದ ಕೇಂದ್ರವೋ ಹಾಗೆ ಒಂದು ಮಠವು ಒಂದು ಸಮಾಜದ ಕೇಂದ್ರವೆನ್ನಬಹುದು. ಈ ಸಮಾಜ ಮತ್ತು ಸರ್ಕಾರ ಇವೆರಡೂ ರಾಷ್ಟ್ರದೇಳಿಗೆಗೆ ತಾಯಿತಂದೆಗಳಿದ್ದಂತೆ. ಎಂದಮೇಲೆ ಇವುಗಳೆರಡೂ ಪರಸ್ಪರ ಸಹಕಾರದಿಂದಿರಬೇಕು. ಸರ್ಕಾರದ ಭದ್ರತೆಗೆ ಸಮಾಜದ ಬೆಂಬಲವೂ ಸಮಾಜದ ಏಳಿಗೆಗೆ ಸರ್ಕಾರದ ಅಭಯ ಪ್ರದಾನವೂ ಅತ್ಯಾವಶ್ಯಕವಾದುದು. ಇನ್ನು, ಸಮಾಜದ ಏಳಿಗೆಗೆ ಧರ್ಮಪೀಠಗಳ ಕರ್ತವ್ಯವೇನೆಂಬ ಬಗ್ಗೆ ಒಂದು ಮಾತು. ಸಮಾಜ ಸುಧಾರಣೆಯಿಂದ ಮಾತ್ರಕ್ಕೆ ಯಾವುದು ಪ್ರಾಚೀನವೋ ಅವುಗಳೆಲ್ಲವೂ ಅಸಮರ್ಥವೆಂಬ ಮತ್ತು ಹೊಸದರಲ್ಲೆಲ್ಲಾ ರಸವೆ ಇದೆಯೆನ್ನುವ ಕೆಲವರ ವಾದ ಅಷ್ಟೇನೂ ವಿಚಾರಪೂರಿತವಾದುದೆಂದು ಹೇಳಲು ಸಾಧ್ಯವಿಲ್ಲ. ಸಮಾಜವು ವಿಕಾಸಸ್ವಭಾವದಿಂದ ಕೂಡಿದುದಲ್ಲ! ಆದರೆ ಅದು ಪರಿವರ್ತನಶೀಲವುಳ್ಳದ್ದು. ಕಾಲಕ್ರಮದಲ್ಲಿ ಜೀರ್ಣವಸ್ತ್ರವನ್ನು ಬದಲಾಯಿಸುವಂತೆ, ಧರ್ಮ ನೀತಿಗಳೂ ಕಾಲಾನುಗುಣವಾಗಿ ಪರಿವರ್ತನೆಯಾಗಬೇಕೆಂಬ ವಾದವಿದೆ. ಇದು ನಡೆಯಲು ಈ ಬಗೆಯ ಅಧಿಕಾರವು ಹಿಂದೆ ಇದ್ದಿತು. ಕಲಿಯುಗದ ಆರಂಭದಲ್ಲಿ ಬ್ರಾಹ್ಮಣರು ಕಾಲಧರ್ಮ ಪರಿವರ್ತನೆ ಮಾಡಿದ ನಿದರ್ಶನಗಳಿವೆ. ಹೀಗೆ ಧರ್ಮದ ಬದಲಾವಣೆಗೆ ಎಷ್ಟು ಅಧಿಕಾರವಿಟ್ಟುಕೊಂಡಿದ್ದರೂ, ನಮ್ಮ ಅಭಿಪ್ರಾಯದಲ್ಲಿ, ಆ ಧಾರ್ಮಿಕ ವ್ಯಾಪ್ತಿಯು ಯಾವ ರೀತಿಯಲ್ಲೂ ಸಂಕುಚಿತವಾಗಲಿಲ್ಲವೆಂದೂ ಅದಕ್ಕೆ ಬದಲಾಗಿ ವಿಸ್ತರಿಸಲ್ಪಟ್ಟಿತೆಂದೂ, ಅವಶ್ಯವಾದ ಮತ್ತು ಅಗ್ರಾಹ್ಯವಾದೆಡಗಳಲ್ಲಿ ಸವಿವರವಾಗಿ ಪರಿವರ್ತಿಸಲ್ಪಟ್ಟು ಹೆಚ್ಚು ನಿಯಂತ್ರಣಗೊಂಡಿತೆಂದೂ ಹೇಳಬೇಕಾಗುವುದು. ಹೀಗೆ ಸಮಾಜವು ಪ್ರಗತಿಶೀಲವಾಗಲು ಧರ್ಮಸುಧಾರಣೆಯು ನಡೆದು, ಶುದ್ಧಿಗೊಂಡ ಉದಾಹರಣೆಗಳುಂಟು. ಒಬ್ಬ ಪತ್ನಿಗೆ ಮಕ್ಕಳಾದ ಮೇಲೆ ಮತ್ತೊಬ್ಬ ಪತ್ನಿಯನ್ನು ಸ್ವೀಕರಿಸುವುದೂ, ಬ್ರಾಹ್ಮಣರಲ್ಲಿ ಮದ್ಯಪಾನವೂ, ಪತಿ ಸತ್ತಮೇಲೆ ಅನ್ಯಪತಿಯ ಸ್ವೀಕಾರವೂ ಹಿಂದಕ್ಕೆ ನಮ್ಮ ದೇಶದಲ್ಲಿ ಇದ್ದಿತಾದರೂ ಇವುಗಳ ವಿಚಾರದಲ್ಲಿ ಪ್ರಾಜ್ಞರಿಂದ ಸುಧಾರಣೆ ನಡೆದು, ಸಮಾಜವು ಕಾಲಧರ್ಮಕ್ಕನುಗುಣವಾಗಿ ಪರಿಶುದ್ಧಿಯನ್ನು ಹೊಂದಿತು.

ಇತ್ತೀಚೆಗೆ ಮಹಾತ್ಮಾ ಗಾಂಧಿಯವರು ಯಾರೂ ಮದ್ಯಪಾನವನ್ನು ಮಾಡಬಾರದೆಂದು ಸಾರಿರುವ ತತ್ತ್ವವಾದರೂ ಈ ಮೇಲ್ಕಂಡ ಧಾರ್ಮಿಕ ದೃಷ್ಟಿಯಿಂದಲೇ ಹೊರತು ಅನ್ಯಥಾ ಇಲ್ಲ! ಇದು ಅತ್ಯಂತ ಅಭಿನಂದನೀಯವಾಗಿದೆ. ಹೀಗಿರುವಲ್ಲಿ ಈ ಹಿಂದೆಯೇ ಸಮಾಜದಲ್ಲಿ ನಡೆದಿರುವ ಮೇಲ್ಕಂಡ ಸುಧಾರಣೆಗಳನ್ನು ಬೇರೆ ಮಾಡಲು ಹೋದರೆ, ಮತ್ತೆ ಸಮಾಜವು ಅವನತಿ ಮಾರ್ಗವನ್ನೇ ಹಿಡಿದಂತಾಗಿ ಪಾಶವೀವೃತ್ತಿಗಿಳಿದಂತಾಗುವುದೆಂದು ಹೇಳಬೇಕಾಗುತ್ತದೆ. ಹಿಂದಕ್ಕೆ ನಮ್ಮ ದೇಶದಲ್ಲಿ ಯುದ್ಧಪ್ರಸಂಗಗಳೊದಗಿದಾಗ ಸ್ತ್ರೀಯರ, ಬಾಲಕರ, ವೃದ್ಧರ ಮತ್ತು ಅಶಕ್ತರ ರಕ್ಷಣೆಗೆ ಹೇಗೆ ಒಂದು ಸುವ್ಯವಸ್ಥೆಯಿದ್ದಿತೆಂಬುದನ್ನೂ, ಈಗ ನಮ್ಮ ಕಣ್ಣೆದುರಿನಲ್ಲಿ ಕಂಡು ಬರುತ್ತಿರುವ ಅನ್ಯಪ್ರಕಾರವಾದ ದೃಶ್ಯಗಳನ್ನೂ ನಾವು ವಿಚಾರ ಮಾಡಿದರೆ ಯಾವುದು ಸರಿ; ಯಾವುದು ತಪ್ಪು ಎಂಬುದನ್ನು

ಸುಲಭವಾಗಿ ನಿರ್ಧರಿಸಬಹುದಾಗಿದೆ. ಈಗಿನ ಕಾಲಕ್ಕೆ ಒಂದು ಸುಧಾರಣೆ ಬೇಕಾಗಿದ್ದರೆ, ಪುರುಷರು ಮತ್ತೊಬ್ಬ ಸ್ತ್ರೀಯನ್ನು ವಿವಾಹವಾಗುವುದನ್ನು ನಿಲ್ಲಿಸಲೆಂದು ನಾವು ಸೂಚಿಸುತ್ತೇವೆ!

ಈಗ ಒಂದು ಧರ್ಮಸುಧಾರಣೆಯ ವಿಚಾರದಲ್ಲಿ ಹಿಂದೂ ಕೋಡ್ ಮಸೂದೆಯೊಂದು ನಮ್ಮಗಳ ಮುಂದೆ ಬಂದಿದೆ. ಇದಕ್ಕೆ ಕೈ ಹಾಕಿರುವವರು, ಹಿಂದಿನ ನಮ್ಮ ಪದ್ಧತಿಯ ಪ್ರಭಾವದ ಅರಿವಿಲ್ಲದವರು! ರಾಮಾಯಣ ಭಾರತಗಳನ್ನು ಒಪ್ಪದವರು! ತಮ್ಮ ವೈಯಕ್ತಿಕ ದೃಷ್ಟಿಯಿಂದ ವಿಷಯ ಸಮರ್ಥನೆ ಮಾಡಿದವರು; ಎಲ್ಲರ ಅಭಿಪ್ರಾಯಗಳನ್ನೂ ವಿಚಾರಮಾಡದವರು! ಹೀಗಿರುವಲ್ಲಿ ನಾವು ಅವರ ಆ ಸುಧಾರಣೆಗಳನ್ನು ಸ್ವೀಕಾರ ಮಾಡುವುದೆಂತು? ಈ ವಿಚಾರದಲ್ಲಿ ಸಮಾಜದ ಪ್ರತಿಭಟನೆ ಬೇಕು. ಇಲ್ಲದಿದ್ದರೆ, ಆ ಶಾಸನಗಳೇ ಜಾರಿಗೆ ಬರುವ ಪಕ್ಷದಲ್ಲಿ, ಮೊದಲೇ ನಾವು ಪ್ರಜಾಭಿಪ್ರಾಯವನ್ನು ರೂಢಿಸಿ ಎಚ್ಚರದಿಂದ ಅವನ್ನು ತಡೆಯಲಾಗದಿದ್ದರೆ, ಕರ್ತವ್ಯಚ್ಯುತರಾಗುತ್ತೇವೆ! ಆದುದರಿಂದ ಸಮಾಜಸುಧಾರಣೆ ಎನ್ನುವದು ಯೋಗ್ಯವಾದ ಮತ್ತು ಸರ್ವತ್ರ ವ್ಯಾಪಕವಾಗುವ ರೀತಿಯಲ್ಲಿ ಧಾರ್ಮಿಕದೃಷ್ಟಿಯಿಂದ ನಡೆಯಬೇಕಾದುದು ಸಾಧುವೇ ಹೊರತು ಅನ್ಯಥಾ ಇಲ್ಲ. ಈ ಕೆಲಸವನ್ನು ಈಗ ಮಾಡಲು ಮಠಾಧೀಶರು ಮತ್ತು ಪೀಠಾಧಿಪತಿಗಳೇ ನೇರವಾಗಿ ಮಾಡಬೇಕೆಂಬ ನಿಯಮವೇನೂ ನಮಗೆ ಕಾಣುವುದಿಲ್ಲ! ಇದನ್ನು ಶಿಷ್ಯವೃಂದವೇ ಉಚಿತ ರೀತಿಯಲ್ಲಿ ಮಾಡಬಹುದಾಗಿದೆಯೆಂದರೆ ತಪ್ಪಾಗಲಾರದು! ಶಿಷ್ಯರ ಬೆಂಬಲದಿಂದಲೇ ಮಠಾಧೀಶರು. ಹೀಗಿರುವಾಗ ಅವರ ಸ್ಥಾನ ಮಾನ, ಅಧಿಕಾರಗಳು ದುರುಪಯೋಗವಾಗದಂತೆ ನೋಡಿಕೊಳ್ಳಲೂ ಮತ್ತು ಸದುಪಯೋಗವಾಗುವಂತೆ ಮಾಡಿಕೊಂಡು ಜ್ಞಾನ ಶಿಕ್ಷಣವನ್ನು ಪಡೆಯಲೂ ಶಿಷ್ಯವರ್ಗಕ್ಕೆ ಪೂರ್ಣಾಧಿಕಾರವುಂಟು। ಇನ್ನು ಪೀಠಾಧಿಪತಿಗಳ ವಿಷಯದಲ್ಲೂ ಒಂದು ಮಾತನ್ನು ಸರಸೋಕ್ತಿಯಲ್ಲಿ ಹೇಳುವುದಾದರೆ, ಅವರ ಕಮಂಡಲವು ಕಾಷ್ಠಮಯವಾಗಿದ್ದರೂ ಹೃದಯವು ಮಾತ್ರ ಸುವರ್ಣಮಯವಾಗಿರಬೇಕೇ ಹೊರತು ಇದರ ತಲೆಕೆಳಗಾಗಬಾರದು! ಒಟ್ಟಿನಲ್ಲಿ ಹಿಂದೂ ಧರ್ಮದ ರಕ್ಷಣೆಗಾಗಿ ಬಹಳ ಹಿಂದಕ್ಕೇ ನಮ್ಮ ದೇಶದಲ್ಲಿ ಧರ್ಮಪೀಠಗಳು ಸ್ಥಾಪಿಸಲ್ಪಟ್ಟವು. ಆ ಧರ್ಮರಕ್ಷಣೆಯ ಅಧಿಕಾರವನ್ನು ಶಿಷ್ಯವರ್ಗವು ಸರ್ಕಾರದಿಂದ ಪಡೆಯಬೇಕು. ಸರ್ಕಾರವು ಧಾರ್ಮಿಕ ವಿಚಾರಗಳಲ್ಲಿ ಪ್ರವೇಶಿಸುವುದನ್ನು ಸಕಾರಣವಾಗಿ ತಡೆಗಟ್ಟಬೇಕು.

ಸಂಗಮ

ಕಟ್ಟುವಡೆದು ಹರಿಯುವಾ
ಬಯಲ ಹಳ್ಳದಂದದಿ

ಹೆತ್ತ ಒಡಲನರಸುವಾ
ಕುರುಡು ಕುನ್ನಿಯಂದದಿ

ಮುಗಿಲ ಮರೆಯೊಳಿಣುಕುವಾ
ಹಗಲ ಚುಕ್ಕೆಯಂದದಿ

ಹರಿಯುತಿಹುದು! ಅರಸುತಿಹುದು! ಇಣುಕುತಿಹುದು! ಮನ್ಮನ
ಎಲ್ಲಿ ಇರುವೆ! ಎಂದಿಗಹುದು! ದೇವ ನಿನ್ನ 'ಸಂಗಮ'

—ಟಿ. ಜಿ. ಮುಡೂರು, ಕಲ್ಮಡ್ಕ.

ಭ್ರಾಂತಿ ವಿನೋದ

(The Comedy of Errors)

ಆಸ್ಥಾನ ವಿದ್ವಾನ್, ಶ್ರೀ ಬೆಳ್ಳಾವೆ ನರಹರಿಶಾಸ್ತ್ರಿ.

ಪೂರ್ವಕಾಲದಲ್ಲಿ ಸೈರಕ್ಯೂಸ್ ಮತ್ತು ಈಫೆಸಸ್ ಎಂಬ ರಾಜ್ಯಗಳಿಗೆ ಪರಸ್ಪರ ವೈರವುಂಟಾಗಿದ್ದುದರಿಂದ ಈಫೆಸಸ್ ದೇಶದಲ್ಲಿ ಒಂದು ಕಠಿನವಾದ ರಾಜಶಾಸನ ವೇರ್ಪಟ್ಟಿದ್ದಿತು. ಆದರಂತೆ ಸೈರಕ್ಯೂಸ್ ದೇಶದ ಮನುಷ್ಯನು ಯಾವನಾದರೂ ಈಫೆಸಸ್ ನಗರದಲ್ಲಿ ಕಾಣಿಸಿಕೊಂಡುದೇ ಆದರೆ ಅವನಿಗೆ ಮರಣದಂಡನೆ ಯಾಗಬೇಕೆಂತಲೂ, ಅಥವಾ ಅವನು ತನ್ನ ಪ್ರಾಣವನ್ನುಳಿಸಿಕೊಳ್ಳಬೇಕಾದರೆ ಅದಕ್ಕಾಗಿ ಒಂದು ಸಾವಿರ ಮಾರ್ಕ್ (ನಾಣ್ಯ)ಗಳನ್ನು ದಂಡವಾಗಿ ತೆರಬೇಕೆಂತಲೂ ನಿರ್ಣಯವಾಗಿತ್ತು.

ಹೀಗಿರುವಲ್ಲಿ ಸೈರಕ್ಯೂಸಿನ ವರ್ತಕನಾದ ಈಗನ್ ಎಂಬ ಮುದುಕನು ಈಫೆಸಸ್ ನಗರದಲ್ಲಿ ಗೋಚರನಾಗಲು, ಅಲ್ಲಿನ ರಾಜಸೇವಕರು ಆತನನ್ನು ತಮ್ಮ ಪ್ರಭುವಿನ ಬಳಿಗೆ ಕರೆತಂದು ನಿಲ್ಲಿಸಿದರು. ಈಗನ್ನನು ಭಾರಿಯಾದ ಹಣವನ್ನು ಕೊಟ್ಟು ತನ್ನ ಪ್ರಾಣವನ್ನು ಉಳಿಸಿಕೊಳ್ಳದಿದ್ದರೆ, ಮರಣದಂಡನೆಗೆ ಗುರಿಯಾಗಲೇಬೇಕಾಗಿ ಬಂತು. ಆದರೆ ಆತನಲ್ಲಿ ಹಣವಿರಲಿಲ್ಲ. ಪ್ರಭು ಆತನಿಗೆ ಮರಣ ಶಿಕ್ಷೆಯನ್ನು ವಿಧಿಸುವುದಕ್ಕೆ ಮುಂಚೆ ಆತನನ್ನು ಕುರಿತು, 'ಅಯ್ಯಾ, ನಿನ್ನ ವಿಚಾರವೇನು? ಈ ಈಫೆಸಸ್ ನಗರವು ಸೈರಕ್ಯೂಸಿನ ವರ್ತಕರ ಪ್ರವೇಶಕ್ಕೆ ಯಮಾಲಯದಂತಿರುವಲ್ಲಿ ನೀನೇತಕ್ಕೆ ಹೀಗೆ ಧೈರ್ಯವಾಗಿ ಈ ನಗರಕ್ಕೆ ಬಂದೆ? ಎಲ್ಲವನ್ನೂ ವಿವರವಾಗಿ ಹೇಳು, ಎಂಬುದಾಗಿ ಪ್ರಶ್ನೆ ಮಾಡಿದನು.

ಅದಕ್ಕೆ ಈಗನ್ನನು ಕೈಮುಗಿದು, 'ಮಹಾಪ್ರಭೂ, ನಾನು ಮರಣಕ್ಕೆ ಅಂಜುವುದಿಲ್ಲ. ಏತಕ್ಕೆಂದರೆ, ನನಗೆ ಒದಗಿರುವ ದುಃಖದಿಂದ ಈ ಜನ್ಮ ನನಗೆ ಸಾಕಾಗಿ ಹೋಗಿದೆ. ನನ್ನ ವಿಚಾರವನ್ನು ವಿವರಿಸಿ ಹೇಳುಕೊಳ್ಳುವುದಕ್ಕಿಂತಲೂ ಅತಿಶಯವಾದ ಕಷ್ಟವು ನನಗೆ ಬೇರೊಂದಿಲ್ಲ. ಆದರೂ ಪ್ರಭುಗಳಾದ ತಮ್ಮ ಆಜ್ಞೆಗೆ ವಿಧೇಯನಾಗಿ ವಿಜ್ಞಾಪಿಸಿಕೊಳ್ಳುವೆನು. ಲಾಲಿಸಬೇಕು' ಎಂಬುದಾಗಿ ತನ್ನ ವೃತ್ತಾಂತವನ್ನು ಈ ಮುಂದೆ ಹೇಳುವ ಮೇರೆಗೆ ಹೇಳತೊಡಗಿದನು :—

“ನಾನು ಸೈರಕ್ಯೂಸ್ ನಗರದಲ್ಲಿ ಹುಟ್ಟಿ, ವರ್ತಕತನದಿಂದ ಜೀವನಮಾಡಿಕೊಂಡು ಅನುಕೂಲೆಯಾದ ಪತ್ನಿಯೊಡನೆ ಸುಖದಿಂದಿದ್ದೆನು. ಒಂದಾವೃತ್ತಿ ನಾನು ಎಪಿಡೇಮ್ನಂ ನಗರಕ್ಕೆ ಹೋಗಬೇಕಾಗಿ ಬಂದಿತು. ಅಲ್ಲಿಗೆ ಹೋದಮೇಲೆ ಆರು ತಿಂಗಳಾದರೂ ಅಲ್ಲಿ ನನ್ನ ವ್ಯಾಪಾರಕಾರ್ಯಗಳು ಪೂರಯಿಸಲಿಲ್ಲ. ಇನ್ನೂ ಸ್ವಲ್ಪ ಕಾಲ ಅಲ್ಲಿಯೇ ನಿಲ್ಲಬೇಕಾಗಿ ಬಂದುದರಿಂದ ನನ್ನ ಹೆಂಡತಿಯನ್ನೂ ಅಲ್ಲಿಗೇ ಕರೆಯಿಸಿಕೊಂಡೆನು. ಆಕೆ ಬಂದ ಕೆಲವು ದಿನಗಳಮೇಲೆ ಗರ್ಭಿಣಿಯಾಗಿ ಇಬ್ಬರು ಅವಳಿ ಗಂಡು ಮಕ್ಕಳನ್ನು ಹಡೆದಳು. ಆ ಮಕ್ಕಳ ರೀತಿಯು ಪರಮಾಶ್ಚರ್ಯಕರವಾಗಿತ್ತು. ಅವರಿಬ್ಬರೂ ಪರಸ್ಪರ ಲವಲೇಶವೂ ವ್ಯತ್ಯಾಸವಿಲ್ಲದಂತೆ ಒಂದೇ ರೀತಿಯಾದ ರೂಪರೇಖೆಗಳಿಂದ ಕೂಡಿದ್ದರು. ಇದರಿಂದ ಅವರನ್ನು ಬೇರೆಬೇರೆಯಾಗಿ ಗುರುತಿಸುವುದಕ್ಕೇ ಸಾಧ್ಯವಾಗುತ್ತಿರಲಿಲ್ಲ. ಹೀಗೆ ನನ್ನ ಪತ್ನಿಯು ಅವಳಿಮಕ್ಕಳನ್ನು ಹೆತ್ತ ಸಮಯದಲ್ಲಿಯೇ ನಾವು ಇಳಿದುಕೊಂಡಿದ್ದ ಸತ್ರದಲ್ಲಿ ಒಬ್ಬಳು ಬಡ ಹೆಂಗಸು ಸಹ ಇಬ್ಬರು ಅವಳಿ ಗಂಡು ಮಕ್ಕಳನ್ನು ಪ್ರಸವಿಸಿದಳು. ಆ ಮಕ್ಕಳಿಬ್ಬರು ಸಹ ನನ್ನ ಮಕ್ಕಳಂತೆಯೇ ಪ್ರತ್ಯೇಕಪ್ರತ್ಯೇಕವಾಗಿ ಗುರುತಿಸಲೇ ಸಾಧ್ಯವಿಲ್ಲದಂತೆ ಒಂದೇ ಹೋಲಿಕೆಯಿಂದಿದ್ದರು. ಆ ಮಕ್ಕಳ ತಾಯಿತಂದೆಗಳು ಬಹಳ ಬಡವರಾದುದರಿಂದ ಅವುಗಳನ್ನು ಸಾಕಲಾರದೆ ವ್ಯಥೆಪಡುತ್ತಿದ್ದುದನ್ನು ನೋಡಿ, ನಾನು ಆ ದಂಪತಿಗಳಿಗೆ ಹಣವನ್ನು ಕೊಟ್ಟು ಆ ಮಕ್ಕಳನ್ನು ಕೊಂಡುಕೊಂಡೆನು. ಅನಂತರ ಆ ಬಾಲಕರಿಬ್ಬರೂ ನನ್ನ ಮಕ್ಕಳಿಬ್ಬರಿಗೂ ತಕ್ಕ ಸೇವಕರಾಗಬೇಕೆಂಬ ಉದ್ದೇಶದಿಂದ ಅವರನ್ನು ನನ್ನ ಬಳಿಯಲ್ಲಿಯೇ ಇಟ್ಟುಕೊಂಡು ಪೋಷಿಸಿದೆನು. ನನ್ನ ಮಕ್ಕಳು ಬಲು ಮುದ್ದಾ

ಗಿದ್ದರು. ನನ್ನ ಪತ್ನಿಯು ಅವರನ್ನು ಅತ್ಯಂತ ಪ್ರೀತಿಯಿಂದ ಸಾಕುತ್ತ ಹೆಮ್ಮೆಗೊಂಡಿದ್ದಳು. ಅವಳಿಗೆ ನಮ್ಮ ಸ್ವಂತ ಸ್ಥಳವಾದ ಸೈರಕ್ಯೂಸಿಗೆ ಹೊರಟುಹೋಗಬೇಕೆಂಬ ಕುತೂಹಲವು ದಿನದಿನಕ್ಕೆ ಅಧಿಕವಾಯಿತು. ಇದರಿಂದ ಪ್ರಯಾಣಮಾಡಬೇಕೆಂದು ನಿತ್ಯವೂ ನನ್ನನ್ನು ಪೀಡಿಸುತ್ತ ಬಂದಳು. ನನಗೆ ಇಷ್ಟವಿಲ್ಲದಿದ್ದರೂ ಅವಳ ಬಲಾತ್ಕಾರದಿಂದ ನಾನು ಸೈರಕ್ಯೂಸ್ ಪ್ರಯಾಣಕ್ಕೆ ಒಪ್ಪಿಕೊಂಡೆನು. ಎಲ್ಲರೂ ಹೊರಟು ಯಾವುದೋ ವಿಷಗಳಿಗೆಯಲ್ಲಿ ಹಡಗನ್ನೇರಿದೆವು.

ನಾವು ಎಪಿಡೇಮಂ ನಗರದಿಂದ ಸುಮಾರು ಒಂದು ಹರಿದಾರಿಯಷ್ಟು ದೂರ ಪ್ರಯಾಣಮಾಡಿ ಬರುವಷ್ಟರಲ್ಲಿ ಭಯಂಕರವಾದ ಬಿರುಗಾಳಿ ಪ್ರಾರಂಭವಾಯಿತು. ತರುವಾಯ ಕ್ಷಣಕ್ಷಣಕ್ಕೂ ಅದು ಪ್ರಬಲವಾಗಿ ಹಡಗು ಮುಳುಗಿಹೋಗುವ ಸ್ಥಿತಿಗೆ ಬಂದುದರಿಂದ ನಾವಿಕರು ಇನ್ನು ಹಡಗಿನಾಸೆ ಇಲ್ಲವೆಂದು, ತಮ್ಮತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಲು ನಮ್ಮನ್ನಲ್ಲಿಯೇ ಬಿಟ್ಟು ತಾವು ದೋಣಿಗಳಿಗೆ ಗುಂಪುಗುಂಪಾಗಿ ಇಳಿದು ತುಂಬಿಕೊಂಡರು. ಆಗ ಮಹಾಭೀಕರವಾದ ಆ ಬಿರುಗಾಳಿಯಲ್ಲಿ ಪ್ರತಿಕ್ಷಣವೂ ಹಡಗು ಒಡೆದುಹೋಗುವುದೆಂಬ ಭೀತಿಯಿಂದ ನಾವು ತಲ್ಲಣಿಸುತ್ತ ಅಲ್ಲಿಯೇ ನಿಲ್ಲಬೇಕಾಯಿತು. ನನ್ನ ಹೆಂಡತಿಯ ಭಯದುಃಖಗಳಿಗೆ ಪಾರವಿಲ್ಲವಾಯಿತು. ನಾಲ್ಕು ಮಂದಿ ಮಕ್ಕಳಿಗೂ ಭೀತಿ ಏನೆಂಬುದು ತಿಳಿಯದಿದ್ದರೂ, ತಾಯಿಯು ಅಳುತ್ತಿದ್ದುದರಿಂದ ಅವೂ ಗಟ್ಟಿಯಾಗಿ ಅಳುವುದಕ್ಕಾರಂಭಿಸಿದುವು. ನಾನು ಮರಣಕ್ಕೆ ಅಂಜದಿದ್ದರೂ ಅವರ ಗೋಳನ್ನು ನೋಡುವುದು ನನಗೆ ಬಹಳ ಕಷ್ಟವಾಯಿತು. ಅದರಿಂದ ಅವರ ಪ್ರಾಣಗಳನ್ನುಳಿಸಲು ಯಾವುದಾದರೂ ಉಪಾಯ ಮಾಡಲೇಬೇಕೆಂದಾಲೋಚಿಸಿ, ಕಡೆಗೆ, ಅಲ್ಲಿ ಉಪಯೋಗಿಸದೆ ಬಿದ್ದಿದ್ದ ಒಂದು ಸಣ್ಣ ಹಡಗಿನ ಕಂಬದ ಒಂದು ಕೊನೆಗೆ ನನ್ನ ಒಬ್ಬ ಮಗನನ್ನೂ ಮತ್ತೊಂದು ಕೊನೆಗೆ ಒಬ್ಬ ವಿಕ್ರೀತ ಬಾಲಕನನ್ನೂ ಕಟ್ಟಲು ನಿಶ್ಚಯಿಸಿ, ಮತ್ತೊಂದು ಕಂಬದ ಎರಡು ಕೊನೆಗಳಿಗೂ ಉಳಿದ ಇಬ್ಬರು ಮಕ್ಕಳನ್ನೂ ಕಟ್ಟುವಂತೆ ನನ್ನ ಹೆಂಡತಿಗೆ ಹೇಳಿದೆನು. ಹೀಗೆ ನಾವು ಪತಿಪತ್ನಿಯರು ಇಬ್ಬಿಬ್ಬರು ಮಕ್ಕಳ ರಕ್ಷಣೆಯನ್ನು ಕೈಕೊಂಡು ನಾವೂ ಆ ಮಕ್ಕಳ ಜೊತೆಯಲ್ಲಿಯೇ ಒಬ್ಬೊಬ್ಬರು ಒಂದೊಂದು ಕಂಬಕ್ಕೆ ನಮ್ಮನ್ನೂ ಬಿಗಿದುಕೊಂಡೆವು. ಹೀಗೆ ನಾವುಗಳು ಕಂಬಗಳಿಗೆ ಕಟ್ಟಿಕೊಳ್ಳದೆ ಇದ್ದಿದ್ದರೆ ಎಲ್ಲರೂ ಒಟ್ಟಿಗೆ ಮೃತರಾಗುತ್ತಿದ್ದೆವು. ಏತಕ್ಕೆಂದರೆ: ಹಡಗು ಬಿರುಗಾಳಿಯ ಹೊಡೆತದಿಂದ ಒಂದು ದೊಡ್ಡ ಬಂಡೆಗೆ ಬಡಿದು ಚೂರು ಚೂರಾಗಿ ಒಡೆದುಹೋಯಿತು. ನಾವುಗಳು ಸಣ್ಣಗಿದ್ದ ಆ ಕಂಬಗಳಿಗೆ ಕಟ್ಟಿಕೊಂಡಿದ್ದುದರಿಂದ ನೀರಿನಲ್ಲಿ ತೇಲಾಡುತ್ತಿದ್ದೆವು. ನನ್ನ ಬಳಿಯಲ್ಲಿ ಇಬ್ಬರು ಮಕ್ಕಳಿದ್ದುದರಿಂದ, ಬೇರೆ ಕಂಬಕ್ಕೆ ಕಟ್ಟಿಕೊಂಡಿದ್ದ ನನ್ನ ಪತ್ನಿಗೆ ಯಾವ ಸಹಾಯ ಮಾಡುವುದಕ್ಕೂ ನನಗೆ ಸಾಧ್ಯವಾಗಲಿಲ್ಲ. ಆಕೆ ಮಿಕ್ಕ ಎರಡು ಮಕ್ಕಳ ಸಂಗಡ ಸ್ವಲ್ಪಹೊತ್ತಿಗೆ ಗಾಳಿಯ ಹೊಡೆತದಿಂದ ಬಲುದೂರ ತೇಲಿಕೊಂಡು ಹೋದಳು. ಆದರೆ ಅವರು ಮೂವರೂ ನನ್ನ ಕಣ್ಣಿಗೆ ಗೋಚರವಾಗಿರುವಾಗಲೇ ಸುಮಾರು ಕಾರಿಂತ್ ಪ್ರಾಂತದಿಂದ ಬಂದಿದ್ದ ಮೀನು ಹಿಡಿಯುವ ಬೆಸ್ತರು ಅವರನ್ನು ತಮ್ಮ ದೋಣಿಗೆ ಕರೆದುಕೊಂಡರು. ಹೀಗೆ ಅವರಿಗೆ ಸಹಾಯ ದೊರೆತುದನ್ನು ನೋಡಿ ನನಗೆ ಅವರ ವಿಷಯವಾದ ಚಿಂತೆಯು ಕಡಮೆಯಾಯಿತು. ಆದರೆ ನನ್ನ ಜೊತೆಯಲ್ಲಿದ್ದ ನನ್ನ ಒಬ್ಬ ಮಗನನ್ನೂ ಒಬ್ಬ ಸೇವಕ ಬಾಲಕನನ್ನೂ ಕಾಪಾಡುವುದಕ್ಕಾಗಿ ಸಮುದ್ರದ ಅಲೆಗಳ ಸಂಗಡ ಹೋರಾಡುವುದು ನನಗೆ ಬಹಳ ಕಷ್ಟವಾಯಿತು. ಹೀಗೆ ಬಲುಹೊತ್ತು ಶ್ರಮಪಟ್ಟಮೇಲೆ ಕಡೆಗೆ ಅಲ್ಲಿ ಒಂದು ಹಡಗು ಸಂಧಿಸಿತು. ಅದರಲ್ಲಿದ್ದವರು ನಮ್ಮನ್ನು ಒಳಕ್ಕೆ ಕರೆದುಕೊಂಡು ನಮ್ಮ ಪ್ರಾಣಗಳನ್ನು ಉಳಿಸಿದರು. ಆ ನಾವಿಕರು ನನಗೆ ಪರಿಚಿತರಾಗಿದ್ದ ಕಾರಣ ನನ್ನನ್ನು ಬಹಳವಾಗಿ ಆದರಿಸಿ ಸಹಾಯಮಾಡಿ ನಮ್ಮನ್ನು ಸೈರಕ್ಯೂಸ್ ನಗರಕ್ಕೆ ಸುಖವಾಗಿ ಕರೆತಂದುಬಿಟ್ಟರು. ಅದು ಮೊದಲಾಗಿ ನನ್ನ ಪತ್ನಿಯೂ ಒಬ್ಬ ಮಗನೂ ಏನಾದರೆಂಬುದೇ ನನಗೆ ತಿಳಿದಿಲ್ಲ.

ಈಚೆಗೆ ನನ್ನ ಕಿರಿಯಮಗನು ಹದಿನೆಂಟು ವರ್ಷಗಳ ವಯಸ್ಸಾದಮೇಲೆ ತನ್ನ ತಾಯಿಯೂ ಸೋದರನೂ ಎಲ್ಲಿರುವರೆಂಬುದನ್ನು ತಿಳಿಯಬೇಕೆಂತಲೂ ತನ್ನ ಸೇವಕನ ಅಣ್ಣನು ಸಹ ಎಲ್ಲಿರುವನೆಂಬುದನ್ನು ತಿಳಿಯದಿರುವ ತನ್ನ ಸೇವಕನನ್ನು ಜೊತೆಯಲ್ಲಿ ಕರೆದುಕೊಂಡು ಅವರನ್ನು ಹುಡುಕಲು ಹೋಗಬೇಕೆಂತಲೂ ಅನೇಕವೇಳೆ ನನ್ನನ್ನು ಕೇಳಿಕೊಂಡನು. ಅವರನ್ನು ಹುಡುಕಲು ಈ ಮಗನನ್ನು ಕಳುಹಿಸಿ ಕಡೆಗೆ ಇವನನ್ನೂ ಕಳೆದುಕೊಳ್ಳಬೇಕಾದೀತೆಂಬ ಭಯದಿಂದ ನಾನು ಒಪ್ಪಲಿಲ್ಲ. ಕಟ್ಟಕಡೆಗೆ ಮಿತಿಮೀರಿದ ಅವನ ಬಲಾತ್ಕಾರದಿಂದ ನಾನು

ಅವರ ಪ್ರಯಾಣಕ್ಕೆ ಅನುಮತಿಯನ್ನು ಕೂಡಲೇ ಬೇಕಾಯಿತು.

ಅವನು ಹೊರಟುಹೋಗಿ ಇಲ್ಲಿಗೆ ಏಳು ವರ್ಷಗಳಾದುವು. ಅವನನ್ನು ಹುಡುಕಲು ನಾನು ಹೊರಟು ಊರೂರುಗಳನ್ನೂ, ದೇಶದೇಶಗಳನ್ನೂ ತಿರುಗಲಾರಂಭಿಸಿ ಐದು ವರ್ಷಗಳಾದುವು. ನಾನು ಬಹಳ ದೂರ ದೇಶವಾದ ಗ್ರೀಸ್‌ದೇಶಕ್ಕೂ ಹೋಗಿದ್ದುದಲ್ಲದೆ ಏಷ್ಯಾ ಖಂಡದ ಅಂಚಿನ ಸೀಮೆಗಳೆಲ್ಲವನ್ನೂ ಸುತ್ತಿದೆನು. ಹಿಂದಿರುಗಿಬರುತ್ತ ಜನರಿರುವ ಯಾವ ಸ್ಥಳವನ್ನೇ ಆಗಲಿ ಹುಡುಕದೆ ಬಿಡಬಾರದೆಂದು ಈ ಈಫೆಸಸ್ ಪಟ್ಟಣದಲ್ಲಿ ಹಡಗಿಳಿದೆನು. ಈ ದಿನಕ್ಕೆ ನನ್ನ ಜೀವಿತವು ಕಡೆಯಾಗಲೇಬೇಕು. ನನ್ನ ಪತ್ನಿಯೂ ಮಕ್ಕಳೂ ನಿಜವಾಗಿ ಜೀವದಿಂದಿರುವರೆಂಬ ವಾರ್ತೆಯು ತಿಳಿದರೆ ನಾನು ಸಂತೋಷದಿಂದ ಪ್ರಾಣಬಿಡುವೆನು "

ಎಂಬುದಾಗಿ ಹೇಳಿ ಈಗನನು ತನ್ನ ದುಃಖಪರಂಪರೆಗಳ ಕತೆಯನ್ನು ಮುಗಿಸಿದನು. ಹೀಗೆ, ದೇಶಾಂತರಗತನಾದ ಮಗನಲ್ಲಿನ ಪ್ರೀತಿಯ ದೆಸೆಯಿಂದ ಪ್ರಾಣನಾಶದ ಅನರ್ಥಕ್ಕೆ ಸಿಕ್ಕಿದ್ದ ಆ ನಿರ್ಭಾಗ್ಯನಾದ ತಂದೆಯ ವೃತ್ತಾಂತವನ್ನು ಕೇಳಿ ಪ್ರಭುವಿಗೆ ಬಹಳ ಕನಿಕರವುಂಟಾಯಿತು. ಆಗ ಆತನು ಮುದುಕನನ್ನು ಕುರಿತು, "ಅಯ್ಯಾ, ನಿನ್ನ ವೃತ್ತಾಂತವನ್ನು ಕೇಳಿ ನಮಗೆ ಬಹಳ ಕನಿಕರವುಂಟಾಗಿರುವುದು. ಇಲ್ಲಿನ ರಾಜಕೀಯ ಶಾಸನಕ್ಕೆ ವಿರೋಧವಿಲ್ಲದಿದ್ದ ಪಕ್ಷದಲ್ಲಿ ನಾವು ನಿನ್ನನ್ನು ನಿಜವಾಗಿಯೂ ಕ್ಷಮಿಸಿ ಬಿಟ್ಟುಬಿಡುತ್ತಿದ್ದೆವು. ಆದರೆ, ಆ ಶಾಸನದ ನಿಬಂಧನೆಗಳನ್ನು ಮಾರ್ಪಡಿಸಿ ನಿನ್ನನ್ನು ಕ್ಷಮಿಸುವುದೆಂದರೆ ನಮ್ಮ ಪ್ರತಿಜ್ಞೆಗೂ ನಮ್ಮ ಪ್ರಭುತ್ವದ ಘನತೆಗೂ ಕುಂದುಕಬರತಕ್ಕ ವಿಷಯವಾಗಿರುವುದು. ಆದರೆ ಇಲ್ಲಿ ಆಚರಣೆಯಲ್ಲಿರುವ ಕಠಿನಶಾಸನಕ್ರಮವನ್ನು ಅನುಸರಿಸಿ ನಿನ್ನನ್ನು ಈಗಲೇ ಮೃತ್ಯುವಿನ ವಶ ಮಾಡುವುದಕ್ಕೆ ಪ್ರತಿಯಾಗಿ ನಾವು ನಿನಗೆ ಒಂದು ದಿವಸದ ಅವಧಿಯನ್ನು ಕೊಡುವೆವು. ಅಷ್ಟರೊಳಗಾಗಿ ನೀನು ಯಾಚನೆಯಿಂದಲೋ ಸಾಲಮಾಡಿಯೋ ದಂಡದ ಒಂದು ಸಾವಿರ ಮಾರ್ಕುಗಳನ್ನು ತಂದುಕೊಟ್ಟು ನಿನ್ನ ಪ್ರಾಣವನ್ನುಳಿಸಿಕೊಳ್ಳಲು ಪ್ರಯತ್ನಿಸು." ಎಂಬುದಾಗಿ ಹೇಳಿದನು.

ಆ ಒಂದು ದಿನದ ಅವಧಿಯ ದಾನವು ಈಗನ್ನನಿಗೇನೂ ಉಪಕಾರವಾಗಿ ತೋರಲಿಲ್ಲ. ಏತಕ್ಕೆಂದರೆ ಈಫೆಸಸ್ ನಗರದಲ್ಲಿ ಆತನಿಗೆ ಯಾರ ಪರಿಚಯವೂ ಇಲ್ಲದಿದ್ದಕಾರಣ ತನ್ನ ಪ್ರಾಣವನ್ನುಳಿಸಲು ಒಂದು ಸಾವಿರ ಮಾರ್ಕುಗಳನ್ನು ಉಚಿತವಾಗಿಯಾಗಲಿ, ಸಾಲವಾಗಿಯಾಗಲಿ ಯಾರೂ ಕೊಡುವ ಸಂಭವವೇ ತೋರಲಿಲ್ಲ. ಇದರಿಂದ ಸಹಾಯಶೂನ್ಯನಾಗಿ ಪ್ರಾಣದ ಮೇಲಣ ಆಸೆಯನ್ನು ತೊರೆದು ಪ್ರಭುವಿನಾಜ್ಞೆಯಂತೆ ಆತನು ಸೆರೆಮನೆಯ ಅಧಿಕಾರಿಯ ಹಿಂದೆ ಕಾರಾಗೃಹಕ್ಕೆ ಹೊರಟುಹೋದನು.

ಈಫೆಸಸ್ ನಗರದಲ್ಲಿ ತನಗೆ ಪರಿಚಿತರಾದವರು ಯಾರೂ ಇಲ್ಲವೆಂಬುದಾಗಿ ಈತನು ಭಾವಿಸಿದ್ದನು. ಆದರೆ ಆತನು ತನ್ನ ಕಿರಿಯ ಮಗನನ್ನು ಹುಡುಕುವುದಕ್ಕಾಗಿ ಬಂದು ಪ್ರಾಣಾಪಾಯಕ್ಕೆ ಸಿಕ್ಕಿರುವ ಆ ಸಮಯದಲ್ಲಿಯೇ ಆ ಮಗನೂ ಮತ್ತು ಹಿರಿಯ ಮಗನೂ ಇಬ್ಬರೂ ಅದೇ ಈಫೆಸಸ್ ನಗರದಲ್ಲಿದ್ದರು.

ಈಗನ್ನಿನ ಇಬ್ಬರು ಮಕ್ಕಳೂ ಮುಖಭಾವದಲ್ಲಿಯೂ ಆಕಾರದಲ್ಲಿಯೂ ಪರಸ್ಪರ ಲೇಶವೂ ಭೇದವಿಲ್ಲದೆ ಒಂದೇ ರೀತಿಯಾಗಿದ್ದಂತೆಯೇ ಅವರಿಬ್ಬರಿಗೂ **ಆಂಟಿಫೋಲಸ್** ಎಂಬ ಒಂದೇ ಹೆಸರಿಡಲ್ಪಟ್ಟಿತ್ತು. ಮತ್ತು ಅವರಿಬ್ಬರ ಸೇವಕರಿಗೂ **ಡ್ರೋಮಿಯೋ** ಎಂಬ ಒಂದೇ ಹೆಸರಿತ್ತು. ಈಗನ್ನನು ಆ ಊರಿಗೆ ಬಂದು ಹಡಗಿಳಿದ ದಿನವೇ ಆತನು ಹುಡುಕುತ್ತ ಬಂದಿದ್ದ ಆತನ ಕಿರಿಯ ಮಗನಾದ ಸೈರಕ್ಯೂಸಿನ **ಆಂಟಿಫೋಲಸನು** ತನ್ನ ಸೇವಕನಾದ ಡ್ರೋಮಿಯೋನೊಡನೆ ಈಫೆಸಸ್ ನಗರಕ್ಕೆ ಬಂದಿಳಿದನು. ಅವನೂ ಸೈರಕ್ಯೂಸಿನ ವಣಿಜನೇ ಆಗಿದ್ದುದುದರಿಂದ ಅವನಿಗೂ ಅವನ ತಂದೆಗಾದಂತೆ ಪ್ರಾಣಾಪಾಯವುಂಟಾಗಬೇಕಾಗಿತ್ತು. ಆದರೆ ಅದೃಷ್ಟವಶದಿಂದ ಅವನ ಸ್ನೇಹಿತನೊಬ್ಬನು ಸಂಧಿಸಿ, ಸೈರಕ್ಯೂಸಿನಿಂದ ಆ ದಿನ ಬಂದಿದ್ದ ವಣಿಜನೊಬ್ಬನಿಗೆ ಒದಗಿದ್ದ ದುರ್ಗತಿಯನ್ನು ಅವನಿಗೆ ಹೇಳಿದನು. ಆ ಎಪಿಡೇಮಂ ನಗರದ ವಣಿಜನಂತೆ ವೇಷವನ್ನು ಧರಿಸಿ, ಅದೇ ಊರಿನವನಂತೆ ನಟಿಸುತ್ತಿರಬೇಕೆಂದು ಕಿರಿಯ ಆಂಟಿಫೋಲನನಿಗೆ ಯುಕ್ತಿಯನ್ನು ಹೇಳಿಕೊಟ್ಟನು. ಆಂಟಿಫೋಲಸನು ಅದರಂತೆ ನಡೆಯುವುದಾಗಿ ಒಪ್ಪಿಕೊಂಡನು. ಆಗ ತನ್ನ ಊರಿನ ವರ್ತಕನು ಪ್ರಾಣಾಪಾಯಕ್ಕೆ ಸಿಕ್ಕಿರುವನೆಂಬುದನ್ನು ಕೇಳಿ ಅವನಿಗೆ ಬಹಳ ವ್ಯಸನವಾಯಿತು. ಆದರೆ ಆ ವೃದ್ಧವಣಿಜನು ತನ್ನ ತಂದೆಯೆಂದೂಹಿಸಲು ಅವಕಾಶವಿರಲಿಲ್ಲ.

ಈಗನ್ನಿನ ಹಿರಿಯ ಮಗನಾದ ಆಂಟಿಫೋಲಸನು ಅದೇ ಈಫೆಸಸ್ ನಗರದಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದಲೂ ವಾಸವಾಗಿದ್ದನು. ಅವನು ಧನಿಕನಾಗಿದ್ದುದರಿಂದ ತನ್ನ ತಂದೆಯು ತೆರಬೇಕಾಗಿದ್ದ ಪ್ರಾಣರಕ್ಷಣೆಯ ದಂಡದ ಹಣವನ್ನು ಕೊಟ್ಟು ಆತನನ್ನು ಬಿಡಿಸಿಕೊಳ್ಳಬಲ್ಲವನಾಗಿದ್ದನು. ಆದರೆ ಈ ಈಫೆಸಸ್ಸಿನ ಆಂಟಿಫೋಲಸನಿಗೆ (ಹಿರಿಯಮಗನಿಗೆ) ಅವನ ತಂದೆಯ ವಿಚಾರವೇ ಗೊತ್ತಿರಲಿಲ್ಲ. ತಾಯಿಯ ಸಂಗಡ ಸಮುದ್ರದಲ್ಲಿ ಬಿದ್ದು ಒದ್ದಾಡುತ್ತಿದ್ದ ಇವನನ್ನು ಬೆಸ್ತರು ಹೊರಗೆ ತಂದು ಕಾಪಾಡಿದಾಗ ಇವನು ಇನ್ನೂ ಚಿಕ್ಕಮಗುವಾಗಿದ್ದ ಕಾರಣ ಅವನು ತನ್ನ ತಂದೆಯ ವಿಚಾರವನ್ನು ಅರಿಯಲು ಅವಕಾಶವಾಗಲಿಲ್ಲ. ತನ್ನನ್ನು ಬೆಸ್ತರು ಸಮುದ್ರದಿಂದ ಹೊರಗೆ ತಂದು ಕಾಪಾಡಿದರೆಂಬುದು ಮಾತ್ರ ಇವನಿಗೆ ಜ್ಞಾಪಕವಿದ್ದಿತೇ ಹೊರತು ತಂದೆ ತಾಯಿಗಳ ಜ್ಞಾಪಕ ಇವನಿಗೆ ಲೇಶವೂ ಇರಲಿಲ್ಲ. ಈ ಈಫೆಸಸ್ಸಿನ ಹಿರಿಯ ಆಂಟಿಫೋಲಸನನ್ನೂ ಇವನ ತಾಯಿಯನ್ನೂ ಮತ್ತು ಸೇವಕನಾದ ಡ್ರೋಮಿಯೋನನ್ನೂ ಸಮುದ್ರದಿಂದ ಹೊರಗೆ ತಂದ ಜಾಲಗಾರರು ಆ ಮಕ್ಕಳಿಬ್ಬರನ್ನೂ ಆಕೆಯ ಕೈಯಿಂದ ಬಲಾತ್ಕಾರವಾಗಿ ಕಿತ್ತುಕೊಂಡುಹೋಗಿ ಈಫೆಸಸ್ ನಗರದ ಪ್ರಭುವಿನ ಸೋದರಮಾವನಾದ ಡ್ಯೂಕ್‌ಮೆನರ್ಫ ಎಂಬ ಪ್ರಸಿದ್ಧ ಯೋಧನಿಗೆ ಮಾರಿದರು. ಆಗ ಆ ನಿರ್ಭಾಗ್ಯಳಾದ ತಾಯಿಯ ಗೋಳು ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲದಂತಾಯಿತು. ಡ್ಯೂಕ್‌ಮೆನಫನ್ನನು ತನ್ನ ಸೋದರಳಿಯನಾದ ಈಫೆಸಸ್ ನಗರದ ಪ್ರಭುವನ್ನು ನೋಡಲು ಬಂದಾಗ ತನ್ನ ಜೊತೆಯಲ್ಲಿಯೇ ಆ ಬಾಲಕರಿಬ್ಬರನ್ನೂ ಕರೆತಂದಿದ್ದನು. ಈಫೆಸಸ್ಸಿನ ಪ್ರಭುವು ಬಾಲಕನಾದ ಆಂಟಿಫೋಲಸನನ್ನು ನೋಡಿ ಮೆಚ್ಚಿ ಅವನನ್ನು ತನ್ನ ಬಳಿಯಲ್ಲಿಯೇ ಇಟ್ಟುಕೊಂಡು ಪೋಷಿಸಿ ಅವನು ವಯಸ್ಕನಾದಮೇಲೆ ಅವನನ್ನು ತನ್ನ ಸೈನ್ಯದಲ್ಲಿ ಒಬ್ಬ ಅಧಿಕಾರಿಯನ್ನಾಗಿ ನಿಯಮಿಸಿದನು. ಆ ಈಫೆಸಸ್ಸಿನ ಆಂಟಿಫೋಲಸನು ಅನೇಕ ಯುದ್ಧಗಳಲ್ಲಿ ಬಹಳ ಪರಾಕ್ರಮದಿಂದ ಕಾದಿ ಪ್ರಸಿದ್ಧನಾದುದಲ್ಲದೆ ವಿಪತ್ಕಾಲದಲ್ಲಿ ತನ್ನ ಪ್ರಭುವಿನ ಪ್ರಾಣವನ್ನೂ ಕಾಪಾಡಿದನು. ಪ್ರಭುವು ಇವನ ಸಾಹಸಕ್ಕೂ ಸ್ವಾಮಿಭಕ್ತಿಗೂ ಮೆಚ್ಚಿ ಇವನಿಗೆ ಈಫೆಸಸ್ ನಗರದ ಎಡ್ರಿಯಾನಾ ಎಂಬ ಶ್ರೀಮಂತ ಕನ್ಯೆಯನ್ನು ತಂದು ಮದುವೆಮಾಡಿ ಬಹಳವಾಗಿ ಬಹುಮಾನಿಸಿದನು. ಆದಿಯಿಂದಲೂ ಇವನ ಬಳಿಯಲ್ಲಿಯೇ ಸೇವೆಮಾಡಿಕೊಂಡಿದ್ದ ಡ್ರೋಮಿಯೋನು, ತನ್ನ ಯಜಮಾನನಾದ (ಈಫೆಸಸ್ಸಿನ) ಆಂಟಿಫೋಲಸನ ತಂದೆಯು ಆ ಊರಿಗೆ ಬಂದಾಗಲೂ ಅವನ ಬಳಿಯಲ್ಲಿಯೇ ಇದ್ದನು.

ಇತ್ತ ಸೈರಕ್ಯೂಸಿನ (ಕಿರಿಯ) ಆಂಟಿಫೋಲಸನು ಎಪಿಡೇಮಂ ನಗರದಿಂದ ತಾನು ಬಂದೆನೆಂದು ಹೇಳುವಂತೆ ಯುಕ್ತಿಯನ್ನು ಹೇಳಿಕೊಟ್ಟಿದ್ದ ಸ್ನೇಹಿತನನ್ನು ಬೀಳ್ಕೊಟ್ಟು ತಾನು ಊರಿನಲ್ಲಿ ಸಂಚರಿಸಿ ಜನರ ನಡೆನುಡಿಗಳನ್ನೂ ರೀತಿಯನ್ನೂ ತಿಳಿದುಬರುವುದಾಗಿ ಡ್ರೋಮಿಯೋವಿನ ಸಂಗಡ ಹೇಳಿ ಅವನ ಕೈಗೆ ಸ್ವಲ್ಪ ಹಣವನ್ನು ಕೊಟ್ಟು ತಾನು ಆ ದಿನ ಊಟಕ್ಕೆ ಹೋಗಬೇಕೆಂದಿರುವ ಭೋಜನಶಾಲೆಗೆ ಅವನನ್ನು ಕಳುಹಿಸಿದನು.

ಡ್ರೋಮಿಯೋ ಬಹಳ ವಿನೋದವಾದ ಆಳು. ಆಂಟಿಫೋಲಸ್ಸನಿಗೆ ಬೇಸರವಾದಾಗ ಆತನು ಈ ಸೇವಕನ ವಿಕಟಹಾಸ್ಯಗಳನ್ನು ನೋಡಿ ವಿನೋದವಾದ ಮಾತುಗಳನ್ನು ಕೇಳಿ ನಕ್ಕು ಸಂತೋಷಪಡುತ್ತಿದ್ದನು. ಇದರಿಂದ ಸ್ವಾಭಾವಿಕವಾಗಿ ಸೇವಕರಿಗೆ ಯಜಮಾನರಲ್ಲಿರಬೇಕಾದ ಸಲಿಗೆಗಿಂತಲೂ ಡ್ರೋಮಿಯೋವಿಗೆ ಆಂಟಿಫೋಲಸ್ಸಿನಲ್ಲಿ ಸಲಿಗೆಯು ಬಹಳ ಹೆಚ್ಚಾಗಿದ್ದಿತು. ಆದಕಾರಣ ಅವನು ತನ್ನಲ್ಲಿ ಧಾರಾಳವಾಗಿ ಮಾತನಾಡಲು (ಕಿರಿಯ) ಆಂಟಿಫೋಲಸನು ಅವಕಾಶ ಕೊಟ್ಟಿದ್ದನು.

ಆಂಟಿಫೋಲಸನು ಸೇವಕನನ್ನು ಭೋಜನಶಾಲೆಗೆ ಕಳುಹಿಸಿದಮೇಲೆ ತಾನು ತನ್ನ ತಾಯಿಯನ್ನು ಸೋದರನನ್ನೂ ಹುಡುಕುತ್ತ ಎಲ್ಲೆಲ್ಲಿ ತಿರುಗಿದರೂ ಅವರ ಸುದ್ದಿಸಮಾಚಾರಗಳೇ ತಿಳಿಯದೆ ವ್ಯಸನಪಟ್ಟು ತನ್ನಲ್ಲಿ ತಾನು, 'ಸಮುದ್ರದಲ್ಲಿ ಒಂದು ಜಲಬಿಂದುವು ತನ್ನ ಜೊತೆಯ ಮತ್ತೊಂದು ಬಿಂದುವನ್ನು ಹುಡುಕಲು ಹೋಗಿ ತಾನು ಏನಾದೆನೆಂಬುದು ತಿಳಿಯದೆ ಹೋಗುವಂತೆ ಈ ಪ್ರಪಂಚ ಮಹಾಸಮುದ್ರದಲ್ಲಿ ನಾನು ನನ್ನ ತಾಯಿಯನ್ನೂ ಸೋದರನನ್ನೂ ಹುಡುಕುತ್ತ ಬಂದು ಇಲ್ಲಿ ನನ್ನ ಗತಿಯೇನಾಗುವುದೆಂಬುದನ್ನೇ ತಿಳಿಯದೆ ಇರುವೆನು, ಎಂದು ಆಲೋಚಿಸುತ್ತ ನಿಂತನು.

ಹೀಗೆ ತನ್ನ ಪ್ರಯಾಣಗಳೂ ಪ್ರಯತ್ನಗಳೂ ಎಲ್ಲವೂ ನಿಷ್ಫಲವಾದುವೆಂದು ವ್ಯಸನದಿಂದ ನಿಂತಿರುವಲ್ಲಿ ಡ್ರೋಮಿಯೋ ಹಿಂದಿರುಗಿ ಬಂದಂತೆ ಅವನಿಗೆ

ಗೋಚರವಾಯಿತು. ಇಷ್ಟುಬೇಗನೆ ಅವನು ಹಿಂದಿರುಗಿ ಬಂದುದಕ್ಕೆ ಆಶ್ಚರ್ಯಪಟ್ಟು (ಸೈರಕ್ಯೂಸಿನ) ಆಂಟಿಫೋಲಸನು ಅವನನ್ನು ನೋಡಿ, 'ಇದೇನು ಇಷ್ಟು ಬೇಗ ಬಂದುಬಿಟ್ಟೆ? ಹಣವನ್ನೆಲ್ಲಿಟ್ಟು ಬಂದೆ?' ಎಂಬುದಾಗಿ ಪ್ರಶ್ನೆಮಾಡಿದನು ಇವನು ತನ್ನ ಡ್ರೋಮಿಯೋ ಅಲ್ಲವೆಂಬುದು ಪಾಪ! ಅವನಿಗೆ ತಿಳಿಯದು. ಇವನು ಆವನ ಸೋದರನಾದ ಈಫೆಸಸ್ಸಿನ ಆಂಟಿಫೋಲಸ್ಸಿನ ಸೇವಕನಾದ ಇನ್ನೊಬ್ಬ ಡ್ರೋಮಿಯೋ. ಸೈರಕ್ಯೂಸಿನ ಆಂಟಿಫೋಲಸನು ಇವನನ್ನು ತನ್ನ ಸೇವಕನೆಂದು ಭ್ರಮಿಸಿ ಅವನೊಡನೆ ಮಾತನಾಡಲಾರಂಭಿಸಿದನು. ಈ ಇಬ್ಬರು ಡ್ರೋಮಿಯೋಗಳೂ, ಇಬ್ಬರು ಆಂಟಿಫೋಲಸ್ಸುಗಳೂ ಈಗನ್ನನು ಪ್ರಭುವಿನೊಡನೆ ಹೇಳಿದ್ದಮೇರೆಗೆ ಚಿಕ್ಕಂದಿನಲ್ಲಿದ್ದಂತೆಯೇ ಈಗಲೂ ರೂಪದಲ್ಲಿ ಲೇಶವೂ ವ್ಯತ್ಯಾಸವಿಲ್ಲದೆ ಇದ್ದರು. ಆದ ಕಾರಣ ಸೈರಕ್ಯೂಸಿನ ಆಂಟಿಫೋಲಸನು ಈಫೆಸಸ್ಸಿನ ಡ್ರೋಮಿಯೋ ಎಂದು ತಿಳಿದು, 'ಇದೇನು ಇಷ್ಟು ಬೇಗನೆಬಂದೆ? ಹಣವನ್ನೆಲ್ಲಿಟ್ಟು ಬಂದೆ? ಎಂದು ಮೊದಲಾಗಿ ಮಾತನಾಡಿಸಿದುದೇನೂ ಆಶ್ಚರ್ಯವಲ್ಲ.

ಆಗ ಡ್ರೋಮಿಯೋನೂ ಸಹ ಸೈರಕ್ಯೂಸಿನ ಆಂಟಿಫೋಲಸನನ್ನು ತನ್ನ ಯಜಮಾನನಾದ ಈಫೆಸಸ್ಸಿನ ಆಂಟಿಫೋಲಸನೆಂದು ಭ್ರಮಿಸಿ 'ಸ್ವಾಮಿ, ನಾನೆಲ್ಲಿ ಬೇಗಬಂದೆ? ತಾವು ಮನೆಗೆ ಬರುವುದು ಬಹಳವಿಳಂಬವಾದುದರಿಂದ ಯಜಮಾನಿಯವರು ತಮ್ಮನ್ನು ಭೋಜನಕ್ಕೆ ಕರೆತರಬೇಕೆಂದು ಅಪ್ಪಣೆಮಾಡಿದರು. ಅಡಿಗೆಯೆಲ್ಲವೂ ಸಿದ್ಧವಾಗಿದೆ. ತಾವು ಮನೆಗೆ ಬರುವುದು ತಡವಾದರೆ ಅಡಿಗೆಯೆಲ್ಲವೂ ಆರಿ ತಂಗಳಾಗಿ ಬಿಡುವುದು ಎಂದು ಹೇಳಿ ಕರೆತರುವಂತೆ ನನ್ನನ್ನು ಕಳುಹಿಸಿದ್ದಾರೆ.' ಎಂದು ಹೇಳಿದನು.

ಸೈ-ಆಂಟಿಫೋಲಸ್—ಎಲವೋ, ಇದು ವಿನೋದಕ್ಕೆ ಸಮಯವಲ್ಲ. ಹಣವನ್ನೆಲ್ಲಿಟ್ಟು ಬಂದೆ ಹೇಳು.

ಈ-ಡ್ರೋಮಿಯೋ—ಓಹೋ! ತಾವು ಆ ದಿನ ಕೊಟ್ಟಿದ್ದ ಆರುಮಾರ್ಕ್‌ಗಳ ಹಣವೋ? ಅಮ್ಮನವರ ತೊಗಲಿನ ನಡುಕಟ್ಟನ್ನು ಸರಿಮಾಡಿಸುವುದಕ್ಕೆ ಆ ಹೊತ್ತೇ ಮೋಚಿಯವನಿಗೆ ಕೊಟ್ಟುಬಿಟ್ಟೆ ಸ್ವಾಮಿ, ನಾನದನ್ನು ಇಟ್ಟುಕೊಳ್ಳಲೇ ಇಲ್ಲ.

ಸೈ-ಆಂಟಿಫೋಲಸ್—ಎಲಾ, ಈಗ ನನಗೆ ನಿನ್ನ ಹಾಸ್ಯ ವಿನೋದಗಳು ಬೇಕಿಲ್ಲ. ಹಣವೆಲ್ಲಿ? ಮೊದಲು ಹೇಳು. ಇದು ನಮಗೆ ಪರಸ್ಥಳ, ಹೀಗಿರುವಲ್ಲಿ ಅಷ್ಟು ದೊಡ್ಡ ಮೊತ್ತವನ್ನು ನಿನ್ನ ಬಳಿಯಲ್ಲೇ ಇಟ್ಟುಕೊಳ್ಳುವುದನ್ನು ಬಿಟ್ಟು, ಬೇರೆಯವರ ವಶಕ್ಕೆ ನೀನು ಯಾವ ಧೈರ್ಯದಿಂದ ಕೊಟ್ಟೆ?

ಸೈರಕ್ಯೂಸಿನ ಆಂಟಿಫೋಲಸನನ್ನು ಈ ಡ್ರೋಮಿಯೋನು ತನ್ನ ಯಜಮಾನನೇ ಎಂದು ಭಾವಿಸಿ, ಆತನು ತನ್ನೊಡನೆ ವಿನೋದವಾಗಿ ಮಾತನಾಡುತ್ತಿರುವನೆಂದೂ ಭಾವಿಸಿ, ತಾನೂ ವಿನೋದವಾಗಿಯೇ, "ಸ್ವಾಮಿ, ತಾವು ಊಟಕ್ಕೆ ಕುಳಿತುಕೊಂಡಾಗ ಹೀಗೆ ವಿನೋದಮಾಡಬಹುದು. ಈಗ ತಮ್ಮನ್ನು ಬೇಗನೆ ಭೋಜನಕ್ಕೆ ಕರೆತರುವಂತೆ ಅಮ್ಮನವರು ನನ್ನನ್ನು ಕಳುಹಿಸಿಕೊಟ್ಟಿದ್ದಾರೆ. ಅಮ್ಮನವರೂ ಅವರ ತಂಗಿಯೂ ನಿಮ್ಮ ಜೊತೆಯಲ್ಲೇ ಊಟಮಾಡಲು ತಮಗಾಗಿ ಕಾದುಕೊಂಡಿದ್ದಾರೆ." ಎಂದನು.

ಸೈ-ಆಂಟಿಫೋಲಸ್—ಯಾವ ಅಮ್ಮನವರೋ?

ಈ-ಡ್ರೋಮಿಯೋ—ತಮ್ಮ ಪತ್ನಿಯವರು ಸ್ವಾಮಿ!

ಸೈ-ಆಂಟಿಫೋಲಸ್—ಎಲವೋ! ನನ್ನನ್ನು ಪರಿಹಾಸ್ಯ ಮಾಡುವೆಯಾ? ನನಗೆ ಪತ್ನಿಯೆಲ್ಲಿರುವಳೋ? ಅವಿವೇಕಿ!

ಎಂಬುದಾಗಿ (ಸೈರಕ್ಯೂಸಿನ) ಆಂಟಿಫೋಲಸನು (ಈಫೆಸಸಿನ) ಡ್ರೋಮಿಯೋನನ್ನು ಚೆನ್ನಾಗಿ ಹೊಡೆದನು. ಆ ಕೂಡಲೇ ಡ್ರೋಮಿಯನು ಮನೆಗೆ ಹೋಗಿ, (ಈಫೆಸಸಿನ) ಆಂಟಿಫೋಲಸಿನ ಪತ್ನಿಯನ್ನು ಕುರಿತು, "ತಾಯಿ, ಯಜಮಾನರು ಊಟಕ್ಕೆ ಬರುವುದಿಲ್ಲವಂತೆ. 'ನನಗೆ ಪತ್ನಿಯೆಲ್ಲಿರುವಳು?' ಎಂಬದಾಗಿ ಗದ್ದರಿಸಿ ನನ್ನನ್ನು ಹೊಡೆದು ಓಡಿಸಿದರು ತಾಯಿ," ಎಂದು ಹೇಳಿದನು.

ತನ್ನ ಗಂಡನು ತನಗೆ ಪತ್ನಿಯಿಲ್ಲವೆಂದು ಹೇಳಿದನೆಂಬ ಮಾತನ್ನು ಕೇಳಿ ಈಫೆಸಸ್ಸಿನ ಆಂಟಿಫೋಲಸಿನ ಪತ್ನಿಯಾದ ಎಡ್ರಿಯಾನಳಿಗೆ ಮಿತಿಮೀರಿದ ಕೋಪ ಬಂತು. ಅವಳು ಸಾಮಾನ್ಯವಾಗಿ ಅಸೂಯೆಯ ಸ್ವಭಾವದವಳಾದುದರಿಂದ ತನ್ನ ಗಂಡನು ತನಗಿಂತಲೂ ಹೆಚ್ಚುಪ್ರಿಯವಾದ ಮತ್ತೆ ಯಾವಳನ್ನೋ ಮೋಹಿಸಿರುವುದರಿಂದ ತನ್ನ ವಿಷಯವಾಗಿ ಇಷ್ಟು ಉದಾಸೀನವಾಗಿ ಮಾತನಾಡಿದ್ದಾನೆಂದು ಅತ್ಯಾಗ್ರಹದಿಂದ ನುಡಿದು ಗಂಡನನ್ನು ಬಹುಕಠೋರವಾಗಿಯೂ ಅಸೂಯೆ

ಯಿಂದಲೂ ಆಕ್ಷೇಪಿಸುತ್ತ ದೂರಿ ಹಾರಾಡಿದಳು. ಅವಳ ಪೋಷಣೆಯಲ್ಲೇ ಇದ್ದ ಅವಳ ತಂಗಿ ಲೂಸಿಯಾನಳು, ತನ್ನ ಅಕ್ಕನು ಅವಳ ಗಂಡನ ವಿಷಯವಾಗಿ ಮಾಡಿದ ಆಕ್ಷೇಪಣೆಗಳಿಗೂ ಕಲ್ಪನೆಗಳಿಗೂ ಕಾರಣವೇ ಇಲ್ಲವೆಂದು ಹೇಳಿ ಆಕೆಯನ್ನು ಸಮಾಧಾನಪಡಿಸಲು ಎಷ್ಟು ಪ್ರಯತ್ನಪಟ್ಟರೂ ಪ್ರಯೋಜನವಾಗಲಿಲ್ಲ.

ಇತ್ತಲಾ ಸೈರಕ್ಯೂಸಿನ ಆಂಟಿಫೋಲಸನು ಭೋಜನಶಾಲೆಗೆ ಹೋಗಿನೋಡಲು, ಡ್ರೋಮಿಯೋ ಹಣವನ್ನು ಜೋಪಾನವಾಗಿಟ್ಟುಕೊಂಡಿದ್ದನು. ಆಗ ಅವನು ತನ್ನನ್ನು ಹಿಂದೆ ವಿಶೇಷ ಸಲಿಗೆಯಿಂದ ಪರಿಹಾಸ್ಯ ಮಾಡಿದನೆಂಬುದಾಗಿ ಅವನನ್ನಾಕ್ಷೇಪಿಸುತ್ತಿರುವಷ್ಟರಲ್ಲಿ ಅಲ್ಲಿಗೆ ಈಫೊಸಸ್ಸಿನ ಆಂಟಿಫೋಲಸ್ಸಿನ ಪತ್ನಿಯಾದ **ಎಡ್ರಿಯಾನಳು** ತಂಗಿಯಾದ **ಲೂಸಿಯಾನಳ** ಸಂಗಡ ಬಂದಳು. ಅವಳು ಸೈರಕ್ಯೂಸಿನ ಆಂಟಿಫೋಲಸನನ್ನು ನೋಡಿ ಲೇಶವೂ ಅನುಮಾನವಿಲ್ಲದೆ ಅವನೇ ತನ್ನ ಗಂಡನೆಂದು ಭಾವಿಸಿ, ತನ್ನ ವಿಷಯದಲ್ಲಿ ಅವನು ನಡೆಯಿಸಿದ ವಿಚಿತ್ರ ವರ್ತನೆಯನ್ನು ಕುರಿತು ಆಕ್ಷೇಪಿಸಲಾರಂಭಿಸಿದಳು. ಸೈರಕ್ಯೂಸಿನ ಆಂಟಿಫೋಲಸನಿಗೆ ತಾನು ಎಂದೂ ಕಾಣದಿದ್ದ ಈ ಕುಪಿತಳಾದ ಸ್ತ್ರೀಯ ವಿಚಿತ್ರ ವರ್ತನದಿಂದ ಪರಮಾಶ್ಚರ್ಯವಾಯಿತು. ಆಗ ಅವಳು ಅವನನ್ನು ನೋಡಿ, "ಈಗ ನಾನು, ಎಡ್ರಿಯಾನಳಲ್ಲವೋ ? ನಿನ್ನ ಪತ್ನಿಯಲ್ಲವೋ ? ನಮ್ಮ ಮದುವೆಗೆ ಮೊದಲು ನೀನು ನನ್ನನ್ನು ಎಷ್ಟು ಪ್ರೇಮದಿಂದ ಆದರಿಸುತ್ತಿದ್ದೆ ! ಈಗ ಮಾತ್ರ ಮತ್ತೆ ಯಾವ ಸುಂದರಿಯೋ ನಿನ್ನ ಕಟಾಕ್ಷಕ್ಕೆ ಪಾತ್ರಳಾಗಿರಬೇಕು. ಅಲ್ಲವೇ ? ಪ್ರಿಯಾ, ನಾನು ಹೀಗೆ ನಿನ್ನ ಪ್ರೀತಿಗೆ ದೂರವಾಗಲು ಕಾರಣವೇನು ?" ಎಂದಳು.

ಆಶ್ಚರ್ಯಚಕಿತನಾದ (ಸೈ.) ಆಂಟಿಫೋಲಸನು, ಆಕೆಯನ್ನು ನೋಡಿ, "ನನ್ನನ್ನು ಕುರಿತು ಈ ಮಾತುಗಳನ್ನು ಹೇಳುವೆಯಾ ತಾಯಿ ? ಇದಕ್ಕೆ ಮುಂಚೆ ನಾನು ನಿನ್ನನ್ನು ನೋಡಿಯೇ ಇರಲಿಲ್ಲವಲ್ಲಾ ! ನಾನು ಈಫೊಸಸ್ ನಗರಕ್ಕೆ ಬಂದು ಇನ್ನೂ ಎರಡು ಘಂಟೆಗಳ ಕಾಲಮಾತ್ರವೇ ಆಗಿದೆ. ನಿಮ್ಮ ಊರು ನನಗೆ ಹೇಗೆ ಹೊಸದೋ ನಿನ್ನ ಮಾತುಗಳೂ ನನಗೆ ಹಾಗೆ ನೂತನವಾಗಿವೆ. ನನ್ನ ಬುದ್ಧಿಯೆಲ್ಲವನ್ನೂ ವೆಚ್ಚಮಾಡಿ ಆಲೋಚಿಸಿದರೂ ನೀನಾಡುವ ಮಾತುಗಳಲ್ಲಿ ಒಂದೂ ನನಗರ್ಥವಾಗಲೊಲ್ಲದು." ಎಂದನು.

ಎಡ್ರಿಯಾನಳು, 'ನೀನು ಈಗ ಸ್ವಲ್ಪ ಹೊತ್ತಿಗೆ ಮುಂಚೆ ನಿನ್ನ ಸೇವಕನೊಡನೆ ಆಡಿದಮಾತುಗಳೆಲ್ಲವನ್ನೂ ಮರೆಮಾಚಿ ಈಗ ನನ್ನೊಡನೆ ಹೀಗೆ ಮಾತನಾಡುವುದು ನಿನ್ನ ಘನತೆಗೆ ತಕ್ಕುದೇ ?' ಎಂಬದಾಗಿ ಅವನೊಡನೆ ಚರ್ಚಿಸಲಾರಂಭಿಸಿದಳು. (ಸೈ.) ಆಂಟಿಫೋಲಸನು ತಾನು ಆಕೆಯ ಗಂಡನಲ್ಲವೆಂದು ಎಷ್ಟು ವಿಧವಾಗಿ ಹೇಳಿದರೂ ಅವಳು ಕೇಳದೆ ಕಡೆಗೆ, ತನ್ನ ಜೊತೆಯಲ್ಲಿ ಮನೆಗೆ ಬರಲೇಬೇಕೆಂದು ಅವನೊಡನೆ ಹಠ ಹಿಡಿದಳು. ಅವಳ ಬಲಾತ್ಕಾರದ ಮುಂದೆ (ಸೈ.) ಆಂಟಿಫೋಲಸಿನ ಮಾತುಗಳೇನೂ ಪ್ರಯೋಜನಕ್ಕೆ ಬರಲಿಲ್ಲ. ಆದಕಾರಣ ಅವಳ ಕೈಯಿಂದ ಬಿಡಿಸಿಕೊಳ್ಳಲಾರದೆ ಕಟ್ಟಕಡೆಗೆ ಅವಳ ಹಿಂದೆ ತನ್ನ ಅಣ್ಣನ ಮನೆಗೆ ಹೊಗಲೇಬೇಕಾಗಿ ಬಂತು. ಅಲ್ಲಿ ಎಡ್ರಿಯಾನಳೂ ಅವಳ ತಂಗಿ ಲೂಸಿಯಾನಳೂ ಸಹ ಇವನ ಸಂಗಡ ಭೋಜನಕ್ಕೆ ಕುಳಿತುಕೊಂಡರು. ಎಡ್ರಿಯಾನಳು ಇವನನ್ನು ನಾಥನೆಂಬದಾಗಿಯೂ ಲೂಸಿಯಾನಳು ಭಾವನೆಂಬದಾಗಿಯೂ ಸಂಬೋಧಿಸಿ ಮಾತನಾಡತೊಡಗಿದರು. (ಸೈ.) ಆಂಟಿಫೋಲಸನಿಗೆ ಇದೆಲ್ಲವೂ ಅತ್ಯಾಶ್ಚರ್ಯಕರವಾಗಿದ್ದುದರಿಂದ, ತಾನು ಸ್ವಪ್ನದಲ್ಲಿ ಏನಾದರೂ ಇವಳನ್ನು ಮದುವೆಯಾಗಿದ್ದೆನೋ! ಅಥವಾ ಈಗ ತಾನು ನಿದ್ರೆಯಲ್ಲಿ ಕನಸು ಕಾಣುತ್ತಿರುವೆನೋ ಎಂಬದಾಗಿ ಆಲೋಚಿಸುತ್ತ ಅವನು ಮುಗ್ಧನಾಗಿಬಿಟ್ಟನು. ಇವನ ಸಂಗಡಲೇ ಅಲ್ಲಿಗೆ ಬಂದಿದ್ದ (ಸೈ.) ಡ್ರೋಮಿಯನನ್ನು ನೋಡಿ (ಈ.) ಡ್ರೋಮಿಯನ ಹೆಂಡತಿಯಾದ ಅಲ್ಲಿಯ ಪರಿಚಾರಿಣಿಯು ಇವನನ್ನೇ ತನ್ನ ಪತಿಯೆಂಬದಾಗಿ ಕರೆದು ಮಾತನಾಡಿಸುತ್ತಿದ್ದಳು. ಇದರಿಂದ ಡ್ರೋಮಿಯನ ಆಶ್ಚರ್ಯಕ್ಕೂ ಪಾರವೇ ಇಲ್ಲವಾಯಿತು.

ಹೀಗೆ (ಸೈ.) ಆಂಟಿಫೋಲಸನು ತನ್ನ ಸೋದರನ ಹೆಂಡತಿಯ ಜೊತೆಯಲ್ಲಿ ಕುಳಿತು ಊಟಮಾಡುತ್ತಿರುವಾಗ ಅವಳ ನಿಜವಾದ ಗಂಡ (ಈಫೋಸಸಿನ) ಆಂಟಿಫೋಲಸನು ತನ್ನ ಸೇವಕನಾದ (ಈಫೊಸಸಿನ) ಡ್ರೋಮಿಯನೊಡನೆ ಮನೆಗೆ ಬಂದನು. ಬಾಗಿಲಲ್ಲಿದ್ದ ಸೇವಕರಿಗೆ ಎಡ್ರಿಯಾನಳು ಯಾರನ್ನೂ ಒಳಕ್ಕೆ ಬಿಡಕೂಡದೆಂದು ಕಟ್ಟಪ್ಪಣೆಮಾಡಿದ್ದುದರಿಂದ ಅವರು ಕದವನ್ನು ತೆರೆಯಲಿಲ್ಲ. ಬಂದವರಿಬ್ಬರೂ ಎಡೆಬಿಡದೆ ಕದವನ್ನು ತಟ್ಟಿ, ತಾವು ಆಂಟಿಫೋಲಸ್ ಮತ್ತು ಡ್ರೋಮಿಯೋ ಎಂಬದಾಗಿ ಹೇಳಲು, ಒಳಗಿದ್ದ ಪರಿ

ಚಾರಿಣಿಯರು ನಕ್ಕು, ಆಂಟಿಪೋಲಸನು ಯಜಮಾನಿಯ ಜೊತೆಯಲ್ಲಿ ಊಟ ಮಾಡುತ್ತಿರುವನೆಂತಲೂ ಡ್ರೋಮಿಯನು ಅಡಿಗೆಯ ಮನೆಯಲ್ಲಿರುವನೆಂತಲೂ ಹೇಳಿದರು. ಹೊರಗೆ ಅವರಿಬ್ಬರೂ ಬಾಗಿಲು ಮುರಿದು ಬೀಳುವಂತೆ ತಟ್ಟಿ ಚಚ್ಚಿದರೂ ಬಾಗಿಲು ತೆರೆಯಲಿಲ್ಲ. ಕಡೆಗೂ (ಈಫೋಸಸಿನ) ಆಂಟಿಫೋಲಸನು ಒಳಗೆ ಪ್ರವೇಶಿಸಲು ಅವಕಾಶವಿಲ್ಲದೆ ರೇಗಿ ಹೊರಟು ಹೋದನು. ಆದರೆ ಒಳಗೆ ತನ್ನ ಹೆಂಡತಿಯ ಸಂಗಡ ಯಾವನೋ ಪುರುಷನು ಭೋಜನ ಮಾಡುತ್ತಿರುವನೆಂಬ ಮಾತನ್ನು ಕೇಳಿ ಅವನಿಗೆ ಪರಮಾಶ್ಚರ್ಯವಾಯಿತು.

ಇತ್ತ ಒಳಗಡೆ (ಸೈ.) ಆಂಟಿಫೋಲಸನು, ಊಟ ಮಾಡಿದ ಮೇಲೆಯೂ ಸಹ ಎಡ್ರಿಯಾನಳು ತನ್ನನ್ನು ಗಂಡನೆಂಬ ಭಾವದಿಂದ ಪ್ರಿಯನೆಂದು ಸಂಬೋಧಿಸುತ್ತಲೇ ಇದ್ದುದನ್ನೂ ಅಲ್ಲದೆ, ಅಡಿಗೆಯ ಪರಿಚಾರಿಣಿಯು (ಸೈ.) ಡ್ರೋಮಿಯನನ್ನು ತನ್ನ ಪತಿಯೆಂಬುದಾಗಿ ಕರೆಯುತ್ತಿದ್ದುದನ್ನೂ ಕೇಳಿ, ಮನಸ್ಸಿನಲ್ಲಿ ಬಹಳ ಬೇಸರಪಟ್ಟು ದಿಕ್ಕು ತೋರದಂತಾದನು. ಆಗ, ಸದ್ಯಕ್ಕೆ ಈ ಮನೆಯಿಂದ ಹೊರಗೆ ತಪ್ಪಿಸಿಕೊಂಡು ಹೋಗಲು ಏನಾದರೂ ನೆಪವು ಸಿಕ್ಕಿದರೆ ಸಾಕೆಂದು ಅವನು ಆಲೋಚಿಸುತ್ತಿದ್ದನು. ಏತಕ್ಕೆಂದರೆ, ಲೂಸಿಯಾನಳನ್ನು ನೋಡಿ ಇವನಿಗೆ ಬಹಳ ಸಂತೋಷವಾಗಿದ್ದರೂ ಅಸೂಯಾಪರಳಂತೆ ಕಾಣುತ್ತಿದ್ದ ಎಡ್ರಿಯಾನಳ ರೀತಿಯು ಅವನಿಗೆ ಅಸಹ್ಯವಾಗಿತ್ತು. ಅದರಂತೆಯೇ ಅಡಿಗೆಯಮನೆಯಲ್ಲಿದ್ದ ತರುಣಿಯನ್ನು ನೋಡಿ ತನ್ನ ಪತ್ನಿಯೆಂದು ಒಪ್ಪಿಕೊಳ್ಳಲು (ಸೈ.) ಡ್ರೋಮಿಯನಿಗೂ ಮನಸ್ಸಿಗೆ ಸಮಾಧಾನವಾಗಲಿಲ್ಲ. ಆದಕಾರಣ ಸ್ವಾಮಿಭೃತ್ಯರಿಬ್ಬರೂ ಈ ಹೆಂಡತಿಯರಿಂದ ತಪ್ಪಿಸಿಕೊಂಡು ಕಾಲಿಗೆ ಬುದ್ಧಿಹೇಳಿದರೆ ಅಷ್ಟು ಉತ್ತಮವೆಂಬುದಾಗಿ ಆಲೋಚಿಸಿದರು.

ಸೈರಕ್ಯೂಸಿನ ಆಂಟಿಫೋಲಸನು ಮನೆಯನ್ನು ಬಿಟ್ಟು ಹೊರಟಕೂಡಲೆ ದಾರಿಯಲ್ಲಿ ಒಬ್ಬ ಅಕ್ಕಸಾಲಿಗನು ಅವನನ್ನು ಸಂಧಿಸಿ, ಎಡ್ರಿಯಾನಳಂತೆಯೇ ಭ್ರಾಂತಿಪಟ್ಟು ಇವನೇ ಈಫೆಸಸಿನ ಆಂಟಿಪೋಲಸನೆಂದು ತಿಳಿದುಕೊಂಡು, ಅವನನ್ನು ಹೆಸರು ಹಿಡಿದು ಕೂಗಿ ಒಂದು ಚಿನ್ನದ ಹಾರವನ್ನು ಅವನಿಗೆ ಕೊಟ್ಟನು. (ಸೈ.) ಆಂಟಿಫೋಲಸನು ಅದು ತನ್ನದಲ್ಲವೆಂದು ಹಿಂದಕ್ಕೆ ಕೊಡುವಷ್ಟರಲ್ಲಿ ಅಕ್ಕಸಾಲಿಗನು, "ಸ್ವಾಮೀ, ತಾವು ಅಪ್ಪಣೆ ಕೊಟ್ಟಮೇರೆ ಇದನ್ನು ತಮಗಾಗಿಯೇ ಮಾಡಿ ತಂದಿದ್ದೇನೆ, ತೆಗೆದುಕೊಳ್ಳಿ" ಎಂಬುದಾಗಿ ಹೇಳಿ ಆ ಸ್ವರ್ಣಹಾರವನ್ನು ಅವನಲ್ಲಿಯೇ ಬಿಟ್ಟು ಹೊರಟು ಹೋದನು. (ಸೈ.) ಆಂಟಿಫೋಲಸನು ಆ ಕೂಡಲೆ ಸೇವಕನಾದ ಡ್ರೋಮಿಯನನ್ನು ನೋಡಿ, "ಡ್ರೋಮಿಯೊ, ಈ ಊರಿನಲ್ಲಿ ಬಹು ವಿಚಿತ್ರವಿಷಯಗಳೇ ನಡೆಯುತ್ತಿವೆ. ಇಲ್ಲಿನವರು ನನಗೇನೋ ಮಂಕು ಮಾಡಿ ನನ್ನ ಬುದ್ಧಿಯನ್ನೇ ಕೆಡಿಸಿಬಿಟ್ಟಿದ್ದಾರೆ. ಇಂತಹ ಸ್ಥಳದಲ್ಲಿ ನಾವು ಇನ್ನು ಒಂದು ಅರಗಳಿಗೆಯಾದರೂ ಇರಬಾರದು. ಆದುದರಿಂದ ಈಗಲೇ ಯಾವುದಾದರೂ ಹಡಗು ಹೋಡುವುದಾಗಿದ್ದರೆ ನಮ್ಮ ಗಂಟು ಮೂಟೆಗಳೆಲ್ಲವನ್ನೂ ಕಟ್ಟಿ ಅಲ್ಲಿಗೆ ತೆಗೆದುಕೊಂಡು ನಡೆ, ಹೊರಟು ಹೋಗೋಣ." ಎಂದು ಹೇಳಿಕಳುಹಿಸಿದನು

ಇದಾದ ಸ್ವಲ್ಪಹೊತ್ತಿಗೆ ಈಫೆಸಸಿನ ಆಂಟಿಫೋಲಸನಿಗೆ ಕೊಡಬೇಕಾಗಿದ್ದ ಸುವರ್ಣಹಾರವನ್ನು ಭ್ರಾಂತಿಯಿಂದ ಸೈರಕೂಸಿನ ಆಂಟಿಫೋಲಸನಿಗೆ ಕೊಟ್ಟು ಹೋದ ಅಕ್ಕಸಾಲಿಗನನ್ನು, ಅವನು ಒಬ್ಬ ವರ್ತಕನಿಗೆ ಕೊಡಬೇಕಾಗಿದ್ದ ಸಾಲದ ಹಣವನ್ನು ತೀರಿಸಲಿಲ್ಲವೆಂದು ರಾಜಾಧಿಕಾರಿಗಳು ಮಾರ್ಗದಲ್ಲಿ ಹಿಡಿದು ಬಂಧಿಸಿದರು. ಆ ಸಮಯಕ್ಕೆ ಸರಿಯಾಗಿ ಎಡ್ರಿಯಾನಳ ಗಂಡನಾದ ಈಫೆಸಸ್ಸಿನ ಆಂಟಿಫೋಲಸನು ಅಲ್ಲಿಗೆ ಬರಲು, ಅಕ್ಕಸಾಲಿಗನು, ತಾನು ಸುವರ್ಣಹಾರವನ್ನು ಕೊಟ್ಟಿದ್ದ ಆಂಟಿಫೋಲಸನು ಇವನೇ ಎಂಬ ಭ್ರಾಂತಿಯಿಂದ ಅವನನ್ನು ನೋಡಿ, "ಸ್ವಾಮೀ, ನಾನು ತಮಗೆ ಮಾಡಿಕೊಟ್ಟಿದ್ದ ಸ್ವರ್ಣಹಾರದ ಬೆಲೆಯನ್ನು ಕೊಟ್ಟುಬಿಡಿ, ಆ ಹಣಕ್ಕೂ ನನ್ನ ಸಾಲದ ಹಣಕ್ಕೂ ಸರಿಹೋಗಿ, ನಾನು ಬಂಧಮುಕ್ತನಾಗುವೆನು." ಎಂದು ಕೇಳಿದನು.

ಈಫೆಸಸ್ಸಿನ ಆಂಟಿಫೋಲಸ್—ಎಲ್ಲಿದೆ ಸ್ವರ್ಣಹಾರ? ಯಾರಿಗೆ ಕೊಟ್ಟೆ?

ಅಕ್ಕಸಾಲಿಗ—ಈಗ ಸ್ವಲ್ಪಹೊತ್ತಿಗೆ ಮುಂಚೆ ನಿಮ್ಮ ಕೈಗೇ ಕೊಟ್ಟೆನಲ್ಲಾ ಸ್ವಾಮೀ!

(ಈ) ಆಂಟಿಫೋಲಸ್—ಛೀ! ಏನು ನನ್ನೊಡನೆ ವಿನೋದವಾಡುವೆಯಾ? ಸ್ವರ್ಣಹಾರವನ್ನು ನೀನು ನನಗೆ ತಂದುಕೊಡುವವರೆಗೂ ನಾನು ನಿನಗೆ ಯಾವ ಹಣವನ್ನೂ ಕೊಡಬೇಕಾಗಿಲ್ಲ. ನಾನು ಕೊಡತಕ್ಕವನೂ ಅಲ್ಲ.

ಅಕ್ಕಸಾಲಿಗ—ಸ್ವಾಮಿ, ತಾವು ಹೀಗೆ ಹೇಳಬಾರದು. ನಿಮ್ಮ ಕೈಗೇ ನಾನು ತಂದುಕೊಟ್ಟ ಹಾರವನ್ನು ನೀವು ಇಲ್ಲವೆಂದು ಹೇಳುವುದು ನ್ಯಾಯವಲ್ಲ. ಇದು ನನಗೆ ಮಾನಚ್ಯುತಿಯಾಗುವ ಸಮಯ. ಆದುದರಿಂದ ದಯವಿಟ್ಟು ಹಣವನ್ನು ಕೊಟ್ಟುಬಿಡಿ.

ಹೀಗೆ ಅಕ್ಕಸಾಲಿಗನು ಎಷ್ಟು ವಿಧದಿಂದ ಹೇಳಿದರೂ ಆಂಟಿಫೋಲಸನು ತಾನು ಹಾರವನ್ನು ತೆಗೆದುಕೊಂಡಂತೆ ಒಪ್ಪಿಕೊಳ್ಳಲೇ ಇಲ್ಲ. ಇದರಿಂದ ಉಭಯರಿಗೂ ಮಾತುಕತೆಗಳು ಪ್ರಬಲವಾಗಿ ನಡೆದುವು. ಆಂಟಿಫೋಲಸರಿಬ್ಬರಿಗೂ ಪರಸ್ಪರ ರೂಪದಲ್ಲಿ ಸ್ವಲ್ಪವೂ ವ್ಯತ್ಯಾಸವೇ ಇಲ್ಲದಿದ್ದುದರಿಂದ, ಅಕ್ಕಸಾಲಿಗನು ತಾನು ಈಫೆಸೆಸ್ಸಿನ ಆಂಟಿಫೋಲಸನಿಗೇ ಸ್ವರ್ಣಹಾರವನ್ನು ಕೊಟ್ಟಿರುವೆನೆಂದು ತಿಳಿದು ತನ್ನ ಮಾತೇ ನಿಜವೆಂದು ಬಹಳವಾಗಿ ವಾದಿಸಿದನು. ಈಫೆಸಸಿನ ಆಂಟಿಫೋಲಸನಿಗೆ ಅವನಿಂದ ಹಾರವು ಬಂದಿಲ್ಲದಿದ್ದ ಕಾರಣ ತಾನು ಹೇಳುವುದೇ ನಿಜವೆಂದು ಅವನೂ ವಾದಿಸಿದನು. ಕಟ್ಟಕಡೆಗೆ ರಾಜಾಧಿಕಾರಿಯು ಅಕ್ಕಸಾಲಿಗನನ್ನು ಸೆರೆಮನೆಗೆ ಸೆಳೆದುಕೊಂಡೇಹೋಗುವಂತಾಯಿತು. ಆಗ ಅಕ್ಕಸಾಲಿಗನು ತನಗೆ ಆಂಟಿಫೋಲಸಿನಿಂದ ಬರಬೇಕಾಗಿದ್ದ ಸ್ವರ್ಣಹಾರದ ಬೆಲೆಯ ಹಣಕ್ಕಾಗಿ ಅವನನ್ನು ಬಂಧಿಸಬೇಕೆಂದು ಕೇಳಿಕೊಂಡಮೇರೆಗೆ ಆಂಟಿಫೋಲಸನನ್ನೂ ಅಧಿಕಾರಿಯು ಬಂಧಿಸಿ ಕರೆದುಕೊಂಡು ಹೋದನು. ಹೀಗೆ ಉಭಯರೂ ಕಾರಾಗೃಹಕ್ಕೆ ಹೋಗಬೇಕಾಗಿ ಬಂತು.

ಆಂಟಿಫೋಲಸನು ಅಧಿಕಾರಿಯೊಡನೆ ಕಾರಾಗೃಹಕ್ಕೆ ಹೋಗುತ್ತಿರುವಾಗ ದಾರಿಯಲ್ಲಿ ಸೈರಕ್ಯೂಸಿನ ಡ್ರೋಮಿಯೋ ಸಂಧಿಸಿ ಅವನನ್ನು ತನ್ನ ಯಜಮಾನನೆಂದು ತಿಳಿದು,– ಸ್ವಾಮಿ, ಹಡಗೊಂದು ಎಪಿಡೇಮಿರಿ ನಗರದ ಪ್ರಯಾಣಕ್ಕೆ ಸಿದ್ಧವಾಗಿದೆ. ಅದರ ಯಜಮಾನನು ಬಂದಕೂಡಲೇ ಹೊರಡುವುದಾಗಿ ತಿಳಿಯಿತು ಎಂದನು.

(ಈಫೆಸಸ್ಸಿನ) ಆಂಟಿಫೋಲಸ್–ಹುಚ್ಚಾ! ಎಪಿಡೇಮಂ ನಗರಕ್ಕೆ ಹೊರಡುವ ಹಡಗು ನನಗೇಕೋ?

ಸೈ–ಡ್ರೋಮಿಯೋ–ತಾವು ಈಗ ತಾನೇ ಗೊತ್ತುಮಾಡಿಕೊಂಡು ಬರುವಂತೆ ಹೇಳಲಿಲ್ಲವೇ ಸ್ವಾಮಿ? ಅದರಂತೆ ಹೋಗಿ ವಿಚಾರಿಸಿಕೊಂಡು ಬಂದೆನು.

(ಈಫೆಸಸಿನ) ಆಂಟಿಫೋಲಸ್–ನೀನೇನು ಕುಡಿದು ಗಿಡಿದು ಬಂದಿರುವೆಯೋ ಹೇಗೆ? ನಾನು ನಿನ್ನನ್ನು ಯಾವ ಕೆಲಸಕ್ಕಾಗಿ ಕಳುಹಿಸಿದೆ? ಹಗ್ಗವನ್ನು ತರಬೇಕೆಂದು ಪೇಟೆಗೆ ಕಳುಹಿಸಲಿಲ್ಲವೇನೋ ಹುಚ್ಚಾ?

ಸೈ – ಡ್ರೋಮಿಯೋ – ಸ್ವಾಮಿ, ತಾವು ನನ್ನನ್ನು ಪೇಟೆಗಲ್ಲ ಕಳುಹಿಸಿದ್ದು; ಸಮುದ್ರದ ರೇವಿಗೆ ಹೋಗಿ ಬಾರೆಂದು ಕಳುಹಿಸಿದಿರಿ.

(ಈಫೆಸಸಿನ) ಆಂಟಿಫೋಲಸ್–ನೀನು ಅಯೋಗ್ಯನು. ನಾನು ನಿನಗೆ ಸರಿಯಾಗಿ ಬುದ್ಧಿಗಲಿಸಬೇಕಾಗಿದೆ. ಆದಿರಲಿ, ನೀನೀಗಲೇ ಬೇಗನೆ ಮನೆಗೆ ಹೋಗಿ, ಎಡ್ರಿಯಾನಳನ್ನು ಕಂಡು, 'ಯಜಮಾನರನ್ನು ಬೀದಿಯಲ್ಲಿ ರಾಜಾಧಿಕಾರಿಗಳು ನಿರ್ಬಂಧಿಸಿ ಸೆರೆಮನೆಗೆ ಕರೆದುಕೊಂಡು ಹೋಗುತ್ತಿದ್ದಾರೆ. ಆದಕಾರಣ ಹಣದ (ಹೊಣೆ) ಜಾಮೀನು ಕೊಟ್ಟು ಬಿಡಿಸಿಕೊಳ್ಳಬೇಕಾಗಿದೆ. ಕಿಂಕಾಪಿನ ಬಟ್ಟೆ ಹಾಸಿರುವ ಮೇಜಿನಲ್ಲಿ ಹಣದ ಚೀಲವಿದೆ. ಅದನ್ನು ತೆಗೆದುಕೊಂಡು ಬರಬೇಕೆಂದು ಹೇಳಿದ್ದಾರೆ.' ಎಂದು ತಿಳಿಸಿ ಬೇಗನೆ ಅದನ್ನು ತರಬೇಕು. ಇದೋ, ಈ ಬೀಗದಕೈಯನ್ನು ತೆಗೆದುಕೊಂಡುಹೋಗಿ ಎಡ್ರಿಯಾನಳ ಕೈಗೆ ಕೊಡು."

ಎಂಬದಾಗಿ ಹೇಳಿ ಬೀಗದಕೈಯನ್ನು ಕೊಟ್ಟನು.

ಸೈರಕ್ಯೂಸಿನ ಡ್ರೋಮಿಯನು, ಯಾವ ಮನೆಯಿಂದ ತನ್ನ ಯಜಮಾನೂ ತಾನೂ ತಪ್ಪಿಸಿಕೊಂಡು ಹೊರಗೆ ಬಂದರೆ ಸಾಕೆಂದು ಹೊರಟು ಬಂದರೊ ಅದೇ ವಿಚಿತ್ರವಾದ ಮನೆಗೆ ಮತ್ತೆ ತನ್ನ ಯಜಮಾನನು ತನ್ನನ್ನು ಕಳುಹಿಸುತ್ತಿರುವುದನ್ನು ನೋಡಿ ಅವನಿಗೆ ಅತ್ಯಾಶ್ಚರ್ಯವಾಯಿತು. ಆದರೆ ತನ್ನ ಯಜಮಾನನಿಗೆ ಇಂತಹ ಕಷ್ಟದ ಸಮಯದಲ್ಲಿ ಪ್ರತಿಯಾಗಿ ಮಾತನಾಡಿದರೆ ಆತನು ಕೋಪಿಸುವನೆಂದು ಮರುಮಾತನಾಡದೆ ಒಪ್ಪಿ ಹೊರಟು, ತನ್ನಲ್ಲಿ ತಾನು, "ಅಯ್ಯೋ ಗ್ರಹಚಾರವೇ! ದೇವರೇ! ದೇವರೇ! ಏನು ಮಾಡಲಿ! ಹುಂ! ಆಳಾದವನು ಒಡೆಯನ ಅಪ್ಪಣೆಯಂತೆ ನಡೆಯದಿದ್ದರೆ ಯತ್ನವೇ ಇಲ್ಲ" ಎಂದು ಗೊಣಗಿಕೊಳ್ಳುತ್ತ ಹೊರಟು ಹೋದನು.

(ಮುಂದುವರಿಯುವುದು)

ನಾಲ್ಕು ನೂತನ ಕವಿಗಳು *

ಶ್ರೀ ಜಿ. ವರದರಾಜರಾವ್, ಎಂ. ಎ., ಚಿತ್ರದುರ್ಗ

ದಿನದಿನವೂ ವೃದ್ಧಿಯಾಗುತ್ತಿರುವ ಕನ್ನಡ ಸಾಹಿತ್ಯದಲ್ಲಿ ಆಗಿಂದಾಗ್ಗೆ ಹೊಸ ಹೊಸ ಲೇಖಕರು ಉದಯವಾಗುತ್ತಿರುವುದು ಸಂತೋಷಕರವಾದ ಸಂಗತಿಯೇಸರಿ. ಕರ್ಣಾಟಕದ ಯಾವ ಮೂಲೆಯಲ್ಲಿಯೇ ಆಗಲಿ, ಹೊಸದಾದ ವಾಣಿ ಕೇಳಿಬಂದರೆ ಕನ್ನಡಿಗಡನಿಗೆ ಹೆಮ್ಮೆಯುಂಟಾಗುವುದು ಸ್ವಾಭಾವಿಕ. ಈಚೀಚಿಗೆ ಕನ್ನಡದ ಕಾವ್ಯಪ್ರಪಂಚದಲ್ಲಿ ಮನಸೆಳೆಯುವ ಹೊಸಬರಹಗಾರರು ತೋರಿ ಬರುತ್ತಿರುವರು; ಹಲ ಕೆಲವರು ಹಿರಿದಾದ ಧ್ಯೇಯದಿಂದ ಹೊರಟವರು. ಕನ್ನಡದ ಕಾವ್ಯಪ್ರಪಂಚದಲ್ಲಿ ಮೊದಲಿನಂತೆ ಸುಲಭದಲ್ಲಿ ಈಗ ತೇರ್ಗಡೆಯಾಗುವುದಕ್ಕೆ ಸಾಧ್ಯವಿಲ್ಲ. ಅನೇಕ ಉತ್ತಮವಾದ ಕೃತಿಗಳು ರಚಿತವಾಗಿರುವುದೇ ಇದಕ್ಕೆ ಕಾರಣ. ಭಾವರಾಹಿತ್ಯ, ಭಾಷಾಸ್ಖಾಲಿತ್ಯ. ಬಂಧಶೈಥಿಲ್ಯಗಳಾವುವನ್ನೂ ಇಂದು ಸಹಿಸುವಂತಿಲ್ಲ, ಹಾಗೆಯೇ ವಿಷಯದ ಪುನರುಚ್ಚಾರಣೆ, ನೀರಸವಾದ ಅನುಕರಣೆ, ನಿಸ್ಸಾರವಾದ ನೀತಿ ಪ್ರತಿಪಾದನೆ ಇವುಗಳೂ ಇಂದು ಮನ್ನಣೆಪಡೆಯಲಾರವು, ಪ್ರಥಮ ಪ್ರಯತ್ನಗಳಾದರೂ, ಉತ್ತಮ ಕೃತಿಗಳ ಆದರ್ಶವಿರುವಾಗ ಸುಲಭದಲ್ಲಿ ಪ್ರಶಂಸೆಯನ್ನು ಗಳಿಸಲಾರವು. ಈಗ ನಮ್ಮ ಮುಂದೆ ನಾಲ್ಕು ನೂತನ ಕವನ ಸಂಗ್ರಹಗಳಿವೆ. ಇವುಗಳ ಲೇಖಕರು ತಮ್ಮ ಮೊದಲ ಸಂಗ್ರಹವನ್ನು ನಮಗೆ ನೀಡಿರುವರು. "ನನ್ನ ಹಾಡು" ಎಂಬ ಕವನ ಸಂಗ್ರಹದ ಕರ್ತೃಗಳಾದ ಶ್ರೀ ಬ. ಗಿ. ಯಲ್ಲಟ್ಟಿಯವರು ಬನಹಟ್ಟಿಯ ನಿವಾಸಿಗಳು. "ವಿಷಸಿಂಧು" ಎಂಬ ಸಂಕಲನದ ಕರ್ತೃಗಳಾದ ಶ್ರೀ ಎಂ. ಅಕಬರ ಆಲಿ, ಅವರು ಬೆಳಗಾವಿಯವರು, "ಪ್ರತಿಧ್ವನಿ" ಎಂಬ ಕವನ ಸಂಗ್ರಹದ ಕರ್ತೃಗಳಾದ ಶ್ರೀ ಬಿ. ಡಿ. ಗಣಪತಿಯವರು ಕೊಡಗು ಪ್ರಾಂತದವರು. "ಹೃದಯ ವೀಣೆ" ಎನ್ನುವ ಕಾವ್ಯ ಸಂಕಲನದ ಕರ್ತೃಗಳಾದ ಶ್ರೀ ಅಡಿಬಾಯಿ ರಾಮಣ್ಣ ಶೆಟ್ಟಿಯವರು ಧರ್ಮಸ್ಥಳಕ್ಕೆ ಸೇರಿದವರು. ಈ ನಾಲ್ಕು ನೂತನ ಕವಿಗಳು ಕನ್ನಡ ನಾಡಿನ ನಾನಾ ಕಡೆಗಳಲ್ಲಿ ಇದ್ದು ಹೊಸದಾಗಿ ಕಾವ್ಯ ಪ್ರಪಂಚಕ್ಕೆ ಕಾಲಿಟ್ಟಿರುತ್ತಾರೆ. ಈ ತರುಣ ಕವಿಗಳ ಗುರಿ, ಸಿರಿ, ಧಾಟಿ, ಧ್ವನಿಗಳನ್ನು ಸ್ವಲ್ಪಮಟ್ಟಿಗೆ ಸಮಾಲೋಚಿಸುವುದೇ ಈ ವಿಮರ್ಶೆಯ ಉದ್ದೇಶ.

ಶ್ರೀ ಬ. ಗಿ. ಯಲ್ಲಟ್ಟಿಯವರ "ನನ್ನ ಹಾಡು" ಎಂಬ ಕವನ ಸಂಗ್ರಹದಲ್ಲಿ ಮೂವತ್ತು ಮೂರು ಕವಿತೆಗಳಿವೆ. ಶ್ರೀ ವಿ. ಕೃ. ಗೋಕಾಕರು ಮುನ್ನುಡಿಯನ್ನು ಬರೆದಿರುವುದಲ್ಲದೆ, ಶ್ರೀ ಮಧುರ ಚೆನ್ನರು ಕವಿಗಳ ಕೃತಿಪರಿಚಯವನ್ನು ವಿಸ್ತಾರವಾಗಿ ಮಾಡಿಕೊಟ್ಟಿರುತ್ತಾರೆ. "ನನ್ನ ಹಾಡು" ಕವನ ಸಂಕಲನವನ್ನು ಒಂದು ನಿಟ್ಟಿನಲ್ಲಿ ಓದಿದ್ದೇ ಆದರೆ ಕವಿಯ ದೃಷ್ಟಿ ಹೇಗೆ ಸಾಗಿದೆಯೆಂದು ಗೋಚರವಾಗುವುದು. ಇಲ್ಲಿನ ಕವನಗಳಲ್ಲಿ ಬಹುಪಾಲು ಆತ್ಮಗೀತಗಳು. ಕವಿ ತನ್ನ ಮನಸ್ಸು ಹಾಗೂ ದೈವ ಸಂಬಂಧದ ಬಗ್ಗೆ ಪದೇಪದೇ ಹಾಡಿಕೊಂಡಿರುತ್ತಾರೆ. ಮೊದಲನೆಯ ಕವಿತೆಯಾದ "ಪ್ರಾರ್ಥನೆ"ಯಲ್ಲಿ ಅಂತರಂಗದ ಸತ್ವವನ್ನು ಕುರಿತು ಆಹ್ವಾನವೀಯುವರು: "ಹೊರಗೆಬಾಧೆ, ಹೊರಗೆ ಬಾs ಒಳಗಿನಮಲ ಸತ್ತ್ವವೆ! ಇರವಿನಸ್ತವ್ಯಸ್ಥ ಸ್ಥಿತಿಯ ಮಾಣಿಸು ಘನವಸ್ತುವೆ!" ಎಂದು ಮೊದಲಾಗಿ, "ಹೊರಗೆ ಬಾs ಹೊರಗೆ ಬಾs ಒಳಗಿನಮಲ ಸತ್ತ್ವವೆ? ನೈಜಸ್ಥಿತಿಯನರಿವ ಮತಿಯ ಕರುಣಿಸು ಘನವಸ್ತುವೆ!" ಎಂದು ಮುಂದುವರಿದು, ಆತ್ಮಸಾಕ್ಷಿಯ ಮೊರೆಯಲ್ಲಿ ಮುಕ್ತಾಯವಾಗುವುದು. ಈ ಭಾವನೆ ನಿಜವಾಗಿಯೂ ಗಂಭೀರವಾದುದು ಮತ್ತು ಧೀರವಾದುದು. ಆತ್ಮಚೇತನವನ್ನು ಅರಿತ ಕವಿ, ದೇವರ ಸಾನ್ನಿಧ್ಯವನ್ನು ಮರೆಯಲಾರನು. ಆಟವಾಡಿಸುವವನು ಪರಮಾತ್ಮ; ಆತನ ಕೈಗೊಂಬೆ ತಾನು ಎನ್ನಿಸುವುದು. ದೇವರು ಮೇಲೆತ್ತಿ ಕುಣಿಸಿದರೂ ಸೊಗಸು; ಕೆಳಗಿಳಿಸಿ ತಂದರೂ ರಮ್ಯ ಎನ್ನುವ ಭಾವ ಮನೋಹರವಾಗಿದೆ. "ಮೇಲೆತ್ತಿ

* ೧. "ನನ್ನ ಹಾಡು":—ಲೇಖಕರು: ಶ್ರೀ ಬ. ಗಿ. ಯಲ್ಲಟ್ಟಿ ಅವರು; ಪ್ರಕಾಶಕರು: ಶಾಂತಿ ಸೇವಾಸದನ, ಸೇಡಬಾಳ; ಕ್ರೌನ್ ಅಷ್ಟದಳ: ಪುಟಗಳು XXIV + ೭೫ ಬೆಲೆ: ರೂ. ೧-೮-೦. ೨. "ವಿಷಸಿಂಧು":-ಲೇಖಕರು: ಶ್ರೀ ಎಂ. ಅಕಬರ ಆಲಿ ಅವರು; ಪ್ರಕಾಶಕರು: ಶೋಭಾ ಗ್ರಂಥಮಾಲಾ, ಬೆಳಗಾವಿ; 1/8. ಫೂಲ್ಸ್‌ಕ್ಯಾಪ್; ಪುಟಗಳು ೪೦; ಬೆಲೆ: ೦-೮-೦. ೩. "ಪ್ರತಿಧ್ವನಿ":—ಲೇಖಕರು: ಶ್ರೀ ಬಿ. ಡಿ. ಗಣಪತಿ, ಅವರು; ಮಾರಾಟಗಾರರು "ಕೊಡಗು" ಪ್ರೆಸ್, ಮಡಿಕೇರಿ; ಪುಟಗಳು; ೧೨೬; ಬೆಲೆ: ೧-೦-೦. ೪. "ಹೃದಯ ವೀಣೆ":—ಲೇಖಕರು: ಶ್ರೀ ಅಡಿಬಾಯಿ ರಾಮಣ್ಣ ಶೆಟ್ಟಿ, ಅವರು; ದೊರೆಯುವ ಸ್ಥಳ: ಅಡಿಬಾಯಿ ರಾಮಣ್ಣ ಶೆಟ್ಟಿ, ದ. ಕ. ಕ್ರೌನ್ ಅಷ್ಟದಳ; ಪುಟಗಳು: ೭೬; ಬೆಲೆ: ರೂ. ೧-೦-೦.

ಹಿಡಿವಾಗ ನಿನ್ನ ಮೊಗ ದರ್ಶನವು, ಕೆಳಗಡೆಗೆ ಬಿಡುವಾಗ ನಿನ್ನಡಿಯ ಸ್ಪರ್ಶ" ಎಂಬ ಆತ್ಮತೃಪ್ತಿಯನ್ನು ಪಡೆದು, "ಬದುಕೊಂದು ಚೆಲ್ಲಾಟ ತಿಳಿವು ಬಲ್ಲವಗೆ! ಆಡಿಸಾಡಿಸು ದೇವ ನನ್ನ ಕೊನೆವರೆಗೆ" ಎಂದು ಕೊನೆಗಾಣಿಸುವ ಪಂಕ್ತಿಗಳು ಕವಿಯ ಮನೋಧರ್ಮವನ್ನು ವ್ಯಕ್ತಪಡಿಸುತ್ತವೆ. ಮುಂದೋಡುವ ಮನಸ್ಸನ್ನು ನಿಂತು ಸಾಗುವಂತೆ ಬೇಡುವರು. ಕಟ್ಟಪ್ಪಣೆ ಕಟ್ಟಳೆಗಳಿಗೆ ಜಗ್ಗದಂತೆ ಎದುರಿಸುವ ಕೆಚ್ಚು ಕವಿಯ ಮನಸ್ಸಿಗುಂಟು. ದೇವರನ್ನು ಕುರಿತು "ನಂಬದವರನೆ ನನಗೆ ನನ್ನವರನಾಗಿಸೈ" ಎಂದು ಬೇಡುವುದು ಮಾತ್ರವಲ್ಲದೆ, "ಜಗದ ಭಾರವನೆಲ್ಲ ಹೊತ್ತಿರುವ ನೀನು ನನ್ನ ಹೊರೆ ಭಾರವನೆ ಹೊರಲಾರೆಯೇನು?" ಎಂಬುದಾಗಿ ಸಮಾಧಾನವನ್ನು ತಾಳುವರು. ಈ ತೆರನಾದ ಆತ್ಮಗೀತಗಳು ಒಂದಾದ ಮೇಲೊಂದು ಸಾಗಿ ಕಡೆಗೆ ಕವಿಗಳು "ನನ್ನ ಹಾಡು" ಎನ್ನುವುದರಲ್ಲಿ ಆತ್ಮಚರಿತ್ರೆಯನ್ನೇ ನಿರೂಪಿಸಿರುತ್ತಾರೆ. ಕಾವ್ಯದ ಉದ್ದಕ್ಕೂ ದೈವವಾದಿಗಳೂ, ಭರವಸೆಯ ಭಾವನೆಯುಳ್ಳವರೂ ಆದ ಕವಿಗಳು, ಏನೋ ಎಂತೋ, ತಮ್ಮ ನೋವಿನಲ್ಲಿ "ಮನಸು ಇರದ ಮನಸಿನಿಂದ ಇರುವೆನೆಂತೊ ಜೀವಿಸಿ!" "ಎಷ್ಟು ಹೇಳಿ ತೀರದಮ್ಮ ನನ್ನ ಹಾಡು ನೋಡಿದು" ಎನ್ನುವರು. ಇದರಿಂದ ಕವಿಯು ಮನಸ್ಸಿನಲ್ಲಿ ತನ್ನ ಬಗ್ಗೆ ಎಂಥ ಹೊಯ್ದಾಟ ಸಾಗಿದೆಯೆಂಬುದು ವೇದ್ಯವಾಗುತ್ತದೆ. ಏನೇ ಇರಲಿ, ಇಲ್ಲಿನ ಕವನಗಳಲ್ಲಿ ಉಚ್ಚ ಆದರ್ಶದ ಕಡೆಗೆ ಕವಿಯ ದೃಷ್ಟಿ ನಿರ್ನಿಮೇಷವಾಗಿರುವುದನ್ನು ಕಾಣಬಹುದು. ಇದು ಸ್ತೋತ್ರಾರ್ಹ. ಇವುಗಳಲ್ಲದೆ, ಇತರ ತೆರನಾದ ಕವಿತೆಗಳೂ ಉಂಟು. ಜಗತ್ತಿನ ಇಂದಿನ ತಾರತಮ್ಯ ಕೊನೆಗಾಣುವುದು ಖಂಡಿತವೆಂದು ಕವಿಯ ನಂಬಿಕೆ. "ನೊಂದವರ ತಾಪದಲಿ ಬೆಂದೆದೆಯ ಶಾಪದಲಿ ಏನು ಳಿಯಬಹುದು!" ಎಂದು ಹೇಳಿಕೊಳ್ಳುತ್ತಾರೆ. ಇಂದಿನ ಸಾಮಾಜಿಕ ಜೀವನದಲ್ಲಿ ಕಂಡುಬರುವ ರೈತನಾಗಲಿ, ನಿರ್ಗತಿಕನಾಗಲಿ ಇವರ ಮನಸ್ಸನ್ನು ಸೆಳೆಯದೆ ಇಲ್ಲ. ಸಂಸಾರದ ಸಮಸ್ಯೆಗಳೂ ಸ್ಫೂರ್ತಿಯನ್ನಿತ್ತಿವೆ. ವಯಸ್ಸಾದ ಮುದುಕ ಯುವತಿಯನ್ನು ವಿವಾಹವಾಗುವ ಆಟವನ್ನು ಕಂಡು "ಏನಿದು ಹುಚ್ಚಾಸೆ!" ಎಂದು ಮೂದಲಿಸುವರು. "ಹರೆಯದ ಗೆರೆಯನು ಮೀರದೆ ಇರುವಳ ಕೈಹಿಡಿದುದು ಲೇಸೆ?, ಮುಪ್ಪಿನ ಮೇರೆಗೆ ಹತ್ತಿರ ಬಂದವಗೇನಿದು ಹುಚ್ಚಾಸೆ!" ಎಂಬ ಸರಣಿ ಸೊಗಸಾಗಿದೆ. "ಮನೆ ಸಂಸಾರವ ತೂಗಿಸಲೆಂದೋ? ಹೊರಗಿನ ಕಾರಣವು! ಮೋಹದ ಮುದದಲಿ ತೇಗುವಡೆಂದೋ? ಒಳಗಿನ ಧೋರಣವು"– ಈ ತರ್ಕ ಬಹು ಸ್ಪಷ್ಟವಾಗಿದೆ. ಅಸಹಾಯಕ ಸೊಸೆಯ ಸ್ಥಿತಿ ಕರುಣಾಜನಕವಾದುದು. "ಮನೆಯ ನ್ಯಾಯಾಲಯದಿ ಹುಟ್ಟು ಅಪರಾಧಿ ಸೊಸೆ, ಎಷ್ಟು ಶಿರಸಾವಹಿಸಿ ನಡೆದರೇನು? ತಪ್ಪದತ್ತೆಯ ಕಾಟ ಸೆರೆಯಾಳಿನಂತಾಗಿ, ಒಂಟಿಗಾಲಿನ ಮೇಲೆ ನಿಂತರೇನು!" ಎಂಬ ನುಡಿಗಳು ನೈಜವಾಗಿವೆ. ಈ ಹಲಕೆಲವು ಉದಾಹರಣೆಗಳಿಂದ ಪ್ರಕೃತ ಕವಿಯ ಹೃದಯ ವೇದ್ಯವಾಗುತ್ತದೆ. ಒಂದು ಕಡೆ ಆತ್ಮಶೋಧನೆ, ಆತ್ಮನಿವೇದನೆ ಇವುಗಳ ಕಡೆಗೆ ದೃಷ್ಟಿ ಹೊರಳಿದ್ದರೆ, ಇನ್ನೊಂದು ಕಡೆ ಸುತ್ತಮುತ್ತಲಿನ ಜನಜೀವನದ ಕಡೆ ಕವಿಯ ನೋಟ ಸಾಗಿರುತ್ತದೆ. ಈ ಎರಡು ಮುಖಗಳನ್ನೂ ಶ್ರೀ ಯಲ್ಲಟ್ಟಿಯವರು ತಮ್ಮ ಕವಿತೆಗಳಲ್ಲಿ ಬಹು ಚೆನ್ನಾಗಿ ಪ್ರತಿಪಾದಿಸಿರುತ್ತಾರೆ, ಉಚ್ಚವಾದ ಧ್ಯೇಯದೊಂದಿಗೆ ಉತ್ತಮವಾದ ಪದಬಂಧ, ಮನೋಹರವಾದ ಛಂದೋವೈವಿಧ್ಯಗಳಿಂದ ಒಡಗೂಡಿ ಈ ಭಾವಗೀತೆಗಳು ಮನೋರಂಜಕವಾಗಿವೆ. ಆದರೆ, ಆತ್ಮಾನುಭವದ ರಚನೆಗಳು ಸ್ವಲ್ಪ ಹೆಚ್ಚಾಗಿ ಏಕತಾನವನ್ನು ಉಂಟುಮಾಡುವುದೂ ಉಂಟು, ಆಧ್ಯಾತ್ಮಿಕ ಭಾವನೆ ಅತಿಯಾಗದಂತೆ ಎಚ್ಚರಿಕೆಯಿಂದಿದ್ದರೆ ಕಾವ್ಯದ ಕಮನೀಯತೆಗೆ ಕುಂದುಬಾರದೆಂದು ಹೇಳಬಯಸುತ್ತೇವೆ.

"ವಿಷಸಿಂಧು" ಎಂಬ ಕವನ ಸಂಕಲನದಲ್ಲಿ ಒಟ್ಟು ಮೂವತ್ತೆಂಟು ಅಷ್ಟ ಷಟ್ಪದಿಗಳಿವೆ. ಶ್ರೀ ಎಂ. ಅಕಬರ ಅಲಿಯವರನ್ನು ಶ್ರೀ "ಶ್ರೀರಂಗ"ರು ಪರಿಚಯ ಮಾಡಿಕೊಟ್ಟಿರುತ್ತಾರೆ, ಅಲ್ಲದೆ ಅಷ್ಟಷಟ್ಪದಿಯ ರಚನೆಯ ಬಗ್ಗೆ ನಾಲ್ಕು ಮಾತುಗಳನ್ನು ಆಡಿರುತ್ತಾರೆ. ಈ ಕೃತಿಸಂಪ್ರದಾಯ ಕನ್ನಡದಲ್ಲಿ ಈಗಾಗಲೇ ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿದೆ. "ಮೂರ್ತಿ ಚಿಕ್ಕದಾದರೂ, ಸ್ಫೂರ್ತಿಯಿಲ್ಲದ ಸುನೀತ, ಕೀರ್ತಿಶಾಲಿಯಾಗದು" ಎಂಬುದನ್ನು ಯಾರೂ ಮರೆಯುವಂತಿಲ್ಲ. ಪ್ರಕೃತ ಲೇಖಕರು ಒಳದನಿಯಿಂದ ಮೊದಲ್ಗೊಂಡು ಸಹೃದಯನ ತನಕ ಇಲ್ಲಿ ಸಂಬೋಧಿಸಿ ಹಾಡಿರುತ್ತಾರೆ. ಪಂಥಪ್ರೇಮಿಗಳನ್ನು ಕುರಿತು "ಪುಟ್ಟಪ್ಪನವರು ಮೇಣ್ ಬೇಂದ್ರೆಯವರುಂ ಬೇಕು! ಈ ಪಂಥ ಪ್ರೇಮಿಗಳ ಪೀಳಿಗೆಯೊ ಸಾಳ್ ಹೋಕು" ಎಂಬ ಮಾತು ಗಮನಾರ್ಹವಾದುದು. ಮಧುರ ಸ್ವಪ್ನವನ್ನು ಕಂಡು ಮೈಮರೆತ ಕವಿಯನ್ನು "ರೋಮ್ ನಗರ ಸುಡುವಾಗ

ನುಡಿಸುವುದೆ ವೀಣೆಯಂ?" ಎಂದು ಎಚ್ಚರವಿತ್ತಿರುವುದು ಶ್ರೀ ಪುಟ್ಟಪ್ಪನವರ "ಕ್ರಾಂತಿಕಾಳಿ"ಯೆಂಬ ಕವಿತೆಯನ್ನೇ ಹೋಲುತ್ತದೆ. ತಮ್ಮ ಗೆಳೆಯನಾದ ಶೀನುವನ್ನು ಕುರಿತು "ಆದಕೆ ಕೇಳಿದೊ ಶೀನು ಬಾಳ ಪಯಣದಿ ನೀನು, ಮೇಳದಾಳಾಗಿಹುದೆ ಮಮ ಭಾಗ್ಯವಲ್ತೇನು?" ಎಂಬ ಮಾತು ಬಹು ಅನುರೂಪವಾಗಿದೆ, ಕರ್ಣಾಟಕದ ಸುಪ್ರಸಿದ್ಧ ಲೇಖಕರಾದ ಶ್ರೀ ಕಾರಂತ, ಅ. ನ. ಕೃ. 'ಆನಂದ' ಈಶ್ವರ ಸಣಕಲ್ಲ, ಕರ್ಕಿ ಇವರುಗಳನ್ನು ಕುರಿತ ಅಷ್ಟಷಟ್ಪದಿಗಳಿವೆ. ಅಂತೆಯೇ ವಿದ್ಯಾರ್ಥಿ, ನಾಯಕರು, ವಿಮರ್ಶಕ–ಇವರೇ ಮೊದಲಾದವರ ಸ್ವಭಾವ ನಿರೂಪಣೆಗೆ ಮೀಸಲಾದ ಸುನೀತಗಳೂ ಉಂಟು. ಕೆಲವು ಕವನಗಳಲ್ಲಿ ಅಷ್ಟಷಟ್ಪದಿಗೆ ತಕ್ಕ ಭಾವ, ಬಂಧ, ಬೆಳವಣಿಗೆಗಳಿವೆ. ಇತರ ಕೆಲವು ಸಂದರ್ಭಗಳಲ್ಲಿ ಶಬ್ದಾಡಂಬರ ಮಿಗಿಲಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಶ್ರೀ ಎಂ. ಅಕಬರ ಆಲಿಯವರ ಈ ಪ್ರಯತ್ನ ಆಶಾದಾಯಕವಾಗಿದೆ. ವ್ಯಕ್ತಿಸ್ವಭಾವವನ್ನು ನಿರೂಪಿಸುವಲ್ಲಿ ಮತ್ತಷ್ಟು ಸ್ಪಷ್ಟತೆಯೂ, ಭಾವದ ಆವೇಗವನ್ನು ವರ್ಣಿಸುವಲ್ಲಿ ಇನ್ನಷ್ಟು ಸ್ವಾಭಾವಿಕವಾದ ಸ್ಫೂರ್ತಿಯೂ ಕೂಡಿಬಂದರೆ ಅಷ್ಟಷಟ್ಪದಿಗಳು ತಾವಾಗಿ ಉತ್ತಮವಾದಾವು.

ಕೊಡಗಿನ ಶ್ರೀ ಬಿ. ಡಿ. ಗಣಪತಿಯವರು ತಮ್ಮ ಕವನಗಳಲ್ಲಿ ಯಾವ ವೈಶಿಷ್ಟ್ಯವೂ ಇಲ್ಲವೆಂದೆಣಿಸಿ, ಹಿರಿಯ ಕವಿಗಳ ಪಡಿದನಿಯೇ ತಮ್ಮ ಕೃತಿಯ ತಿರುಳು ಎಂದು ಹೇಳಿ, "ಪ್ರತಿಧ್ವನಿ" ಎಂಬುದಾಗಿ ತಮ್ಮ ಗ್ರಂಥಕ್ಕೆ ನಾಮಕರಣ ಮಾಡಿರುತ್ತಾರೆ. ಆದರೆ, ಈ ಪುಟ್ಟ ಪುಸ್ತಕದಲ್ಲಿರುವ ಐವತ್ತು ಕವಿತೆಗಳನ್ನು ಓದಿದವರಿಗೆ, ಇಲ್ಲಿ ಮಿಡಿಯುತ್ತಿರುವ ಕವಿಯ ಹೃದಯದ ಸ್ವಭಾವವನ್ನು ಕಾಣಬಹುದು. ಪ್ರೇಮವೇ ದೇವರು ಎಂಬ ತತ್ವ, ಸಮತಾ ಭಾವವೇ ಸರ್ವೋತ್ಕೃಷ್ಟವಾದುದೆಂಬ ದೃಢ ವಿಶ್ವಾಸ– ಈ ಎರಡು ಭಾವನೆಗಳು ಇಲ್ಲಿನ ಅನೇಕ ಕವಿತೆಗಳ ಮುಖ್ಯ ತಿರುಳು. "ಹೃದಯದಲಿ ಪ್ರೇಮವಿರೆ, ಬಗೆಯಲ್ಲಿ ನೇಹವಿರೆ, ತೋರುವುದು ಜಗವೆಲ್ಲ ದೇವನಾಗಿ!", "ಪ್ರೇಮವೊಂದೆ ಜಗದ ಬೆಳಕು ನೋಡಲಾರೆಯಾ? ಪ್ರೇಮದಿಂದ ಆತ್ಮಸಿದ್ಧಿ ತಿಳಿಯಲಾರೆಯಾ? ಪ್ರೇಮದಿಂದ ಬಾಳಿಗರ್ಥ, ಪ್ರೇಮದಿಂದ ಪಾರಮಾರ್ಥ, ಎರಡದೆಲ್ಲಿ ಪ್ರೇಮಕೆ, ದೇವರೆಂಬ ನಾಮಕೆ?" "ಆತ್ಮನಲ್ಲಿ ಜೀವನು, ಪ್ರೇಮ ಮೂರ್ತಿ ದೇವನು!", "ಧನವಿರಲಿ ಹೆಸರಿರಲಿ, ಜಗದ ಒಡೆತನವಿರಲಿ, ಪ್ರೇಮವಿಲ್ಲದ ಬಾಳು ಬಟ್ಟಬಯಲು"—ಈ ಬಗೆಯಾಗಿ ಈ ಸಂಗ್ರಹದ ಉದ್ದಕ್ಕೂ ಪ್ರೇಮಮಯನಾದ ಪರಮಾತ್ಮನ ಸ್ವರೂಪವನ್ನು ಸಾರಿ ಹೇಳುವ ಸಾಲುಗಳು ಬೇಕಾದಷ್ಟು ಕಣ್ಣಿಗೆ ಬೀಳುತ್ತವೆ. ಆ ತರುವಾಯ ಪ್ರತಿಯೊಬ್ಬರೂ ದುಡಿಯಬೇಕು ಎನ್ನುವ ವಾದ, "ಕರ್ಮವ ಮಾಡದೆ ಕುಳಿತುಂಬವರಿಗೆ ತಾಣವು ಇಲ್ಲಿಲ್ಲ, ಕರ್ಮದ ಶೋಷಣೆ ನಿಲ್ಲದ ಜಗದಲಿ ಶಾಂತಿಗೆ ತಾವಿಲ್ಲ." ಈ ತತ್ತ್ವದ ಆದರ್ಶ ಮೂರ್ತಿಯೆಂದರೆ ಕರ್ಮಯೋಗಿಯೆನಿಸಿದ ರೈತ. ಆತನನ್ನು ಹೊಗಳಿ, "ಕರ್ಮವೇ ಶಿವಧ್ಯಾನ, ಕರ್ಮವೇ ಸುರಗಾನ, ಕರ್ಮವೇ ಸೋಪಾನ" ಎಂದು ಭಾವಿಸುವವನವನು ಎನ್ನುವರು. ಎಲ್ಲರಂತೆಯೇ ಈ ಕವಿಗೂ, ಬೀದಿಯ ಭಿಕ್ಷುಕಿ, ನೊಂದಿರುವ ಬಡವ, ಸುಲಿದು ಜೀವಿಸುವ ಪೂಜಾರಿ ಇವರೇ ಮೊದಲಾದವರು ಅಸಹನೆಯನ್ನುಂಟುಮಾಡಿರುವರು. ಯಾತ್ರೆ ಸಾಗಿರುವ ಈ ಬದುಕನ್ನು ಬಹು ತೆರನಾಗಿ ಬಣ್ಣಿಸುವರು. ಬಡತನದ ಭೀಕರಚಿತ್ರವನ್ನು ನಿರೂಪಿಸಿ, "ಒಂದು ಇರೆ ಒಂದಿಲ್ಲ, ಎಲ್ಲ ಇದೆ ಎನೆ ಹೊಲ್ಲ. ಇಂದುಧರನನು ಕೂಡ ಬಡತನವು ಬಿಟ್ಟಿಲ್ಲ" ಎನ್ನುವ ಮುಕ್ತಾಯದ ಮಾತು ರಸವತ್ತಾಗಿದೆ. ತಲಕಾವೇರಿಯ ಮಹಿಮೆ, ಮತ್ತು ಮಡಿಕೇರಿಯಲ್ಲಿನ "ರಾಜಾಸೀಟ"ನ ವರ್ಣನೆಗಳು ಶ್ರೀ ಪುಟ್ಟಪ್ಪನವರ "ಲಲಿತಾದ್ರಿ"ಯ ಧಾಟಿಯಲ್ಲಿಯೇ ಸಾಗಿದೆ. ಲೋಕದ ನೀತಿ ರೀತಿಗಳನ್ನು ತೆರತೆರನಾಗಿ ಚಿತ್ರಿಸಿರುವರು. "ಬಂದೆಯಾದೊಡೆ ಜಗವ ನೋಡುವೊಡೆ ನೀನು ಕಾದಿಹುದು ಟೀಕಿಸಲು ಜಗಮನದ (?) ಕಣ್ಣು"; "ಬಾಳ ಸುಖದುಃಖಗಳ ತೋಡಿಕೊಳ್ಳಲು ನಾವು ರಚಿಸಿದೆವು ನೂರಾರು ದೇವರನ್ನು, ಗಣನೆಗತಿಯಾಗಿರುವ ದೇವ, ದೇವರ ಮುಂದೆ ಚೆಲ್ಲಿದೆವು ಸೋದರರ ರಕ್ತವನ್ನು!" ಎಂಬುದಾಗಿ ವಾಸ್ತವಿಕಾಂಶವನ್ನು ವಿವರಿಸಿರುವುದು ವಿಚಾರಾಸ್ಪದವಾದುದು "ಬಡ ಜನರ ಸಲೆ ಮುಗಿಸಿ ಹಿರಿದಾಗಿ ತೋಳ್ಬೆಳೆಸಿ, ಭೋರ್ಗರೆವ ಕಡುಕೋಪಿ ಧನಿಕಬಂಧು!, ಇಳೆಯಿಂದ ಜಲಕಣವ ಮೇಲೊಯ್ದು ಹೇ ಮುಗಿಲೆ, ಗರ್ಜಿಸುವೆ ಗುಡುಗುಡಿಸಿ ಏಕೆ ನೀನು?, ಬೇರ ಬಲದಲಿ ನಿಂದು ಬಾನಿನಲಿ ಸಲೆ ಬೆಳೆದು ಹಿರಿದು ಸುಂದರವೆಂದು ಮೈಮರೆವ ಓ ಮರವೆ! ಕಿರುಚದಿರು ಘನನೆಂದು ತಿಳಿಯೊಮ್ಮೆ ಸತ್ಯವನು ಬೇರಿನಿಂದಲಿ ನಿನ್ನ ಬಾಳು ಬದುಕು!–" ಈ ಪಂಕ್ತಿಗಳಲ್ಲಿ

ವಿದಿತವಾಗುವ ವಿಚಾರವೈಖರಿ ಬಹುಮಟ್ಟಿಗೆ ಭಾವ ಗರ್ಭಿತವಾಗಿದೆ. ಈ ರೀತಿಯಾಗಿ ಶ್ರೀ ಬಿ. ಡಿ. ಗಣಪತಿ ಯವರು ತಮ್ಮ ಕಾವ್ಯವಾಣಿಯನ್ನು ಇಲ್ಲಿನ ಸಣ್ಣ ಪುಟ್ಟ ಕವನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅನುಭವಾ ತೀತವಾದ ವಿಷಯವಾವುದೂ ಇಲ್ಲಿ ಇಲ್ಲ. ಸಾಮಾನ್ಯ ವಾದ ಭಾವನೆಗಳಾದರೂ, ತಿಳಿಯಾದ ಮಾತುಗಳಲ್ಲಿ ಹೇಳಿರುವುದು ಮೆಚ್ಚತಕ್ಕದ್ದೇ ಸರಿ. ಆದರೆ ಕೆಲವು ಛಂದೋವಿಧಾನಗಳು ಸಡಿಲವಾಗಿವೆ. ಹಲವು ಸಂದರ್ಭಗಳಲ್ಲಿ ಭಾವಕ್ಕಿಂತಲೂ ಅತಿಯಾಗಿ ಮಾತು ಗಳು ಬರುತ್ತವೆ. ಅನುಭವದ ಮೂಲಕ, ಹಾಗೂ ಸಂತತವಾದ ಸಾಧನೆಯ ಮೂಲಕ ಈ ಕೊರತೆಗಳನ್ನು ನಿವಾರಿಸಿಕೊಳ್ಳಲು ಸಾಧ್ಯವಾದೀತು.

"ಹೃದಯ ವೀಣೆ"ಯ ಕರ್ತೃಗಳಾದ ಶ್ರೀ ಅಡಿಬಾಯಿ ರಾಮಣ್ಣ ಶೆಟ್ಟಿಯವರ ಗ್ರಂಥಕ್ಕೆ ಶ್ರೀ ಗೋವಿಂದ ಪೈ, ಅವರು ಮುನ್ನುಡಿಯನ್ನು ಬರೆದಿರು ತ್ತಾರೆ. ಈ ಸಂಗ್ರಹದಲ್ಲಿ ಒಟ್ಟು ನಲವತ್ತೊಂದು ಕವಿತೆಗಳಿವೆ. ಪ್ರಾರಂಭದಲ್ಲಿ ಕವಿಗಳು, "ವಿಶ್ವದೀ ಗುರುಕುಲದಿ ನರನು ವಟುವಾಗಿರಲು, ಓದಿ ಮುಗಿಯದ ಬಾಳಹೊತ್ತಗೆಯದಿರಲು, ಗುರುವಾಗಿ ಜ್ಞಾನ ದಾನವ ನೀಡು ತಾಯಿ! ಗುರುಪತ್ನಿಯಾಗಿ ಹಾಲನ್ನ ಕೊಡು ತಾಯಿ! ಗೆಳೆಯನೊಲು,ಧೈರ್ಯ ಸಂತೋಷಗಳ ನೀಡು, ಒಲವು ಗೆಲವನುದಿನವು ಇರುವಂತೆ ಮಾಡು." ಎಂಬುದಾಗಿ ಜಗನ್ಮಾತೆಯನ್ನು ಪ್ರಾರ್ಥಿಸಿಕೊಂಡಿರು ವರು. ಇಲ್ಲಿನ ಅನೇಕ ಭಕ್ತಿಗೀತೆಗಳಲ್ಲಿಯೂ, ವ್ಯಕ್ತಿ ಗೀತೆಗಳಲ್ಲಿಯೂ, ಇತರ ವರ್ಣನಾತ್ಮಕವಾದ ಭಾವ ಗಳಲ್ಲಿಯೂ ಇದೇ ಬಗೆಯಾದ ಪೂಜ್ಯ ಭಾವನೆಯನ್ನು ಕಾಣಬಹುದು. ಪರಮಾತ್ಮನ ಇರವನ್ನು ಬಹು ಗಹನ ವಾಗಿ ಬಿಡಿಸಿ ಹೇಳುತ್ತ "ನಾನು ನೀನೇ, ನೀನು ನಾನೆಂಬುದೆಲ್ಲಿ?" ಎಂದು ಅದ್ವೈತಭಾವವನ್ನು ಸಮರ್ಥಿಸಿ, "ವೇದ ಪೌರಾಣದಲಿ ನಿನ್ನ ವಾಣಿಯ ಬಿಂದು, ಸಂಪತ್ತು ಸುಖಗಳಲಿ ನಿನ್ನ ಬೆಡಗು, ಸಾಕಾರ ನಾಗಿರುವೆ ನೀ ನಿರಾಕಾರದಲಿ ಲೋಕದೊಳನಂತ ವೈವಿಧ್ಯದಿಂದ" ಎಂಬುದಾಗಿ ಇತ್ಯರ್ಥ ಮಾಡುವರು. "ನಿನ್ನನರ್ಚಿಸುವುದೆಂತು" ಎನ್ನುವ ಕವನವೊಂದರಲ್ಲಿ ನಿರಾಡಂಬರವಾದ ಭಕ್ತಿನಿವೇದನೆಯೇ ಪರಮಾತ್ಮನ ಪೂಜೆಗೆ ಪರಮ ಪವಿತ್ರವಾದುದು ಎಂಬುದಾಗಿ ಭಾವಿ ಸುವರು. ಇಲ್ಲಿನ ವಿಚಾರಸರಣಿ ದಾಸರ ಪದಗಳನ್ನು ಹೋಲುತ್ತದೆ. ಕವಿಗೂ ದೇವರಿಗೂ ಇರುವ ನಿಕಟ ವಾದ ಸಂಬಂಧವನ್ನು ಹೀಗೇ ಮೇಲಿಂದ ಮೇಲೆ ಹಾಡಿರುತ್ತಾರೆ. ಈ ತರುಣ ಕವಿಗಳ ಪ್ರಕೃತಿ ವರ್ಣನೆಗೆ "ಸುರಚಾಪ" ಎಂಬ ಒಂದು ಕವಿತೆ ಒಳ್ಳೆಯ ಉದಾ ಹರಣೆ. ಮಳೆಯ ಬಿಲ್ಲನ್ನು ಮನಮೆಚ್ಚಿ, ಶ್ಲಾಘಿಸಿ, ಅವನ್ನು "ಮಾಧವಿಯರಸಂ ತ್ರಿಜಗವ ಜೈಸುವ ಮೋದದ ಸುಮಶರದಂಡದಲಿ, **ಭೂದೇವಿಯು ಬಿಡು ಗಣ್ಣರ ಬರವಿಗೆ ಕಟ್ಟಿದ ತೋರಣದಂಡಲಿ,** ರಸಋಷಿ ಹೃದಯದ ಪ್ರಭೆಯಂತೇ, ನವ ವಧುವಿನ ಬಾಸಿಗ ದಂತೇ, ಮೆರೆಯುವುದು, ವೈಮರೆಯುವುದು!" ಎಂಬುದಾಗಿ ಉಪಮಾನಗಳ ಮೂಲಕ ಮುಗಿಸಿರುವುದು ಉನ್ನತವಾಗಿದೆ. "ಚಂದ್ರೋದಯ"ವನ್ನು ಕಂಡಾ ಗಲೂ, ಕವಿಗೂ ಇದೇ ರೀತಿಯ ಶಾಂತಿ, ಸಮಧಾನ ಗಳಾಗುವುವು. ಈ ಲೇಖಕರಲ್ಲಿ ಚಿಂತನಾಪರವಾದ ಶಕ್ತಿ ತಕ್ಕಮಟ್ಟಿಗೆ ವ್ಯಕ್ತವಾಗುತ್ತದೆ. "ಕಾಲ"ವನ್ನು ಸಂಬೋಧಿಸಿ "ಸಾವು ಸಂಕಟ ಹಿಂದೆ, ಸರಸ ಸಂತಸ ಮುಂದೆ, ಹಿಂದುಮುಂದುಗಳೆಲ್ಲ ನಿನಗೆ ಒಂದೇ" "ನಲವೇರಿ ನರ್ತಿಸುವ, ಅಳಲಿನಲಿ ದುಃಖಿಸುವ ನೀನೆ ಸಕಲಾತ್ಮಕನು ತಂದೆ" "ಪೌರುಷದ ಪರುಶುವನು ನರನು ಹಿಡಿಯಲುಬೇಕು, ಆತಂಕದಾತುರುವ ಮುರಿಯಬೇಕು", "ಸಾಮರ್ಥ್ಯ ಕುಂದಿದರು ಆಸೆ ಕೆಡ ದಿರಬೇಕು, ನಿನ್ನೊಲುಮೆಯಲಿ ದಡಸೇರಬೇಕು" ಎಂದು ಹೇಳುವಾಗಲೂ, ದಿಕ್ಕುದೆಸೆಯಿಲ್ಲದೆ ತೊಳಲುವ ಮನಸ್ಸನ್ನು ಕುರಿತು, "ಬಾನಿಗೇಣಿ ಮಾಡಲೆಂದು, ಗೇಣು ಬಿದಿರ ತಂದು ನಿಂದು, ಬೇಡಿ ಕಾಲು ಹಿಡಿ ವುದು. ಆಗಸದಲಿ ಹಾರಲೆಂದು, ಹೋಗಿ ರೆಕ್ಕೆಗಳನು ತಂದು ಒಡನೆ ಎನಗೆ ನುಡಿವುದು" ಎಂಬುದಾಗಿ ಚಿತ್ರಿ ಸುವಾಗಲೂ, ಇಂದಿನ ಸ್ಥಿತಿಗತಿಗಳನ್ನು ಕಂಡು, "ಬರುವ ಕಾಲವೆಂಥ ಕಾಲ? ಸಾಗುತಿರುವುದೆಲ್ಲಿಗೆ? ರಾಮರಾಜ್ಯ ಸತ್ಯಯುಗವು! ಇದು ದಿಟವೋ ಹೇಗೆ?" ಎಂದು ಪ್ರಶ್ನಿಸುವಾಗಲೂ, ಕವಿಯಲ್ಲಿ ಹುದುಗಿರುವ ವಿಚಾರವಾದವನ್ನು ಕಾಣಬಹುದು. ಇವುಗಳಲ್ಲದೆ ಮುದ್ದಣನನ್ನು ಕುರಿತು ಬರೆದಿರುವ ಕೃತಿಯಲ್ಲಿ ಕೆಲವು ಪಂಕ್ತಿಗಳು ಮನನೀಯವಾಗಿವೆ. "ವೀರಮಾತೆ ಕುಂತೀ ದೇವಿ" ಎಂಬ ಕವಿತೆ ಆಮೂಲಾಗ್ರವಾಗಿ ಚೆನ್ನಾಗಿದೆ. ಆಕೆಯ ಜೀವನವನ್ನು ಮೆಚ್ಚಿ "ಸಂಸಾರ ಸಾಗರದ ಮಥನದಲಿ ವಿಷವುದಿಸೆ, ಕಂಗೆಡದೆ ಧೈರ್ಯದಲಿ ಶಾಂತಿ ಸಹನೆಗಳಲ್ಲಿ, ಸತ್ಯಪ್ರೇಮಗಳಿಂದ ಸಾಗಲಮೃತವ ಪಡೆದು, ತನುವಿಗಳಿವಾದೊಡೇಂ, ಉಳಿವ ಸವಿನೆನಹು

ಚಿರ; ನಿನ್ನ ಜೀವನದ ಸಂದೇಶವಿದು ನಮಗೆ ವರ?" ಎಂದು ತತ್ತ್ವವನ್ನು ನಿರ್ದೇಶಿಸುವುದು ನಿರುಪಮವಾಗಿದೆ. ಇದೇ ಲೇಖನಿಯಿಂದ ರಚಿತವಾಗಿರುವ ಶ್ರೀ ಗೋಮಟೇಶ್ವರ ಸ್ತುತಿ ಈ ಮಟ್ಟಕ್ಕೆ ಬರುವುದಿಲ್ಲ. "ಶ್ರೀ ಕೃಷ್ಣಬೋಧಾಮೃತ"ದಲ್ಲಿ ಭಗವದ್ಗೀತೆಯ ಸಾರವನ್ನು ಸಾರಿ ಹೇಳುವ ಪ್ರಯತ್ನ ನಡೆದಿದೆ. ಕಡೆಯದಾಗಿ ಕವಿಗಳು ತಮ್ಮ ಆತ್ಮ ಕಥೆಯನ್ನು "ನನ್ನ ಜೀವನ ಯಾತ್ರೆ" ಎಂಬ ದೀರ್ಘ ಕವನದಲ್ಲಿ ನಿರೂಪಿಸಿರುತ್ತಾರೆ. ತುಳುನಾಡಿನ ವರ್ಣನೆಯೊಂದನ್ನು ಬಿಟ್ಟರೆ, ಈ ಕವಿತೆಯ ಉಳಿದ ಭಾಗದಲ್ಲಿ ಕಾವ್ಯದ ಕಾವು ಕಡಮೆ ಎಂದು ಹೇಳಬೇಕಾಗುತ್ತದೆ. ಮಧ್ಯೆಮಧ್ಯೆ, ನೀರಸವಾದ ಅನುಕರಣಗಳೂ, ಕಲವು ಅಸಂಬದ್ಧವಾದ ಛಂದೋರಚನೆಗಳೂ ಇವೆ. ಕವಿಯಲ್ಲಿ ಇರಬೇಕಾದ ಸಹೃದಯತೆ, ಆತ್ಮಶೋಧನೆ, ವಿಚಾರವಾಣಿ, ಉದಾತ್ತವಾದ ಆದರ್ಶ, ಪ್ರಕೃತಿ ಪ್ರೇಮ, ಚಿತ ಸಂಸ್ಕಾರಗಳು ಇಲ್ಲಿನ ಕವನಗಳಲ್ಲಿ ಅಡಕವಾಗಿವೆ ಎಂದು ಹೇಳುವುದರಲ್ಲಿ ಹಿಂತೆಗೆಯಬೇಕಾಗಿಲ್ಲ.

ಹೊಸ ಲೇಖಕರ ಹೊಸ ಗ್ರಂಥಗಳು ಬಂದಾಗ ಅವುಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದು ವಿಮರ್ಶಕನ ಕೆಲಸವಷ್ಟೆ. ಆ ತತ್ವಕ್ಕನುಸಾರವಾಗಿ ಈ ನಾಲ್ಕು ಕವನ ಸಂಗ್ರಹಗಳ ಗುಣವಿಶೇಷಗಳನ್ನು ಈವರೆಗೆ ತಿಳಿಯಪಡಿಸಲಾಯಿತು. ಈ ಕಾವ್ಯ ಸಮುಚ್ಚಯದಲ್ಲಿ ವಿದಿತವಾಗುವ ಇತರ ಲಕ್ಷಣಗಳ ಬಗ್ಗೆ ಇಲ್ಲಿ ಸ್ವಲ್ಪಮಟ್ಟಿಗೆ ಪ್ರಸ್ತಾಪಿಸಬಹುದು. ಭಾವನೆಗಳಲ್ಲಿ ಬಹುಬೇಗ ಇಂದಿನ ಕವಿಗಳು ಜಿಜ್ಞಾಸೆಗೆ ಮನಸೋಲುವರು. ವಿಚಾರ, ವಿವಾದ, ವಿಮರ್ಶೆಗಳಿಗೆ ಗೀತೆಗಳಲ್ಲಿ ಎಡೆಯಿಲ್ಲದಿಲ್ಲ. ಆದರೆ, ಕವಿತೆಗೆ ಮೂಲಸತ್ವವಾದ ಸ್ಫೂರ್ತಿಯ ವಿಲಾಸಕ್ಕೆ ಕುಂದಕವುಂಟಾಗದಂತೆ ಈ ವಿಚಾರ ಅನುಸರಿಸಿ ಬರುವುದು ಸಾಧುವಾದುದು ಎನ್ನಿಸುತ್ತದೆ. ಹಾಗಿಲ್ಲದೆ, ಹೆಜ್ಜೆ ಹೆಜ್ಜೆಗೂ ಈ ಜಿಜ್ಞಾಸೆಯೇ ಹೆಚ್ಚಾದರೆ, ಕವಿತೆ ನೀತಿಶತಕವಾಗುತ್ತದೆ. ನಮ್ಮ ಮುಂದಿರುವ ಈ ಕವನಗಳಲ್ಲಿ ಈ ರೀತಿಯೂದ ಬರೆವಣಿಗೆ ಪ್ರಮಾಣ ಮೀರಿ ಬಂದಿರುತ್ತದೆ. ಎರಡನೆಯದಾಗಿ, ದೇಶದಲ್ಲಿ ಇಂದು ರಾಜಕೀಯ ಪರಿವರ್ತನೆಯಾಗಿರುವಾಗ, ಹೊಸ ಹೊಸದಾದ ಭಾವನೆಗಳಲ್ಲಿ ನಾಡನ್ನು ಕಟ್ಟುವುದೆಂತು, ನಾಡಿನ ಸ್ಥಿತಿ ಸುಧಾರಿಸುವುದೆಂತು, ಎಂಬಿವೇ ಮೊದಲಾದ ಚೈತನ್ಯದಾಯಕವಾದ ರಚನೆಗಳನ್ನು ನಿರೀಕ್ಷಿಸುವುದು ತಪ್ಪಾಗಲಾರದು. ಆ ತೆರನಾದ ಭಾವನೆಗಳೇ ಇಲ್ಲಿ ಪುಷ್ಟಿಗೊಂಡು ಕಾಣದಿರುವುದು ಕುತೂಹಲಕಾರಿಯಾಗಿದೆ. ಯುವಜನದ ಉತ್ಸಾಹಕ್ಕಿಂತಲೂ, ಬಗೆಹರಿಯದ ಭಗವಂತನ ಕಡೆಗೇ ಪದೇಪದೇ ಮನಸ್ಸನ್ನು ತಿರುಗಿಸುವ ತರುಣವೃಂದದ ದೃಷ್ಟಿ ಏಕೆ ಹೀಗೆ ಸಾಗುತ್ತಿದೆಯೆಂದು ಹೇಳಬರುವಂತಿಲ್ಲ. ಪ್ರಕೃತಿ ವರ್ಣನೆಯ ಬಗ್ಗೆಯೂ ಇದೇ ತೆರನಾದ ನಿರಾಸಕ್ತಿಯೋ, ಇಲ್ಲವೇ ಚರ್ವಿತಚರ್ವಣವೋ ಗೋಚರವಾಗುತ್ತದೆ. ಸಾಲಮುದಕ್ಕೆ ಉದ್ರೇಕದಿಂದ ಬಂದ ಕವಿತೆಯ ಸಂಖ್ಯೆ ಹೇರಳವಾಗಿವೆ. ರಚನೆಯಲ್ಲಿ ಗದ್ಯತನ ಹೆಚ್ಚು ಹೆಚ್ಚಾಗಿ ಕಂಡು ಬರುವುದು ಮಹಾಪ್ರಮಾದವೇ ಸರಿ. ಈ ಲೋಪ ದೋಷಗಳನ್ನು ನಿವಾರಿಸುವುದಲ್ಲದೆ, ತರುಣವೃಂದದ ದೃಷ್ಟಿ ನೂತನವಾದ ಮತ್ತು ಖಚಿತವಾದ ಆದರ್ಶದತ್ತ ಸಾಗಬೇಕಾಗಿದೆ. ಹಿರಿಯ ಕವಿಗಳೊಬ್ಬರು ಹಿಂದೆ ಹೇಳಿದಂತೆ, ಇಂದಿನ ತರುಣ ಕವಿಗಳನ್ನು ಕಂಡರೆ ಯಾರೂ ನಿರುತ್ಸಾಹಿಗಳಾಗಬೇಕಾಗಿಲ್ಲ. ಪದಗಳ ಮೇಲಿನ ಪ್ರಭುತ್ವದ ದೃಷ್ಟಿಯಿಂದಾಗಲಿ, ವಿಚಾರ ಮಾಡುವ ರೀತಿಯ ದೃಷ್ಟಿಯಿಂದಾಗಲಿ, ವಿಷಯದ ಆಯ್ಕೆಯ ದೃಷ್ಟಿಯಿಂದಾಗಲಿ, ಆಶಾದಾಯಕವಾದ ಚಿಹ್ನೆಗಳೇ ಯಥೇಚ್ಛವಾಗಿವೆ. ಆದರೆ, ತರುಣರು ಧೋರಣೆಗೆ ಒಳಗಾಗದೆ, ಸಂತತವಾದ ವ್ಯಾಸಂಗವನ್ನು ಕೈಬಿಡದೆ, ಆತುರಕ್ಕೆ ಸಿಕ್ಕಿ ಬೀಳದೆ, ರಾಜಕೀಯದ ಅರಾಜಕತೆಯನ್ನೇ ತಮ್ಮ ಧ್ಯೇಯವನ್ನಾಗಿ ಅವಲಂಬಿಸದೆ ಮುಂದುವರಿದಿದ್ದೇ ಆದರೆ, ಕನ್ನಡದ ಸಾಹಿತ್ಯ ಕ್ಷೇತ್ರ ನವನವೋನ್ಮೇಷಶಾಲಿನಿಯಾಗಿರುವುದರಲ್ಲಿ ಸಂಶಯವಿಲ್ಲ.

ಕನ್ನಡ ಸಾಹಿತ್ಯ ಪರಿಷತ್ತು,

೧೯೫೧ನೆಯ ನವೆಂಬರ್ ತಿಂಗಳಲ್ಲಿ ನಡೆದ ಸಾಹಿತ್ಯ ಪರೀಕ್ಷೆಯ ಫಲಿತಾಂಶ

ಜಾಣ ಪರೀಕ್ಷೆ

ಮೊದಲನೆಯ ತರಗತಿ ಯಾರೂ ಇಲ್ಲ.

ಬೆಂಗಳೂರು

ಎರಡನೆಯ ತರಗತಿ:

೧, ೨, ೪.

ಹಾಸನ:—ಎರಡನೆಯ ತರಗತಿ:

೫.

ಸಿದ್ದಾಪುರ.—ಎರಡನೆಯ ತರಗತಿ:

೬, ೭, ೯, ೧೧.

ಅಂಕೋಲಾ:— ಎರಡನೆಯ ತರಗತಿ:

೧೨, ೧೪.

ಉಡುಪಿ:—ಎರಡನೆಯ ತರಗತಿ:

೧೫, ೧೬, ೧೭, ೧೮., ೨೧.

ಮೊರಬ:— ಎರಡನೆಯ ತರಗತಿ:

೨೯, ೩೦, ೩೧, ೩೩, ೩೪, ೩೫, ೩೬.

ಕಲುಬುರ್ಗಿ:— ಎರಡನೆಯ ತರಗತಿ:

೪೬, ೪೭, ೫೧.

ಕರಡಕಲ್:— ಎರಡನೆಯ ತರಗತಿ:

೬೯. ೭೦.

ಹನುಮಸಾಗರ:— ಎರಡನೆಯ ತರಗತಿ:

೭೩, ೭೪.,

ತೇರ್ಗಡೆಯಾಗದವರು

೧೩, ೨೦, ೨೩, ೨೪, ೨೮, ೪೦, ೪೧, ೪೨, ೪೮, ೪೯, ೫೦, ೫೨, ೫೬, ೫೭, ೬೦, ೬೧, ೬೨, ೬೭, ೭೧, ೭೫.

ಪರೀಕ್ಷೆಗೆ ಬಾರದವರು

೩, ೮, ೧೦, ೧೯, ೨೨, ೨೫, ೨೬, ೨೭, ೩೨, ೩೭, ೩೮, ೩೯, ೪೩, ೪೪, ೪೫, ೫೩, ೫೪, ೫೫, ೫೮, ೫೯, ೬೩, ೬೪, ೬೫, ೬೬, ೬೮, ೭೨, ೭೬, ೭೭.

ಕಾವ ಪರೀಕ್ಷೆ ಫಲಿತಾಂಶ

ಹಾಸನ ಕೇಂದ್ರ

(ಅಂಕಗಳ ಅನುಕ್ರಮದಲ್ಲಿ)

ಮೊದಲನೆಯ ತರಗತಿ:

ಕ್ರ. ಸಂ. (೮೬) — ಹಾಸನ
,, (೮೭) — ,,
,, (೮೫) — ,,
,, (೯೩) — ,,
,, (೯೧) — ,,

ಎರಡನೆಯ ತರಗತಿ:

೮೦; ೮೨; ೮೩; ೮೪; ೮೮; ೮೯; ೯೦; ೯೨; ೯೪;

ಸಿದ್ದಾಪುರ ಕೇಂದ್ರ (ಉ. ಕ.):

ಮೊದಲನೆಯ ತರಗತಿ: ಇಲ್ಲ.

ಎರಡನೆಯ ತರಗತಿ:

೯೭; ೯೮; ೯೯; ೧೦೦; ೧೦೪; ೧೦೭; ೩೪೯;

ಅಂಕೋಲಾ ಕೇಂದ್ರ

ಮೊದಲನೆಯ ತರಗತಿ: ಇಲ್ಲ.

ಎರಡನೆಯ ತರಗತಿ:

೧೧೨; ೧೧೩;

ಉಡುಪಿ ಕೇಂದ್ರ

ಮೊದಲನೆಯ ತರಗತಿ: ಇಲ್ಲ.

ಎರಡನೆಯ ತರಗತಿ:

೧೧೮; ೧೧೯; ೧೨೧; ೧೨೨; ೧೨೩; ೧೨೬; ೧೨೭; ೧೨೮; ೧೨೯;

ಇಲಕಲ್ ಕೇಂದ್ರ

ಮೊದಲನೆಯ ತರಗತಿ: ಇಲ್ಲ.

ಎರಡನೆಯ ತರಗತಿ:

೧೩೦; ೧೩೧; ೧೩೨; ೧೩೪; ೧೩೫; ೧೩೭; ೧೩೮;

ಮೊರಬ ಕೇಂದ್ರ

ಮೊದಲನೆಯ ತರಗತಿ: ಇಲ್ಲ.

ಎರಡನೆಯ ತರಗತಿ:

೧೪೦ ; ೧೪೧ ; ೧೪೪ ; ೧೪೭ ;

ಮುಧೋಳ್ ಕೇಂದ್ರ

ಮೊದಲನೆಯ ತರಗತಿ: ಇಲ್ಲ.

ಎರಡನೆಯ ತರಗತಿ:

೧೪೮ ; ೧೪೯ ; ೧೫೦ ; ೧೫೨ ; ೧೫೩ ; ೧೫೪ ; ೧೫೫ ; ೧೫೬ ; ೧೫೭ ; ೧೫೮ ; ೧೫೯ ; ೧೬೦ ; ೧೬೧ ; ೧೬೫ ; ೧೭೦ ; ೧೭೫ ; ೧೮೨ ; ೧೮೩ ; ೧೮೫ ; ೧೮೬ ; ೧೮೭ ;

ಸಂಕೇಶ್ವರ ಕೇಂದ್ರ

ಮೊದಲನೆಯ ತರಗತಿ—ಇಲ್ಲ.

ಎರಡನೆಯ ತರಗತಿ :

೧೮೯ ; ೧೯೦; ೧೯೧ ; ೧೯೨ ; ೧೯೩ ; ೧೯೪; ೧೯೫ ; ೧೯೬; ೧೯೭ ; ೧೯೮ ; ೧೯೯ ; ೨೦೦; ೨೦೨ ; ೨೦೩.

ಕಲ್ಬುರ್ಗಿ ಕೇಂದ್ರ

ಮೊದಲನೆಯ ತರಗತಿ—ಇಲ್ಲ.

ಎರಡನೆಯ ತರಗತಿ :

೨೦೯ ; ೨೧೧ ; ೨೧೩ ; ೨೧೪ ; ೨೧೫ ; ೨೧೬; ೨೧೭ ; ೨೧೮ ; ೨೧೯ ; ೨೨೦ ; ೨೨೩ ; ೨೨೪; ೨೨೬ ; ೨೨೭ ;

ಶಹಪುರ ಕೇಂದ್ರ

ಮೊದಲನೆಯ ತರಗತಿ—ಇಲ್ಲ.

ಎರಡನೆಯ ತರಗತಿ :

೨೩೧ ; ೨೩೨ ; ೨೩೩ ; ೨೩೪ ; ೨೩೫ ; ೨೪೦; ೨೪೨ ; ೨೪೩ ; ೨೪೭ ; ೨೫೩.

ಯಾದಗಿರಿ ಕೇಂದ್ರ

ಮೊದಲನೆಯ ತರಗತಿ—ಇಲ್ಲ.

ಎರಡನೆಯ ತರಗತಿ :

೨೫೪ ; ೨೫೬ ; ೨೫೭ ; ೨೫೮.

ರಂಗಂಪೇಟೆ ಕೇಂದ್ರ

(ಸುರಪುರ)

ಮೊದಲನೆಯ ತರಗತಿ—ಇಲ್ಲ.

ಎರಡನೆಯ ತರಗತಿ :

೨೬೨ ; ೨೬೩ ; ೨೬೪.

ಗಂಗಾವತಿ ಕೇಂದ್ರ

೨೬೮ ; ೨೭೩ ; ೨೭೪ ; ೨೮೦ ; ೨೮೨ ; ೨೮೩; ೨೮೬ ; ೨೮೭ ; ೨೯೫ ; ೨೯೬.

ಕರಡಕಲ್ ಕೇಂದ್ರ

ಮೊದಲನೆಯ ತರಗತಿ—ಇಲ್ಲ.

ಎರಡನೆಯ ತರಗತಿ :

೩೦೩ ; ೩೦೪ ; ೩೦೫ ; ೩೦೬.

ಹನಮಸಾಗರ ಕೇಂದ್ರ

ಮೊದಲನೆಯ ತರಗತಿ—ಇಲ್ಲ.

ಎರಡನೆಯ ತರಗತಿ :

೩೧೧ ; ೩೧೨ ; ೩೧೩ ; ೩೧೪ ; ೩೧೫ ; ೩೧೬; ೩೧೭ ; ೩೧೮ ; ೩೧೯ ; ೩೨೦ ; ೩೨೧ ; ೩೨೨; ೩೨೩ ; ೩೨೫ ; ೩೨೭ ; ೩೨೮.

ಗುರುಮಠಕಲ್ ಕೇಂದ್ರ

ಮೊದಲನೆಯ ತರಗತಿ—ಇಲ್ಲ.

ಎರಡನೆಯ ತರಗತಿ :

೩೩೦ ; ೩೩೨ ; ೩೩೩ ; ೩೩೬ ; ೩೩೭ ; ೩೩೮; ೩೪೧ ; ೩೪೨ ; ೩೪೩ ; ೩೪೪ ; ೩೪೫ ; ೩೪೭.

ತೇರ್ಗಡೆಯಾಗದವರು :

೧೧೧ ; ೧೨೦ ; ೧೨೫ ; ೧೪೨ ; ೧೪೩ ; ೧೫೧ ; ೧೬೨ ; ೧೬೬ ; ೧೬೭ ; ೧೬೯ ; ೧೭೧ ; ೧೭೪ ; ೧೭೬; ೧೭೮ ; ೧೮೧ ; ೧೮೪ ; ೨೦೧ ; ೨೦೭ ; ೨೧೨ ; ೨೨೧; ೨೨೫ ; ೨೩೦ ; ೨೩೬ ; ೨೩೯ ; ೨೪೪ ; ೨೪೫ ; ೨೪೯; ೨೫೧ ; ೨೬೦ ; ೨೬೫ ; ೨೬೭ ; ೨೬೯ ; ೨೭೦ ; ೨೭೧; ೨೭೫ ; ೨೭೬ ; ೨೭೭ ; ೨೭೮ ; ೨೮೪ ; ೨೮೯ ; ೨೯೦; ೨೯೨ ; ೨೯೩ ; ೨೯೮ ; ೩೦೦ ; ೩೧೦ ; ೩೨೪ ; ೩೨೬; ೩೩೧ ; ೩೪೦ ; ೩೪೬.

ಪರೀಕ್ಷೆಗೆ ಬಾರದವರು

೭೮, ೭೯, ೮೧, ೯೫, ೯೬, ೧೦೧, ೧೦೨, ೧೦೩ ೧೦೫, ೧೦೬, ೧೦೮, ೧೦೯, ೧೧೦, ೧೧೪, ೧೧೫, ೧೧೬, ೧೧೭, ೧೨೪, ೧೩೩, ೧೩೬, ೧೩೯, ೧೪೫, ೧೪೬, ೧೬೩, ೧೬೪, ೧೬೮, ೧೭೨, ೧೭೩, ೧೭೭, ೧೭೯, ೧೮೦, ೧೮೮, ೨೦೪, ೨೦೫, ೨೦೬, ೨೦೮, ೨೧೦, ೨೨೨, ೨೨೮, ೨೨೯, ೨೩೭, ೨೩೮, ೨೪೧, ೨೪೬, ೨೪೮, ೨೫೦, ೨೫೨, ೨೫೫, ೨೫೯, ೨೬೧, ೨೬೬, ೨೭೨, ೨೭೯, ೨೮೧, ೨೮೫, ೨೮೮, ೨೯೧, ೨೯೪, ೨೯೭, ೨೯೯, ೩೦೧, ೩೦೨, ೩೦೭, ೩೦೮, ೩೦೯, ೩೨೯, ೩೩೪, ೩೩೫, ೩೩೯, ೩೪೮.


ಕಾ. ಸ. ಧರಣೇಂದ್ರಯ್ಯ,

ಗೌ|| ಕಾರ್ಯದರ್ಶಿಗಳು

ದಿವಂಗತ

ಶ್ರೀ ಶಿ. ಶಿ. ಬಸವನಾಳರು

* ಪರಿಷತ್ತಿನಲ್ಲಿ ೨೯–೧೨–೫೧ ರಲ್ಲಿ ನಡೆದ ಸಂತಾಪಸೂಚಕ ಸಭೆಯ ನಿರ್ಣಯ



ರಬಕವಿಯಲ್ಲಿ ೧೯೪೪ರಲ್ಲಿ ನಡೆದ ೨೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ, ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರೂ ಕನ್ನಡ ಸಾಹಿತ್ಯ ವಿದ್ವಾಂಸರೂ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಷೇತ್ರಗಳಲ್ಲಿ ವಿಖ್ಯಾತ ಸಂಶೋಧಕರೂ ಆಗಿದ್ದು ಕನ್ನಡ ನಾಡು ನುಡಿಗಳಿಗೆ ಅವಿಶ್ರಾಂತವಾದ ಸೇವೆ ಸಲ್ಲಿಸಿ ಅನೇಕ ಕನ್ನಡ, ಸಂಸ್ಕೃತ ಉದ್ಗ್ರಂಥಗಳನ್ನು ವಿದ್ವತ್ ಪೂರ್ಣವಾದ ಮುನ್ನುಡಿ ಮುತ್ತು ಕೋಶಗಳೊಡನೆ ಪ್ರಕಟಿಸಿ ಅಭಿನವ ಚನ್ನಬಸವಣ್ಣನವರೆಂದು ವಿಖ್ಯಾತರಾಗಿ ಪ್ರತಿಭಾಯುತವಾದ ಆದರೂ ವಿನಯಪೂರ್ವಕವಾದ ಜೀವನವನ್ನು ನಡೆಸಿದ ಶ್ರೀ ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳ, ಎಂ. ಎ. ಅವರು ೨೨-೧೨-೫೧ನೆಯ ಶನಿವಾರದ ದಿನ ಲಿಂಗೈಕ್ಯರಾದುದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಸೇರಿರುವ ಈ ಸಭೆ ಸಂತಾಪವನ್ನು ಸೂಚಿಸುತ್ತದೆ. ಅವರ ನಿಧನದಿಂದ ಸಮಸ್ತ ಕನ್ನಡ ನಾಡಿಗೆ ಅಪಾರ ನಷ್ಟವುಂಟಾಗಿದೆ. ಅವರಿಗೆ ಸದ್ಗತಿಯನ್ನು ಅನುಗ್ರಹಿಸಲೆಂದು ಪರಮೇಶ್ವರನನ್ನು ಈ ಸಾರ್ವಜನಿಕ ಸಭೆ ಪ್ರಾರ್ಥಿಸುತ್ತದೆ.

ದುಂಡುಮುಖ: ಗಿಡ್ಡಮೈ ನಸುಗೆಂಪು. ಮೆಲುದನಿಯ
ನಗುವಿಂದೆ ಗೆಳೆಯರನು ಕಾಣ್ಬಬಗೆ ಬಲು ಸೊಂಪು.
ಭಾವಪೂರ್ಣವು ನಿಮ್ಮ ನುಡಿ: ಮಾತು ಅದು ಇಂಪು.
ನಿಮ್ಮ ರಸಜೀವನದಿ ನಯನುಡಿಗಳತಿ ಪೆಂಪು.
ಕನ್ನಡಕಪಾರವೈ ನಿಮ್ಮ ಸತತ ಘನ ಸೇವೆ.
ಸಂಸ್ಥೆಗಳ ನಡೆಸುತಲಿ ಕೀರ್ತಿಯನು ಗಳಿಸಿದಿರಿ:
ದೇಹವದು ಹಣ್ಣಾಗೆ ದುಡಿಮೆಯಲಿ ಸವೆಸಿದಿರಿ.
"ಜಯಕರ್ನಾಟಕ"ವನದುವೆ ಹುಮ್ಮಸದಿ ಪ್ರಕಟಿಸುತೆ
ನಾಡನುಡಿಗಳ ಸೇವೆಗೈಯುತಲ್ಲೆ ಬಾಳಿದಿರಿ.
ಏಸು ಜನರಿಗೆ ನಿತ್ಯವಿದ್ಯೆಯನು ಕಲಿಸಿದಿರಿ!
ಏಸು ಜನಕದು ನೀವು ಜೀವನದ ದಾರಿದೀಪ!
ಕನ್ನಡದ ನಾಡ ಕನಸಿಂದು ನನಸಾಗುತಿರೆ
ಬಸವನಳಾರೆ ನೀವು ತೊರೆದೆಮ್ಮ ಪೋಗಿಹಿರಿ!
ಆತ್ಮಕಿದೆ ಶಾಂತಿಯನು ಕರುಣಿಸಲಿ ಮಾತಾಯಿ!

— ಪಂ. ವೆಂಕೋಬಾಚಾರ್ಯ, ಬಿ.ಎ.,ಬಿ.ಟಿ ಹುಬ್ಬಳ್ಳಿ

---

* ಈ ಸಭೆ ಪರಿಷದಧ್ಯಕ್ಷರಾದ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಯುತರಾದ ಪಂಡಿತರತ್ನಂ ಬಿ. ಶಿವಮೂರ್ತಿಶಾಸ್ತ್ರಿಗಳವರೂ, ರಾಜಸೇವಾಸಕ್ತ ಸಿ. ಕೆ. ವೆಂಕಟರಾಮಯ್ಯನವರೂ, ರಾಜಕಾರ್ಯಪ್ರಸಕ್ತ ಮಾಸ್ತಿ ವೆಂಕಟೇಶಯ್ಯಂಗಾರ್ಯರೂ ದಿವಂಗತರ ಸಾಹಿತ್ಯ ಸೇವೆಯ ಬಗ್ಗೆ ಮಾತನಾಡಿ ಅವರ ಗುಣಗಾನ ಮಾಡಿದರು. ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ ಕೆ. ಎಸ್. ಧರಣೇಂದ್ರಯ್ಯನವರು ದಿವಂಗತರ ಆತ್ಮಕ್ಕೆ ಶ್ರದ್ಧಾಂಜಲಿ ಸಮರ್ಪಣೆ ಮಾಡಿದರು. [ಸಂ.]

ಕನ್ನಡ ನುಡಿ

ಸಂಪುಟ ೧೫] ಜನವರಿ ೧೯೫೨ [ಸಂಚಿಕೆ ೧

ಭಾಷಾಂತರಶಾಖೆ

ಕನ್ನಡದಲ್ಲಿ ವಿಜ್ಞಾನಾದಿ ವಿಷಯಗಳ ಪುಸ್ತಕಗಳನ್ನು ಭಾಷಾಂತರಿಸುವ ಏರ್ಪಾಟುಮಾಡಬೇಕೆಂದೂ ಮುಂದೆ ವಿಶ್ವವಿದ್ಯಾನಿಲಯದಲ್ಲಿಯೂ ಕನ್ನಡವನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಮಾಡುವ ಏರ್ಪಾಟಾಗಬೇಕೆಂದೂ ಹಿಂದೆ ಶ್ರೀ ಶಿವಾನಂದ ಶರ್ಮರವರು ಮೈಸೂರಿನ ಶಾಸನ ಸಭೆಯಲ್ಲಿ ಒಂದು ನಿರ್ಣಯವನ್ನು ತಂದಿದ್ದರು. ಆ ವಿಚಾರವನ್ನು ಸರ್ಕಾರದವರು ಸಹಾನುಭೂತಿಯಿಂದ ಆಲೋಚಿಸುವುದಾಗಿ ಮಂತ್ರಿವರ್ಯರು ಭರವಸೆಯನ್ನು ಕೊಟ್ಟಿದ್ದರು. ಈಚೆಗೆ ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳ ಸಲಹೆಯನ್ನಂಗೀಕರಿಸಿ ಸರ್ಕಾರದವರು ಒಂದು ಅಪ್ಪಣೆಯನ್ನು ಹೊರಡಿಸಿದ್ದಾರೆ. ಈ ಭಾಷಾಂತರ ಶಾಖೆಯ ಸ್ಥಾಪನೆಯ ಆವಶ್ಯಕತೆ, ಅದರ ಕಾರ್ಯಕ್ರಮಗಳ ವ್ಯಾಪ್ತಿ ಮತ್ತು ವಿವರಗಳು, ಈ ಶಾಖೆಯು ಸ್ಥಾಪಿತವಾದರೆ ಅದು ವಿದ್ಯಾಭ್ಯಾಸದ ಇಲಾಖೆಗೆ ಅಧೀನವಾಗಿರಬೇಕೇ ಅಥವಾ ವಿಶ್ವವಿದ್ಯಾನಿಲಯಕ್ಕೆ ಅಧೀನವಾಗಿರಬೇಕೇ ?–ಎಂಬೀ ವಿಚಾರಗಳನ್ನೆಲ್ಲ ಪರ್ಯಾಲೋಚಿಸಿ ಸಲಹೆಗಳನ್ನು ಕೊಡುವುದಕ್ಕಾಗಿ ಒಂದು ಸಮಿತಿಯನ್ನು ಸರ್ಕಾರದವರು ನೇಮಿಸಿದ್ದಾರೆ. ಜ್ಞಾನಾಭಿವೃದ್ಧಿಗೂ ಶಿಕ್ಷಣಕ್ಕೂ ಉಪಯುಕ್ತವಾಗುವಂಥ ಪುಸ್ತಕಗಳನ್ನು ಭಾಷಾಂತರಿಸಿ ಒದಗಿಸುವುದು ಉದ್ದೇಶವಾಗಿರಬೇಕೆಂದು ಸರ್ಕಾರದವರು ತಿಳಿಸಿದ್ದಾರೆ.

ಈ ಪ್ರಶ್ನೆ ನಮ್ಮ ಮುಂದೆ ಬಂದಿರುವುದು ಒಳ್ಳೆಯದೇ ಆಯಿತು. ಈಗ ನಮಗೆ ಬೇಕಾಗಿರುವುದು ಕನ್ನಡದಲ್ಲಿ ಶಿಕ್ಷಣ, ಕನ್ನಡದ ಮೂಲಕ ಜ್ಞಾನಪ್ರಚಾರ. ವಿದ್ಯಾರ್ಥಿಗಳಿಗೆ ಬೇಕಾದ ಪ್ರೌಢವಾದ ಪಠ್ಯಪುಸ್ತಕಗಳನ್ನು ಒದಗಿಸುವುದು ಹೇಗೆ? ಸಾಮಾನ್ಯ ಜನ, ತಾವಾಗಿ ಓದಿಕೊಳ್ಳುವುದಕ್ಕೆ ಅನುಕೂಲವಾದ ಪುಸ್ತಕಗಳನ್ನು ಒದಗಿಸುವುದು ಹೇಗೆ? ಉಸ್ಮಾನಿಯಾ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದಾಗ ಉರ್ದುವಿನಲ್ಲಿ ಪಠ್ಯಪುಸ್ತಕಗಳನ್ನೊದಗಿಸಲು ಒಂದು ಭಾಷಾಂತರಶಾಖೆಯನ್ನು ಅವರು ಸ್ಥಾಪಿಸಿದರು. ಅದು ಈ ಮೂವತ್ತು ನಾಲ್ಕು ವರ್ಷಗಳಲ್ಲಿ ಐನೂರರ ಮೇಲೆ ಪುಸ್ತಕಗಳನ್ನು ಹೊರಗೆಡವಿದೆಯೆಂದೂ, ಆ ಪುಸ್ತಕಗಳಿಗಾಗಿ ಸುಮಾರು ಇಪ್ಪತ್ತು ಲಕ್ಷ ರೂಪಾಯಿಗಳು ವೆಚ್ಚವಾಗಿರುವುದೆಂದೂ ತಿಳಿಯುತ್ತದೆ. ಆ ಪುಸ್ತಕಗಳ ವಿಚಾರದಲ್ಲಿ ಅಂತಹ ಮೆಚ್ಚಿಕೆಯ ಮಾತುಗಳೇನೂ ಬಂದಿಲ್ಲ. ಆ ಭಾಷಾಂತರ ಶಾಖೆಯಿಂದ ನಿರೀಕ್ಷಿಸಿದಷ್ಟು ಕೆಲಸ ನಡೆದಿಲ್ಲವೆಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಆ ಉದಾಹರಣೆಯಿಂದ ನಾವು ಅಧೈರ್ಯಪಡಬೇಕಾಗಿಲ್ಲ.

ಎರಡನೆಯದಾಗಿ, ಇಂಡಿಯಾ ಸರ್ಕಾರದವರೂ ಕೆಲವು ವಿಶ್ವವಿದ್ಯಾನಿಲಯಗಳೂ ಭಾಷಾಂತರ ಶಾಖೆಯನ್ನು ಸ್ಥಾಪಿಸುವ ಪ್ರಯತ್ನಗಳನ್ನು ಕೈಗೊಳ್ಳುತ್ತಿರುವುದು ಕಂಡುಬಂದಿದೆ. ಭಾರತೀಯರಿಗೆ ಬೇಕಾಗುವ ಎಲ್ಲ ಗ್ರಂಥಗಳನ್ನೂ ಮೊದಲು ಹಿಂದಿಗೆ ಭಾಷಾಂತರಿಸಿ ಆಮೇಲೆ ಆ ಹಿಂದಿಯ ಗ್ರಂಥಗಳನ್ನು ಆಯಾ ದೇಶಭಾಷೆಗೆ ಭಾಷಾಂತರಿಸಿದರೆ ಪಠ್ಯಪುಸ್ತಕಗಳಲ್ಲಿ ಏಕರೂಪತೆ ದೊರೆಯುವುದೆಂದೂ, ದೇಶಭಾಷೆಗಳವರಿಗೆ ಶ್ರಮ ತಪ್ಪುವುದೆಂದೂ ಕೆಲವರು ಈಗಾಗಲೆ ಹೇಳುತ್ತಿದ್ದಾರೆ. ಈ ಬಲೆಗೆ ಕನ್ನಡಿಗರು ಬೀಳದಂತೆ ಎಚ್ಚರಿಕೆ ತೆಗೆದುಕೊಳ್ಳಬೇಕಾಗಿದೆ.

ನಮ್ಮ ಹಸಿವು ಇಂಗಬೇಕಾದರೆ ನಾವೇ ಹೊಟ್ಟೆಗೆ ಅನ್ನ ತಿನ್ನಬೇಕು ; ನಮ್ಮ ಮಿದುಳು ಬಲಿಯಬೇಕಾದರೆ ನಾವೇ ಅದಕ್ಕೆ ತಕ್ಕ ವ್ಯಾಯಾಮವನ್ನೊದಗಿಸಬೇಕು. ಈ ವಿಚಾರದಲ್ಲಿ ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲ. ಪಠ್ಯ ಪುಸ್ತಕಗಳ ವಿಚಾರದಲ್ಲಿ ಪ್ರಬಲವಾದ ಅಡ್ಡಿ ಆತಂಕಗಳು ನಮಗೇನೂ ತೋರುವುದಿಲ್ಲ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯಲ್ಲಿ 'ಪ್ರಾಣಿಶಾಸ್ತ್ರ' ಎಂಬ ಗ್ರಂಥ ಸುಮಾರು ೪೭೦ ಪುಟಗಳಷ್ಟರದು ಹಿಂದೆ ಪ್ರಕಟವಾಯಿತು. ಅದರ ಲೇಖಕರು ಡಾ|| ಎ. ಸುಬ್ಬರಾವ್, ಬಿ.ಎ., ಡಿ ಎಸ್.ಸಿ.(ಲಂಡನ್) ಮತ್ತು ಶ್ರೀ ಎ. ನಾರಾಯಣರಾವ್, ಎಂ.ಎಸ್.ಸಿ. ಮೊದಲಿನವರು ಸೆಂಟ್ರಲ್ ಕಾಲೇಜಿನಲ್ಲಿ ಪ್ರಾಣಿಶಾಸ್ತ್ರದ ಪ್ರೊಫೆಸರ್ ಆಗಿಯೂ, ಕಾಲೇಜಿನ ಪ್ರಿನ್ಸಿಪಾಲರಾಗಿಯೂ ಇದ್ದವರು. ಎರಡನೆಯವರು ಸೆಂಟ್ರಲ್ ಕಾಲೇಜಿನಲ್ಲಿ ಈಗಲೂ ಪ್ರಾಣಿಶಾಸ್ತ್ರದ ಅಧ್ಯಾಪಕರಾಗಿರುವವರು. ಈ ಗ್ರಂಥಕ್ಕೆ ಆ ಗ್ರಂಥಮಾಲೆಯ ಪ್ರಧಾನ ಸಂಪಾದಕರಾಗಿದ್ದ ಪ್ರೊಫೆಸರ್ ಎ. ಆರ್. ಕೃಷ್ಣಶಾಸ್ತ್ರಿಗಳು ಮುನ್ನುಡಿ ಬರೆಯುತ್ತ ಹೀಗೆ ಹೇಳಿದ್ದಾರೆ:—

" ಇಂಗ್ಲಿಷಿನಲ್ಲಿ ಈ ವಿಚಾರವಾಗಿ ಇರುವ ದೊಡ್ಡದೊಡ್ಡ ಗ್ರಂಥಗಳನ್ನು ನೋಡಿದರೆ ಪ್ರಕೃತ ಪುಸ್ತಕವು ತೀರ ಸಣ್ಣದು: ಇಲ್ಲಿ ಕಾಣುವುದು ಈ ಶಾಸ್ತ್ರದ 'ಪ್ರಥಮ ಪರಿಚಯ' ಮಾತ್ರ ಆದರೂ ಇದರಲ್ಲಿ ಇಂಟರ್ ಮೀಡಿಯೆಟ್ ಪರೀಕ್ಷೆಗೆ ವಿದ್ಯಾರ್ಥಿಗಳು ವ್ಯಾಸಂಗ ಮಾಡುವ ವಿಷಯವೆಲ್ಲಾ ಅಡಕವಾಗಿದೆ; ಬಿ.ಎಸ್‌ಸಿ. ಪರೀಕ್ಷೆಗೆ ವ್ಯಾಸಂಗ ಮಾಡುವ ಭಾಗಗಳೂ ಕೆಲವಿವೆ. ಈಗ್ಗೆ ಸುಮಾರು ಐವತ್ತು ವರ್ಷಗಳಿಂದ ಆಗೊಂದು ಈಗೊಂದರಂತೆಯೂ, ಹೈಸ್ಕೂಲು ತರಗತಿಗಳಲ್ಲಿ ಕನ್ನಡ ಮಾಧ್ಯಮವು ಆಚರಣೆಗೆ ಬಂದಮೇಲೆ ಹೆಚ್ಚುಹೆಚ್ಚಾಗಿಯೂ, ಪ್ರಕಟವಾದ ವೈಜ್ಞಾನಿಕ ಗ್ರಂಥಗಳನ್ನು ನೋಡಿದರೆ, ಇವಕ್ಕಿಂತ ಇನ್ನೂ ಮೇಲಿನ ವಿಷಯಗಳನ್ನಾದರೂ ಕ್ರಮವಾಗಿ ಕನ್ನಡದಲ್ಲಿ ವಿವರಿಸುವುದು ಅಸಾಧ್ಯವೇನಲ್ಲ ಎಂಬುದು ಸ್ಪಷ್ಟಪಡುತ್ತದೆ. ಈ ಗ್ರಂಥಮಾಲೆಯಲ್ಲಿಯೇ ಇದುವರೆಗೆ ಜೀವಶಾಸ್ತ್ರ, ಭೂಗರ್ಭಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಭಾರತೀಯ ದರ್ಶನ, ಗ್ರೀಕರ ತತ್ವಶಾಸ್ತ್ರ—ಇವುಗಳಮೇಲೆ ತಕ್ಕಮಟ್ಟಿನ ಪ್ರೌಢ ಗ್ರಂಥಗಳು ಬಂದಿವೆ. ಭೌತಶಾಸ್ತ್ರ ರಸಾಯನಶಾಸ್ತ್ರ, ಆಧುನಿಕ ಪಾಶ್ಚಾತ್ಯದರ್ಶನ ಮುಂತಾದ ವಿಷಯಗಳಮೇಲೆ ಆಯಾ ಶಾಸ್ತ್ರಗಳ ಪ್ರೌಢ ಅಧ್ಯಾಪಕರಿಂದ ಬರೆದ ಗ್ರಂಥಗಳು ಬರಲಿವೆ. ಕನ್ನಡ ಬಳಕೆಯಲ್ಲಿರುವ ಭಾಷೆ; ಆದ್ದರಿಂದ ಬೆಳೆವಣಿಗೆಗೆ ಅವಕಾಶ ದೊರೆತಹಾಗೆಲ್ಲಾ ಅದು ಬೆಳೆಯಬಲ್ಲುದು." ಮೇಲೆ ಹೇಳಿರುವುದು ಅನುಭವದ ಸತ್ಯವಾದ ಮಾತು.

ಮುಖ್ಯಾಂಶವೇನೆಂದರೆ, ಸರ್ಕಾರದವರಿಗೂ ಮೈಸೂರು ವಿಶ್ವವಿದ್ಯಾನಿಲಯದವರಿಗೂ ಕನ್ನಡವನ್ನು ಮುಂದಕ್ಕೆ ತರಬೇಕು, ಕನ್ನಡವನ್ನು ಶಿಕ್ಷಣ ಮಾಧ್ಯಮ ಮಾಡಬೇಕು ಎಂದು ಮೊದಲಾಗಿ ಉತ್ಕಟಾಕಾಂಕ್ಷೆಗಳಿದ್ದರೆ ಪಠ್ಯ ಪುಸ್ತಕಗಳು ದೊರೆಯುವುದು ಕಷ್ಟವಲ್ಲ. ಹಿಂದೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ ಚೆನ್ನಾಗಿ ಬೆಳೆದು ಬಂತು. ಈಚೆಗೆ ಅದರ ಬೆಳೆವಣಿಗೆ ನಿಂತೇಹೋದಂತೆ ಕಾಣುತ್ತದೆ. ೧೯೪೪ರಲ್ಲಿ 'ಪ್ರಾಣಿಶಾಸ್ತ್ರ' ಪ್ರಕಟವಾಗಿ, ಅದರ ತರುವಾಯ ಹಿಂದೆ ಬರೆದಿದ್ದ 'ಆಧುನಿಕ ತತ್ವಶಾಸ್ತ್ರ ಸಮಸ್ಯೆಗಳು', 'ಕನ್ನಡ ಕೈಪಿಡಿ' (ಭಾಗ ೫, ಸಾಹಿತ್ಯ ಚರಿತ್ರೆ: ಲೇಖಕರು ಬಿ. ಎಂ. ಶ್ರೀಕಂಠಯ್ಯನವರು, ಎಂ.ಎ., ಬಿ ಎಲ್.) ಮತ್ತು 'ಇಸ್ಲಾಂ ಸಂಸ್ಕೃತಿ' (ಅನುವಾದಕರು :—ರಾಜಸೇವಾಸಕ್ತ ಬಿ.ಎಂ. ಶ್ರೀಕಂಠಯ್ಯ, ಎಂ.ಎ ,ಬಿ.ಎಲ್. ಅವರು) ಎಂಬ ಮೂರು ಗ್ರಂಥಗಳು ಮಾತ್ರ ಪ್ರಕಟವಾಗಿವೆ. ಹಿಂದೆ ಗ್ರಂಥ ರಚನೆಗಿದ್ದ ಪ್ರೋತ್ಸಾಹ ಈಗೇನಾಯಿತು? ಮೈಸೂರು ವಿಶ್ವವಿದ್ಯಾನಿಲಯದವರು ಈ ವಿಚಾರದಲ್ಲಿ ಇಷ್ಟೊಂದು ಔದಾಸೀನ್ಯವನ್ನು ಏಕೆ ತೋರಿಸುತ್ತಿದ್ದಾರೋ ತಿಳಿಯದು. ವಿಶ್ವವಿದ್ಯಾನಿಲಯದಲ್ಲಿರುವ ಪ್ರಾಧ್ಯಾಪಕರುಗಳಿಗೆ ಸಂಭಾವನೆಗಳನ್ನು ಕೊಟ್ಟು ಗ್ರಂಥಗಳನ್ನು ಬರೆಸಿದರೆ ಪಠ್ಯಪುಸ್ತಕಗಳು ಒದಗಲಾರವೆ? ಕನ್ನಡದಲ್ಲಿ ಪಾಠ ಹೇಳುವುದಕ್ಕೆ ತೊಡಗಿದರೆ ಪಠ್ಯ ಪುಸ್ತಕಗಳು ರಚನೆಯಾಗಲಾರವೆ? ಒಂದು ವ್ಯವಸ್ಥಿತವಾದ ಕ್ರಮದಲ್ಲಿ ನಮಗೆ ಬೇಕಾಗಿರುವ ಪುಸ್ತಕಗಳನ್ನು ಒದಗಿಸಿಕೊಳ್ಳುವುದು ಸಾಧ್ಯವಿದೆ. ಈ ವಿಚಾರವನ್ನು ಸರ್ಕಾರದವರು ನೇಮಿಸಿರುವ ಸಮಿತಿ ಗಮನಿಸುವುದೆಂದು ನಂಬಿದ್ದೇವೆ.

ಎರಡನೆಯದಾಗಿ, ಮೈಸೂರು ಸರ್ಕಾರದವರಿಂದ ಕನ್ನಡ ಪುಸ್ತಕಗಳಿಗೆ ತಕ್ಕಷ್ಟು ಪ್ರೋತ್ಸಾಹ! ದೊರೆಯುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಮೂವತ್ತು ವರ್ಷಗಳ ಹಿಂದೆ ಗ್ರಂಥಕರ್ತರ ಪ್ರೋತ್ಸಾಹಕ್ಕಾಗಿ ವಿದ್ಯಾಭ್ಯಾಸದ ಇಲಾಖೆಯ ಆಯವ್ಯಯ ಪಟ್ಟಿಯಲ್ಲಿ ಐದಾರು ಸಾವಿರ ರೂಪಾಯಿಗಳನ್ನು ಮೀಸಲಾಗಿಡುತ್ತಿದ್ದರು. ಈಗಿನಕಾಲಕ್ಕೆ ಅದು ಐವತ್ತು ಸಾವಿರ ರೂಪಾಯಿಗಳಾದರೂ ಆಗಬೇಕಾಗಿತ್ತು. ಈಗ ಇಲಾಖೆಯವರ ಮೂಲಕ ಏನು ಪ್ರೋತ್ಸಾಹ ದೊರೆಯುತ್ತಿದೆ? ಕನ್ನಡ ಗ್ರಂಥಗಳಿಗಾಗಿ ಈ ಐದು ವರ್ಷಗಳಲ್ಲಿ ಕೊಟ್ಟಿರುವ ಪ್ರೋತ್ಸಾಹರೂಪದ ಸಂಭಾವನೆಗಳ ಪಟ್ಟಿಯನ್ನು ಇಲಾಖೆಯವರು ದಯವಿಟ್ಟು ಪ್ರಕಟಿಸಬೇಕೆಂದು ವಿನಯದಿಂದ ಕೇಳಿಕೊಳ್ಳುತ್ತೇವೆ. ಆಧುನಿಕ ಜ್ಞಾನ ವಿಜ್ಞಾನಗಳಿಗೆ ಸಂಬಂಧಿಸಿದ ಗ್ರಂಥ ಕನ್ನಡದಲ್ಲಿ ಪ್ರಕಟವಾದರೆ ಒಂದೊಂದು ಗ್ರಂಥದ ಸುಮಾರು ೨೫೦ ರಿಂದ ೫೦೦ ರವರೆಗೆ ಪ್ರತಿಗಳನ್ನು ಏತಕ್ಕೆ ಕೊಂಡುಕೊಳ್ಳಬಾರದು? ಈಗ ಒಂದು ವರ್ಷಕ್ಕೆ ಇಂಥ ಗ್ರಂಥಗಳು ಇಡಿಯ ಕರ್ಣಾಟಕಕ್ಕೆ ಸುಮಾರು ಇಪ್ಪತ್ತು ಕೂಡ ಪ್ರಕಟವಾಗುತ್ತಿಲ್ಲ. ಸರ್ಕಾರದವರು ವರ್ಷಕ್ಕೆ ಒಂದು ಲಕ್ಷ ರೂಪಾಯಿಗಳಂತೆ ಮೇಲ್ಕಂಡ ಗ್ರಂಥಗಳ ಪ್ರೋತ್ಸಾಹಕ್ಕಾಗಿ ಮೀಸಲಾಗಿಡಲಿ. ಗ್ರಂಥವನ್ನು ಬರೆದವರಿಗೂ ಪ್ರಕಟಿಸಿದವರಿಗೂ ಒಂದು ಧೈರ್ಯವನ್ನು ನೀಡಲಿ. ಸಾಮಾನ್ಯ ಜನರಿಗೆ ಉಪಯುಕ್ತವಾದ ಗ್ರಂಥಗಳೂ ಶಿಕ್ಷಣಕ್ಕೆ ಉಪಯುಕ್ತವಾದ ಗ್ರಂಥಗಳೂ ವರ್ಷವರ್ಷಕ್ಕೂ ಹೇರಳವಾಗಿ ಪ್ರಕಟವಾಗುತ್ತ ಹೋಗುತ್ತವೆ.

ಆದ್ದರಿಂದ ಸಮಿತಿಯವರು ಈಗ ದೊರೆತಿರುವ ಅವಕಾಶವನ್ನು ಉಪಯೋಗಿಸಿಕೊಂಡು ಕನ್ನಡದಲ್ಲಿ ಆಧುನಿಕ ಜ್ಞಾನ ವಿಜ್ಞಾನಗಳ ಸಾಹಿತ್ಯ ಸರ್ವತೋಮುಖವಾಗಿ ಬೆಳೆಯುವಂತೆಯೂ ಕನ್ನಡ ಜನ ಉದ್ಧಾರವಾಗುವಂತೆಯೂ ಸಲಹೆಗಳನ್ನು ಮಾಡುತ್ತಾರೆಂದು ನಂಬಿದ್ದೇವೆ.

ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರು

ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಶ್ರೀ ತೀ. ನಂ. ಶ್ರೀಕಂಠಯ್ಯ ಎಂ.ಎ., ಅವರನ್ನು ಕನ್ನಡದ ಪ್ರಾಧ್ಯಾಪಕರಾಗಿ ನೇಮಕ ಮಾಡಿರುವುದು ಕನ್ನಡ ನಾಡಿಗೆಲ್ಲ ಬಹಳ ಸಂತೋಷವುಂಟುಮಾಡುತ್ತದೆಂದು ನಾವು ಭಾವಿಸುತ್ತೇವೆ. ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಯಲ್ಲಿರುವವರು; ಪರಿಷತ್ತು ಕೈಕೊಂಡಿರುವ ಕನ್ನಡ–ಕನ್ನಡ ಕೋಶದ ಸಂಪಾದಕರಾಗಿರುವವರು. ಒಳ್ಳೆಯ ಮೂರ್ತಿಸ್ವರೂಪ, ಘನವಾದ ಪಾಂಡಿತ್ಯ, ಜತೆಗೆ ಕವಿತಾಶಕ್ತಿ ಇರುವ ಸುಸಂಸ್ಕೃತರು. ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷಾ ಸಾಹಿತ್ಯಗಳಲ್ಲಿ ಉದ್ದಾಮ ಪಂಡಿತರಾಗಿರುವರಲ್ಲದೆ, ತಮಿಳು, ತೆಲುಗು, ಹಿಂದಿ ಮೊದಲಾದ ಭಾಷೆಗಳನ್ನು ಚೆನ್ನಾಗಿ ವ್ಯಾಸಂಗ ಮಾಡಿರುವವರು. ಶ್ರೀ ತೀ. ನಂ. ಶ್ರೀಕಂಠಯ್ಯನವರನ್ನೂ ಹಾಗೆಯೇ ಕರ್ನಾಟಕ ವಿಶ್ವವಿದ್ಯಾನಿಲಯವನ್ನೂ ನಾವು ಈ ಸಂದರ್ಭದಲ್ಲಿ ಅಭಿನಂದಿಸುತ್ತೇವೆ.

ಈ ನೇಮಕದಿಂದ ಒಂದು ರೀತಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ನಷ್ಟ; ಆದರೆ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೂ, ಕನ್ನಡನಾಡಿಗೂ ದೊಡ್ಡ ಲಾಭ. ಇಷ್ಟು ವರ್ಷಗಳಾಗಿದ್ದರೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರನ್ನು (University Professor of Kannada) ಅದು ನೇಮಕಮಾಡದೇ ಹೋಯಿತು. ಸರ್ಕಾರದಿಂದ ಬೇಕಾದಷ್ಟು ದ್ರವ್ಯ ಸಹಾಯವನ್ನು ಪಡೆಯುತ್ತಿದ್ದರೂ ಕನ್ನಡಕ್ಕೆ ಒಂದು ಗೌರವ ಸ್ಥಾನವನ್ನು ಕೊಡದೇ ಹೋಯಿತು. ಹೊಸದಾಗಿ ಸ್ಥಾಪಿತವಾಗಿರುವ ಮತ್ತು ಹೆಚ್ಚೇನೂ ದ್ರವ್ಯಸಂಪತ್ತಿಲ್ಲದ ಕರ್ನಾಟಕ ವಿಶ್ವವಿದ್ಯಾನಿಲಯ ಈ ವಿಚಾರದಲ್ಲಿ ಭಾಷಾಭಿಮಾನದಿಂದಲೂ ಔದಾರ್ಯದಿಂದಲೂ ವರ್ತಿಸಿ ನಮ್ಮೆಲ್ಲರ ಕೃತಜ್ಞತೆಗೆ ಪಾತ್ರವಾಯಿತು. ಇನ್ನುಮುಂದೆ ಶ್ರೀ ಶ್ರೀಕಂಠಯ್ಯನವರ ನೇತೃತ್ವದಲ್ಲಿ ಧಾರವಾಡ ಕನ್ನಡದ ಬೆಳವಣಿಗೆಯ ಮುಖ್ಯ ಕೇಂದ್ರವಾಗುವುದೆಂದು ನಾವು ಭರವಸೆಯಿಟ್ಟುಕೊಂಡಿದ್ದೇವೆ.

ಶ್ರೀಯುತರನ್ನು ಅಭಿನಂದಿಸುವ ಮತ್ತು ಬೀಳ್ಕೊಡುವ ಸಲುವಾಗಿ ಪರಿಷತ್ತಿನಲ್ಲಿ ಈ ತಿಂಗಳ ೧೦ನೆಯ ತಾರೀಕು ಗುರುವಾರ ಒಂದು ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಗೆ ಪರಿಷದಧ್ಯಕ್ಷರು ಅಧ್ಯಕ್ಷರಾಗಿದ್ದರು. ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳವರೂ, ಶ್ರೀ ತಾತಾಚಾರ್ಯಶರ್ಮ ಅವರೂ ಮತ್ತು ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಡೈರೆಕ್ಟರವರಾದ ವಿದ್ಯಾರತ್ನ, ಶ್ರೀ ಆರ್. ಎಸ್. ಪಂಚಮುಖಿಯವರೂ ಶ್ರೀಯುತರ ವೈದುಷ್ಯದ ಬಗ್ಗೆ ಭಾಷಣಗಳನ್ನು ಮಾಡಿ ಅವರನ್ನು ಆಶೀರ್ವದಿಸಿದರು. ಪರಿಷತ್ತಿನ ಪರವಾಗಿ ಅವರಿಗೆ ಫಲಪುಷ್ಪಗಳನ್ನು ಅರ್ಪಿಸಲಾಯಿತು ಅವರು ಆ ದಿನ ರಾತ್ರಿಯೇ ಧಾರವಾಡಕ್ಕೆ ಪ್ರಯಾಣ ಬೆಳಸಿದರು.

ಕನ್ನಡ ಕನ್ನಡ ಕೋಶ

ಮೇಲ್ಕಂಡ ಕೋಶದ ಕೆಲಸ ಈಗ ಏಳೆಂಟು ವರ್ಷಗಳಿಂದ ನಡೆದು ಬರುತ್ತಿರುವುದು ಪರಿಷತ್ತಿನ ಸದಸ್ಯರಿಗೂ ಕನ್ನಡ ನಾಡಿನ ಸರ್ಕಾರಗಳಿಗೂ ಮಹಾಜನಗಳಿಗೂ ತಿಳಿದ ವಿಷಯ. ಈಗ ಎರಡು ಲಕ್ಷಕ್ಕೆ ಮೇಲ್ಪಟ್ಟು ಪ್ರಯೋಗಗಳನ್ನು ಸಂಗ್ರಹಿಸಲಾಗಿದೆ. ಪದಗಳನ್ನು 'ಅ'ಕಾರಾದಿಯಾಗಿ ವಿಂಗಡಿಸಿ ಅರ್ಥಗಳನ್ನೂ, ಪ್ರಯೋಗಗಳನ್ನೂ, ಪದಗಳ ವ್ಯುತ್ಪತ್ತಿ, ರೂಪವ್ಯತ್ಯಾಸಗಳು ಮೊದಲಾದುವನ್ನೂ, ಇತರ ಉಪಯುಕ್ತ ವಿಷಯಗಳನ್ನೂ ಬರೆಯುವ ಕೆಲಸಕ್ಕೆ ಈಗ ತೊಡಗುತ್ತಿದ್ದೇವೆ. ಸದ್ಯದಲ್ಲಿ ಹನ್ನೆರಡು ಮಂದಿ ವಿದ್ವಾಂಸರನ್ನು ಒಪ್ಪೊತ್ತಿನ ಕೆಲಸಗಾರರನ್ನಾಗಿ ನೇಮಿಸಿಕೊಂಡು ಕೆಲಸವನ್ನು ಮುಂದುವರಿಸುತ್ತಿದ್ದೇವೆ. ಕೋಶದ ಕಚೇರಿಯನ್ನು ವಿಸ್ತಾರಪಡಿಸುವ ಕಾರ್ಯ ಅತ್ಯಗತ್ಯವಾಗಿದೆ. ಈ ವರ್ಷದಲ್ಲಿ ಇನ್ನೂ ನಾಲ್ಕು ಜನ ಒಪ್ಪೊತ್ತಿನ ಕೆಲಸಗಾರರನ್ನೂ ಮೂರು ಜನ ಪೂರ್ತಿಕಾಲದ ಕೆಲಸಗಾರರನ್ನೂ ನೇಮಿಸಿಕೊಳ್ಳಬೇಕೆಂದು ನಿಶ್ಚಯಿಸಿದ್ದೇವೆ. ಈ ಕೋಶದ ಕೆಲಸವನ್ನು ಇನ್ನು ಐದುವರ್ಷಗಳೊಳಗಾಗಿ ಮುಗಿಸಿ ಪ್ರತಿಗಳು ಕನ್ನಡಿಗರಿಗೆ ದೊರೆಯುವಂತೆ ಮಾಡಬೇಕೆಂಬ ಉತ್ಕಟಾಕಾಂಕ್ಷೆ ನಮಗಿದೆ. ಆದರೆ ದ್ರವ್ಯಾಭಾವದಿಂದ ಕೆಲಸ ವೇಗದಲ್ಲಿ

ಮುಂದುವರಿಯುತ್ತಿಲ್ಲ. ೧೯೫೩ನೆಯ ವರ್ಷಕ್ಕೆ ೧೨,೦೦೦ ರೂಪಾಯಿಗಳ ವರೆಗೆ ಕೋಶದ ಕಚೇರಿಗೆ ಹಣ ಒದಗಬೇಕಾಗಿದೆ. ಆದರೆ ಈಗ ಮೈಸೂರು ಸರ್ಕಾರದವರು ಕೊಡುತ್ತಿರುವ ೩,೦೦೦ ರೂಪಾಯಿಗಳ ಸಹಾಯ ದ್ರವ್ಯವೊಂದೇ ನಮಗೆ ಆಧಾರವಾಗಿದೆ. ಹಿಂದೆ ಕರ್ನಾಟಕ ವಿಶ್ವವಿದ್ಯಾನಿಲಯದವರು ೧,೦೦೦ ರೂಪಾಯಿಗಳ ಸಹಾಯ ದ್ರವ್ಯವನ್ನು ನಮಗೆ ಅನುಗ್ರಹಿಸಿದರು. ಆ ಸಹಾಯ ದ್ರವ್ಯವನ್ನು ೨,೦೦೦ ರೂಪಾಯಿಗಳಿಗೆ ಏರಿಸಿ ಮುಂದೆಯೂ ನಡೆಸಿಕೊಂಡು ಬರಬೇಕೆಂದು ಆ ವಿಶ್ವವಿದ್ಯಾನಿಲಯದವರನ್ನು ಪ್ರಾರ್ಥಿಸುತ್ತೇವೆ. ಮೈಸೂರು ವಿಶ್ವವಿದ್ಯಾನಿಲಯದವರೂ ಇತರ ವಿಶ್ವವಿದ್ಯಾನಿಲಯಗಳೂ ಹೀಗೆಯೇ ನಮಗೆ ಸಹಾಯ ನೀಡಬೇಕೆಂದು ಪ್ರಾರ್ಥಿಸುತ್ತೇವೆ.

ಕನ್ನಡನಾಡಿಗೆ ಅತ್ಯವಶ್ಯವಾಗಿ ಬೇಕಾಗಿರುವ, ವಿದ್ವಾಂಸರಿಂದ ಸಂಪಾದಿತವಾಗುವ ಇಂತಹ ಬೃಹತ್ ಕೋಶಕ್ಕೆ ಎಲ್ಲ ಸಂಸ್ಥೆಗಳೂ ನೆರವು ನೀಡಬೇಕಾದುದು ಅವುಗಳ ಕರ್ತವ್ಯವೆಂದು ನಾವು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಒಂದು ಸ್ವಾರಸ್ಯವಾದ ಟೀಕೆ.

ಕೆಲವು ದಿನಗಳ ಹಿಂದೆ' 'ಹಿಂದು' ದಿನ ಪತ್ರಿಕೆಯಲ್ಲಿ ಒಂದು ಪ್ರಕರಣ ಪ್ರಕಟವಾಗಿತ್ತು. ಲಂಡನ್ನಿನ 'ಬ್ರಿಟಿಷ್ ಕೌನ್ಸಿಲ್' ಸಂಸ್ಥೆಯವರು ಸಿಂಹಳ ದ್ವೀಪದಲ್ಲಿ ಕೆಲವು ಉಪನ್ಯಾಸಗಳನ್ನು ಕೊಡುವುದಕ್ಕಾಗಿ ಒಬ್ಬರು ವಿದ್ವಾಂಸರನ್ನು ಕಳಿಸಿಕೊಟ್ಟಿದ್ದರು. ಆ ವಿದ್ವಾಂಸರ ಉಪನ್ಯಾಸಗಳಿಗೆ ಜನ ಹೆಚ್ಚು ಸಂಖ್ಯೆಯಲ್ಲಿ ಸೇರಲಿಲ್ಲ. ಬಂದಿದ್ದ ಕೆಲವು ಜನರೂ ಸ್ವಲ್ಪ ಗಲಾಟೆ ಮಾಡಿ ಸಭೆಯನ್ನು ಬಿಟ್ಟು ಹೊರಟು ಹೋದರು. ಆ ಕೌನ್ಸಿಲಿನ ಪ್ರತಿನಿಧಿಗಳ ಮನಸ್ಸಿಗೆ ಬೇಜಾರಾಯಿತು. 'ಈ ಸಿಂಹಳದ್ವೀಪದ ನಾಗರಿಕರು ಸಿನಿಮಾ ಮಂದಿರಗಳ ಮುಂದೆ ಟಿಕೆಟ್ ಪಡೆಯುವುದಕ್ಕಾಗಿ ರಸ್ತೆಯಲ್ಲಿ ಸಾಲುಗಟ್ಟಿ ನಿಂತಿರುತ್ತಾರೆ; ಸಂಸ್ಕೃತಿಯ ಮೇಲಿನ ಉಪನ್ಯಾಸಗಳಿಗೆ ನಾಲ್ಕು ಜನರೂ ಬರುವುದಿಲ್ಲ. ಸಿಂಹಳ ದ್ವೀಪದವರು ತಮ್ಮ ನಡತೆಯನ್ನು ತಿದ್ದಿಕೊಳ್ಳದಿದ್ದರೆ ಇನ್ನು ಮೇಲೆ ಇಲ್ಲಿಗೆ ಉಪನ್ಯಾಸಕರನ್ನು ಕಳಿಸಬೇಡಿರೆಂದು ಲಂಡನ್ನಿನ ಸಂಸ್ಥೆಗೆ ಸೂಚನೆ ಕೊಡಬೇಕಾಗುತ್ತದೆ' ಎಂಬ ಬೆದರಿಕೆಯ ಟೀಕೆಯನ್ನು ಪತ್ರಿಕೆಗಳಲ್ಲಿ ಪ್ರಕಟಿಸದರಂತೆ. ಒಟ್ಟಾಗಿ ಸಿಂಹಳ ದ್ವೀಪದ ಜನರನ್ನೆಲ್ಲ ಟೀಕಿಸಿದ್ದರಿಂದ ಅದು ವಿರಸಕ್ಕೆ ಎಡೆಗೊಟ್ಟು ಇಂಗ್ಲಿಷ್ ವಿರುದ್ಧ ವಾತಾವರಣ ಕಾಣಿಸಿಕೊಂಡಿತು, ಇಂಗ್ಲೆಂಡಿನ 'ಡೈಲಿ ಎಕ್ಸ್‌ಪ್ರೆಸ್' ಪತ್ರಿಕೆ, 'ಆ ಪ್ರತಿನಿಧಿ ಆ ರೀತಿ ಟೀಕಿಸಿದ್ದು ಸರಿಯಲ್ಲ. ನೀರಸ ಉಪನ್ಯಾಸಗಳನ್ನು ಕೇಳುವುದಕ್ಕೆ ಜನ ಏಕೆ ಬರಬೇಕು? ಬರಿಯ ಪಾಂಡಿತ್ಯ ಪ್ರದರ್ಶನದ ತಿರುಳಿಲ್ಲದ ಭಾಷಣಗಳನ್ನು ಕೇಳುತ್ತಾ ಕುಳಿತಿರುವುದಕ್ಕೆ ಬದಲು ಏತಕ್ಕೆ ಎದ್ದು ಹೋಗಬಾರದು? ಸಿನಿಮಾ ಮಂದಿರಗಳಿಗೆ ಏಕೆ ಹೋಗಬಾರದು? ಹಾಗೆ ಎದ್ದು ಹೋಗುವುದು ಅಸಭ್ಯ ವರ್ತನೆಯೇನೂ ಅಲ್ಲ, ಅದು ಬುದ್ಧಿಶಾಲಿಗಳ ವರ್ತನೆ' ಎಂದು ಮುಂತಾಗಿ ಬರೆಯಿತು.

ಇಂತಹ ಪ್ರಸಂಗಗಳು ಬಹುಮಟ್ಟಿಗೆ ಉಪನ್ಯಾಸಕರ ಮತ್ತು ಸಂಸ್ಥೆಗಳ ಅನುಭವಗಳಲ್ಲಿವೆ. ರಾಜಕೀಯ ಭಾಷಣಗಳಿಗೆ ಸಾಮಾನ್ಯವಾಗಿ ಜನ ಸೇರುತ್ತಾರೆ. ಪುಕಸಟ್ಟೆ ನಾಟಕಗಳೂ ನೃತ್ಯಗಳೂ ಏರ್ಪಾಟಾದರೆ ಸಭಾಮಂದಿರ ಕಿಕ್ಕಿರಿದು ತುಂಬಿರುತ್ತದೆ. ಸಿನಿಮಾ ಮಂದಿರಗಳ ವಿಚಾರವನ್ನಂತೂ ಹೇಳಬೇಕಾಗಿಲ್ಲ. ಉಪನ್ಯಾಸಕರು ಸಹೃದಯರಾದ ಹತ್ತು ಜನ ಶ್ರೋತೃಗಳು ಸಭೆಯಲ್ಲಿರಬೇಕೆಂದು ಆಶಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ವ್ಯವಸ್ಥಾಪಕರು ಜಾತ್ರೆಗಳ ಕಾಲದಲ್ಲಿ ಉಪನ್ಯಾಸಕರನ್ನು ಬರಮಾಡಿಕೊಂಡು ಸಾಹಿತ್ಯದ ಮೇಲೆ ಆ ಜಾತ್ರೆಯ ಮುಂದಿಗೆ ಬಯಲಿನಲ್ಲಿ ಉಪನ್ಯಾಸ ಮಾಡಿರೆಂದು ಹೇಳುತ್ತಾರೆ. ಯಾರೋ ದೊಡ್ಡ ಅಧಿಕಾರಿಗಳು ಅಥವಾ ಜಗದ್ಗುರುಗಳು ವೇದಿಕೆಯ ಮೇಲೆ ಮಂಡಿಸಿರುತ್ತಾರೆ. ಮುಂದೆ ಸಹಸ್ರಾರು ಮಂದಿ ನೆರೆದಿರುತ್ತಾರೆ. ಆದರೆ ಉಪನ್ಯಾಸಕರಿಗೆ ಎಷ್ಟು ಉತ್ಸಾಹ ಇರಬಹುದು ಎಂಬುದನ್ನು ನಾವು ಹೇಳಲಾರೆವು.

ಕೈಲಾಸವಾಸಿಗಳಾದ ಶಿ. ಶಿ. ಬಸವನಾಳರು

ಶ್ರೀ ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳರು ಕಳೆದ ತಿಂಗಳು ೨೨ನೆಯ ತಾರೀಕಿನ ದಿನ ಧಾರ್ವಾಡದಲ್ಲಿ ತಮ್ಮ ಸ್ವಂತ ಗೃಹದಲ್ಲಿ ಶಿವೈಕ್ಯರಾದರು—ಎಂದು ತಿಳಿಸುವುದಕ್ಕೆ ಬಹಳ ವಿಷಾದವಾಗುತ್ತದೆ. ಅವರ ನಿಧನದ ಬಗ್ಗೆ ಪರಿಷತ್ತಿನಲ್ಲಿ ಒಂದು ಸಂತಾಪಸೂಚಕ ಸಭೆ

ಯನ್ನು ಕರೆಯಲಾಗಿತ್ತು. ಅಲ್ಲಿ ಆದ ನಿರ್ಣಯವನ್ನು ಬೇರೆ ಕಡೆ ಕೊಟ್ಟಿದೆ.

ಬಸವನಾಳರು ಶಿಕ್ಷಣಪ್ರಪಂಚದಲ್ಲಿ ಖ್ಯಾತಿಯನ್ನು ಪಡೆದವರಾಗಿದ್ದರು. ಅವರಿಗೂ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಗೂ ಬಹಳ ನಿಕಟವಾದ ಸಂಬಂಧವಿತ್ತು. ಹಲವು ಕಡೆಗಳಲ್ಲಿ ಹೈಸ್ಕೂಲ್ ಮತ್ತು ಕಾಲೇಜುಗಳನ್ನು ಸ್ಥಾಪಿಸುವುದರಲ್ಲಿ ಅವರು ಪ್ರಮುಖಪಾತ್ರವನ್ನು ವಹಿಸಿದ್ದರು. ಸ್ವತಃ ಪ್ರಾಧ್ಯಾಪಕರಾಗಿದ್ದು ಸಹಸ್ರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ್ದಲ್ಲದೆ ಅವರ ಮೇಲೆಲ್ಲ ಒಳ್ಳೆಯ ಪ್ರಭಾವವನ್ನು ಬೀರಿದ್ದರು. ಬೆಳಗಾವಿನ ಲಿಂಗರಾಜ ಕಾಲೇಜಿನಲ್ಲಿ ಕನ್ನಡದ ಮತ್ತು ಇತಿಹಾಸದ ಪ್ರಾಧ್ಯಾಪಕರಾಗಿದ್ದು ನಿವೃತ್ತರಾದರು.

ಶ್ರೀಯುತರು ವೀರಶೈವ ಸಾಹಿತ್ಯದಲ್ಲಿ ಮಾತ್ರವಲ್ಲದೆ ಜೈನ ಮತ್ತು ಬ್ರಾಹ್ಮಣ ಸಾಹಿತ್ಯಗಳಲ್ಲಿಯೂ ಉದ್ದಾಮ ಪಂಡಿತರಾಗಿದ್ದರು. ಗುಣಗ್ರಾಹಿಗಳಾದ ವಿಮರ್ಶಕರಾಗಿದ್ದು ಸಾಹಿತ್ಯ ದೃಷ್ಟಿಯನ್ನು ಎತ್ತಿ ಹಿಡಿಯುತ್ತಿದ್ದರು. ನಿರಾಡಂಬರದ ಸರಳಸ್ವಭಾವದ ನಗುಮೊಗದ ಆ ಘನವಿದ್ವಾಂಸರು ಕನ್ನಡಿಗರಲ್ಲಿ ಒಬ್ಬರು ಆದರ್ಶವ್ಯಕ್ತಿಯಾಗಿದ್ದರು. ಅವರು ಕಣ್ಮರೆಯಾದ್ದರಿಂದ ಕನ್ನಡ ಲೋಕಕ್ಕೆ ಅಪಾರ ನಷ್ಟವುಂಟಾಗಿದೆ.

ಶ್ರೀಯುತರನ್ನು ರಬಕವಿಯಲ್ಲಿ ನಡೆದ ೨೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿ ಕನ್ನಡ ನಾಡು ಗೌರವಿಸಿತು. ಅವರು ಪರಿಷತ್ತಿನ ಆಜೀವ ಸದಸ್ಯರಾಗಿದ್ದರು; ಕೆಲವುಕಾಲ ಕಾರ್ಯ ಸಮಿತಿಯ ಸದಸ್ಯರಾಗಿಯೂ ಸೇವೆಯನ್ನು ಸಲ್ಲಿಸಿದರು. ಅವರ ವಿಯೋಗ ದುಃಖವನ್ನು ಸಹಿಸುವುದಕ್ಕೆ ತಕ್ಕ ಚೈತನ್ಯವನ್ನು ಅವರ ಕುಟುಂಬಕ್ಕೆ ಭಗವಂತನು ಕೊಡಲಿ, ಶ್ರೀಯುತರ ಆತ್ಮಕ್ಕೆ ಶಾಂತಿಯುಂಟಾಗವಂತೆ ಭಗವಂತನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

Copy of the Official Memorandum of the Commissioner for Rural Development in Mysore.

No. R. D. R. 7. C. 2915/ 50-51.

OFFICE OF THE COMMISSIONER FO
RURAL DEVELOPMENT IN MYSORE
Bangalore, Dated 31st March 1951

OFFICIAL MEMORANDUM

REFERENCE : 1. Representation from the President, Kannada Sahitya Parishat, Bangalore regarding patronage to "KANNADA NUDI" the Monthly Journa Published by the Kannada Sahitya Parishat.

2. Letter No. 28, Dated 9th March 1951 from the Kannada Translator t Government recommending Journals to be purchased by the Villag Panchayets in the State.

The Monthly Journal "Kannada Nudi" published by the Kannada Sahitya Parishat Bangalore contains very useful and interesting articles and deserves patronage.

The Deputy Commissioners of Districts are requested to permit the Village Panchayets t purchase the Journal if they so desire.

(Sd.) T. M. AMIR
For Commissioner.

Reg. No. M. 3975

Licenced to Post without Prepayment. License No.6

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜಪೇಟೆ, ಬೆಂಗಳೂರು ೨

ಪರಿಷತ್ತಿನ ಪ್ರಕಟನೆಗಳು

೧.	ಕನ್ನಡ ಬಾವುಟ (ಮೂರನೆಯ ಮುದ್ರಣ)	೨	೦	೦
೨.	ಪಂಪ ಭಾರತದ ಕಥೆ (ವಚನ)	೧	೪	೦
೩.	ಪಂಪ ಭಾರತದ ನಿಘಂಟು	೧	೦	೦
೪.	ಪಂಪ ರಾಮಾಯಣದ ಕಥೆ (ವಚನ)	೦	೧೨	೦
೫.	*ಪಂಪ ರಾಮಾಯಣ (೪ನೆಯ ಆಶ್ವಾಸ)	೦	೮	೦
೬.	ಪಂಪ ರಾಮಾಯಣದ ನಿಘಂಟು	೦	೮	೦
೭.	*ತೊರವೆಯ ರಾಮಾಯಣ (ಬಾಲಕಾಂಡ ಸಂಧಿ ೧೩–೧೬)	೦	೩	೯
೮.	ಸೀತಾಪರಿತ್ಯಾಗ (ಜೈಮಿನಿ ಭಾರತದಿಂದ)	೦	೧೨	೬
೯.	ಜೇಮ್ಸ್ ಏಬ್ರಾಮ್ ಗಾರ್‌ಫೀಲ್ಡನ ಚರಿತ್ರೆ : ಕ್ಯಾಲಿಕೊ ಪ್ರತಿ	೧	೮	೦
	ಸಾದಾ ಪ್ರತಿ	೦	೧೫	೦
೧೦.	ಜ್ಯೋತಿರ್ವಿನೋದಿನಿ	೨	೦	೦
೧೧.	ಹರಿದಾಸರ ಕೃತಿಗಳು (ಸ್ವರಪ್ರಸ್ತಾರ ಸಹಿತ)	೦	೧೫	೦
೧೨.	ಹೂಮಾಲೆ	೦	೧೦	೦
೧೩.	ಕನ್ನಡ ನಾಡಿನ ಚರಿತ್ರೆ: ಭಾಗ ೧ (೨ನೆಯ ಮುದ್ರಣ)	೧	೮	೦
	ಭಾಗ ೨	೧	೧೪	೦
	ಭಾಗ ೩	೧	೦	೦
೧೪.	ವಡ್ಡಾರಾಧನೆ	೨	೮	೦
೧೫.	ಜೈಮಿನಿ ಭಾರತದ ಕನ್ನಡ ಗದ್ಯಾನುವಾದ (ಅಶ್ವಮೇಧಿಕ ಪರ್ವ)	೨	೪	೦
೧೬.	ಹರಿಶ್ಚಂದ್ರನ ರಾಜ್ಯಸಮರ್ಪಣ	೦	೪	೦
೧೭.	ಸರ್ವೋದಯ	೦	೫	೦
೧೮.	ಸೋಮೇಶ್ವರ ಶತಕ	೧	೪	೦
೧೯.	ಸಂಕಲನ	೦	೧೦	೦
೨೦.	ಕುಮಾರವ್ಯಾಸ ದರ್ಶನ	೦	೨	೦
೨೧.	ಕನ್ನಡದಲ್ಲಿ ಸುಧಾರಣೆಗಳು	೦	೬	೦
೨೨.	ಅರುಂಧತಿ	೦	೪	೦
೨೩.	ಚಂದ್ರಹಾಸೋಪಾಖ್ಯಾನ	೦	೧೨	೦

* ಪ್ರತಿಗಳು ಮುಗಿದಿವೆ.

ಪುಸ್ತಕಗಳನ್ನು ಕೊಳ್ಳುವವರಿಗೆ ಕೆಳಗೆ ಕಂಡಂತೆ ರಿಯಾಯಿತಿ (ಕಮಿಷನ್) ಕೊಡಲಾಗುವುದು.

ರೂ. ೧೫/ ಮತ್ತು ಮೇಲ್ಪಟ್ಟ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ಸೇ. ೧೦ರಂತೆ,
ರೂ. ೫೦/ ಮತ್ತು ಮೇಲ್ಪಟ್ಟು ಕೊಳ್ಳುವವರಿಗೆ ಸೇ. ೧೫ ರಂತೆ,
ರೂ. ೧೦೦/ ಮತ್ತು ಮೇಲ್ಪಟ್ಟು ಕೊಳ್ಳುವವರಿಗೆ ಸೇ. ೨೦ ರಂತೆ.

ಕಾ. ಸ. ಧರಣೇಂದ್ರಯ್ಯ
ಗೌ॥ ಕಾರ್ಯದರ್ಶಿಗಳು.

ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಸಿಟಿ. ೧೯೫೨–೧೦೮೦